ಜೈನ ಸಾಹಿತ್ಯಪ್ರಚಾರ ಸಂಘ ಮತ್ತು ಜೈನ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು. ಸನ್ಮತಿ ಗ್ರಂಥಮಾಲಾ ಪುಷ್ಪ ೨೦.

Date - 17-9-80

ಪಂಪಕವಿಯ

ಭರತ-ಬಾಹುಬಲಿ

P-SOMESH-JAIN
GUBBI

ಸಂಗ್ರಾಹಕರು ಮತ್ತು ಸಂಪಾದಕರು :

ಶ್ರೀ ಕೆ. ಎಂ. ಕೃಷ್ಣರಾವ್, ಎಂ. ಎ. ಮತ್ತು

ಶ್ರೀ ಜಿ. ಬ್ರಹ್ಮಪ್ಪ, ಬಿ. ಎ. (ಆನರ್ಸ್)

ದಿ ಆರ್. ಎಂ. ಕಾಲೇಜ್, ದಾವಣಗೆರೆ

ಪ್ರಕಾಶಕರು :

ಶ್ರೀ ಜ್ವಾಲ್ನಮ್ಮನವರು,

ಅದಲಗೆರೆ ಗುಬ್ಬಿ, ತುಮಕೂರು.

9-00

ಜೈನ ಸಾಹಿತ್ಯಪ್ರಚಾರ ಸಂಘ ಮತ್ತು ಜೈನ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು. ಸನ್ಮತಿ ಗ್ರಂಥಮಾಲಾ ಪುಷ್ಪ ೧೮.

ಪಂಪಕವಿಯ

ಭರತ-ಬಾಹುಬಲಿ

ಸಂಗ್ರಾಹಕರು ಮತ್ತು ಸಂಪಾದಕರು :
ಶ್ರೀ ಕೆ. ಎಂ. ಕೃಷ್ಣರಾವ್, ಎಂ. ಎ. ಮತ್ತು
ಶ್ರೀ ಜಿ. ಬ್ರಹ್ಮಪ್ಪ, ಬಿ ಎ. (ಆನರ್ಸ್)
ಡಿ ಆರ್. ಎಂ ಕಾಲೇಜ್, ದಾವಣಗೆರೆ

ಪ್ರಕಾಶಕರು :
ಶ್ರೀ ಜ್ವಾಲಮ್ಮನವರು,
ಅದಲಗೆರೆ ಗುಬ್ಬಿ, ತುಮಕೂರು.

1953

ಮ. ಶ. ೨೬೧೫] [ಬೆಲೆ : ೧—೪—೦

PRINTED AT THE SESHADRI PRESS, MYSORE.
BY M. V. PRANATHARTHYHARAN, PROPRIETOR.

ಮೊದಲಮಾತು

ಪಂಪನ ಆದಿಪುರಾಣದಲ್ಲಿ ಆಕರ್ಷಣೀಯವಾದ ಪ್ರಕರಣ ಭರತ - ಬಾಹುಬಲಿಗಳ ಜೀವನಚಿತ್ರ. ಆ ವಿಸ್ತಾರವಾದ ಚಂಪೂಗ್ರಂಥದಲ್ಲಿ ಈ ಚಿತ್ರ ಅಲ್ಲಲ್ಲೇ ಚದುರಿಹೋಗಿದೆ. ಇದನ್ನು ಒಟ್ಟಿಗೆ ಸೇರಿಸಿ ಒಂದೆಡೆ ಕೊಟ್ಟಿದೆ, ಚಿತ್ರದ ಕಳೆ ಹೆಚ್ಚು ಕನ್ನಡಿಗರಿಗೆ ಇದರ ಸ್ವಾರಸ್ಯವನ್ನು ಸವಿಯಲು ಸುಲಭವಾಗುವುದೆಂಬ ಯೋಚನೆ ನಮಗೆ ಬಂದು ಈ ಕಾರ್ಯವನ್ನು ಕೈಗೊಂಡಿದ್ದಾಯಿತು. ಇದು ಬೆಳಕಿಗೆ ಬರಲು ಮೈಸೂರಿನಲ್ಲಿರುವ ಜೈನಸಾಹಿತ್ಯ ಪ್ರಚಾರ ಸಂಘ ಧೈರ್ಯವಾಗಿ ಹಣ ಸುರಿಯಿತು! ಈ ಸಂಘಕ್ಕೆ ಸಂಘದ ಕಾರ್ಯನಿರ್ವಾಹಕರಾದ ಶ್ರೀ ಎಂ. ಸಿ. ಪದ್ಮನಾಭ ಶರ್ಮರಿಗೆ ನಾವು ಬಹಳ ಕೃತಜ್ಞರು.

ಈ ಸಂಗ್ರಹಕಾರ್ಯ ಸಾಗುತ್ತಿರುವಾಗ ಆಗಾಗ್ಗೆ ಇದನ್ನು ನೋಡಿ ವಿಚಾರಿಸಿ ಪ್ರೋತ್ಸಾಹಿಸಿದ ಕನ್ನಡಿಗರಿಗೆ ಸುಪರಿಚಿತರಾದ ಶ್ರೀ ನಾ. ಕಸ್ತೂರಿ, ಎಂ. ಎ.; ಬಿ. ಎಲ್. ಅವರನ್ನು ನೆನೆಯದಿರಲಾರೆವು. ಇದೇ ರೀತಿ ನಮ್ಮಲ್ಲಿ ಉತ್ಸಾಹ ತುಂಬಿ, ಮೆಚ್ಚಿಗೆಯನ್ನು ವ್ಯಕ್ತಪಡಿಸಿದ ಗೆಳೆಯರಾದ, ದಾವಣಗೆರೆಯಲ್ಲಿ ವಕೀಲರಾಗಿರುವ ಶ್ರೀ ಹೊಸದುರ್ಗ ನಾಭಿರಾಜಯ್ಯ, ಬಿ. ಎ.; ಎಲ್. ಎಲ್. ಬಿ. ಅವರಿಗೂ ನಮ್ಮ ವಂದನೆಗಳು. ಈ ಗ್ರಂಥವನ್ನು ಚೆನ್ನಾಗಿ ಅಚ್ಚುಮಾಡಿ ಕೊಟ್ಟ ಶೇಷಾದ್ರಿ ಪ್ರೆಸ್ ಮಾಲೀಕರಾದ ಶ್ರೀ ಪ್ರಣತಾರ್ಥಿಹರ ಶಾಸ್ತ್ರಿಗಳವರಿಗೂ ನಮ್ಮ ನೆನಕೆಗಳು.

ಡಿ. ಆರ್. ಎಂ. ಕಾಲೇಜ್,
ದಾವಣಗೆರೆ. 2 – 2 – 1953

ಕೆ. ಎಂ. ಕೃಷ್ಣರಾವ್,
ಜಿ. ಬ್ರಹ್ಮಪ್ಪ.

ಅಭಿನಂದನೆ

ಪ್ರಿಯ ಧರ್ಮಬಾಂಧವರೆ,

ನಮ್ಮ ಸಾಹಿತ್ಯ ಸಂಘದಲ್ಲಿ ಹಿಂದೆ ಯೋಗಾಮೃತಶತಕವನ್ನು ಮೈಸೂರಿನ ಬಿ. ಚಂದಪ್ಪ ಪಂಡಿತರವರು ಪ್ರಕಟಿಸಿಕೊಟ್ಟಿದ್ದರು. ಅದೇ ರೀತಿ ಜೈನ ನಿತ್ಯಪೂಜಾದಿ ಸಂಗ್ರಹವನ್ನು ಅದಲಗೆರೆ ಪುಟ್ಟಣ್ಣನವರ ಚಂದಪ್ಪನವರ ಕುಟುಂಬ ಶ್ರೀ ಜ್ವಾಲಮ್ಮನವರು ಮತ್ತು ಅವರ ಸುಪುತ್ರರಾದ ಎ. ಸಿ. ನಾಗರಾಜಯ್ಯನವರು ಪ್ರಕಟಿಸಿದರು. ಅವುಗಳು ಮಾರಾಟವಾಗಿ ಬಂದ ಹಣದಿಂದ ಭರತ–ಬಾಹುಬಲಿ ಎಂಬ ಗ್ರಂಥವನ್ನು ಪ್ರಕಟಿಸಲಾಗಿದೆ. ಶ್ರೀಯುತರುಗಳ ಉದಾರಾಶ್ರಯದಿಂದ ಬಂದ ಹಣವು ಈಗ ಅವರುಗಳ ಹೆಸರಿನಲ್ಲೇ ಎರಡನೆ ಪುಸ್ತಕವು ಪ್ರಕಟವಾಗಿದೆ. ಈ ಧರ್ಮಾತ್ಮರುಗಳಂತೆ ಸರ್ವರೂ ಸಂಘವನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ. ಈ ಗ್ರಂಥವನ್ನು ಆದಿಪುರಾಣದಿಂದ ಸಂಗ್ರಹಿಸಿರುತ್ತಾರೆ ಗ್ರಂಥ ಸಂಗ್ರಹಿಸಿದ ಶ್ರೀ ಕೆ. ಎಂ. ಕೃಷ್ಣರಾವ್ ಮತ್ತು ಜಿ. ಬ್ರಹ್ಮಪ್ಪನವರು. ಶ್ರೀಯುತರುಗಳು ಧಾರ್ಮಿಕಸಂಪನ್ನರೂ, ವಿದ್ಯಾಪ್ರೇಮಿಗಳೂ ಆಗಿ ಉತ್ತಮವಾದ ಸಾಹಿತ್ಯಸೇವೆ ಸಲ್ಲಿಸಿರುತ್ತಾರೆ. ಇದಕ್ಕಾಗಿ ಅನಂತವಾದ ಧನ್ಯವಾದಗಳು. ಈ ಗ್ರಂಥದ ಪ್ರಕಾಶನ ಕಾರ್ಯದಲ್ಲಿ ನೆರವಾದ ಭುವನಹಳ್ಳಿಯ ಶ್ರೀ ಡಿ. ಪದ್ಮನಾಭಶರ್ಮರವರಿಗೆ ಅಭಿವಂದನೆಗಳು. ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಪ್ರಣತಾರ್ಥಿಹರಶಾಸ್ತ್ರಿಗಳವರಿಗೆ ನಮ್ಮ ವಂದನೆಗಳು.

ಅಧ್ಯಕ್ಷರು :
೧೦೫ ಅತಿಬಲ ಮಹಾರಾಜರು

ಉಪಾಧ್ಯಕ್ಷರು :
ಶ್ರೀ ಬಿ. ಎಸ್. ಕುಲಕರ್ಣಿ, ಎಂ. ಎ.
ಧಾರವಾಡ

ಸಂಘದ ಪರವಾಗಿ
ಎಂ. ಸಿ. ಪದ್ಮನಾಭಶರ್ಮ,
ಪ್ರಧಾನ ಕಾರ್ಯದರ್ಶಿ

ಪೀಠಿಕೆ

ಕವಿ ವಿಷಯ

ಪಂಪ ಕನ್ನಡ ಆದಿಕವಿ ಇವನ ಹಿಂದೆ ಕನ್ನಡದಲ್ಲಿ ಗ್ರಂಥಗಳಿದ್ದವೆಂಬುದಕ್ಕೆ ಆಧಾರಗಳಿದ್ದರೂ ಸಾಹಿತ್ಯಕೃತಿಯಾವುದೂ ಇದುವರೆಗೂ ದೊರೆತಿಲ್ಲ. ಸದ್ಯಕ್ಕೆ ಯಾವುದಾದರೂ ಗ್ರಂಥ ಸಿಗುವವರೆಗೂ ಕನ್ನಡ ಸಾಹಿತ್ಯಕ್ಕೆ ಪಂಪನೇ ಕಾಲದೃಷ್ಟಿಯಿಂದಲೂ ಅರ್ಹತೆದೃಷ್ಟಿಯಿಂದಲೂ ಅಗ್ರಕವಿ, ಆದಿಕವಿ ಎಂದು ಹೇಳಬಹುದು.

ಪಂಪನ ಜೀವನ ಪರಿಚಯವನ್ನು ಮಾಡಿಕೊಳ್ಳುವುದಕ್ಕೆ ಅವನ ಕೃತಿಗಳೇ ನಮಗೆ ಸಾಮಗ್ರಿಯನ್ನೊದಗಿಸುತ್ತವೆ.

ಕೃಷ್ಣಾ ಗೋದಾವರೀ ಮುಖದಲ್ಲಿ ವೆಂಗಿ ಮಂಡಳವೆಂಬ ನಾಡು. ಇದರಲ್ಲಿ ವೆಂಗಿಪಮಿ ಎಂಬ ಗ್ರಾಮ ಅಲ್ಲಿ ವತ್ಸಗೋತ್ರದ ಸೋಮಯಾಜಿ ಪ್ರಖ್ಯಾತನಾಗಿದ್ದ, ಯಜ್ಞಯಾಗಾದಿಗಳನ್ನು ಮಾಡಿಕೊಂಡು ಕೀರ್ತಿಹೊಂದಿದ್ದ ಸದ್ವಿಪ್ರನೀತ. ಇವನ ವಂಶದಲ್ಲಿ ಮುಂದೆ ಬಂದ ಮೂರು ತಲೆಮಾರು ಅಭಿಮಾನಚಂದ್ರ, ಕೊಮರಯ್ಯ ಮತ್ತು ಅಭಿರಾಮದೇವರಾಯ ಅಭಿರಾಮದೇವರಾಯನಿಗೆ ಜೈನಧರ್ಮದಲ್ಲಿ ಮಮತೆ ಹುಟ್ಟಿ ಜೈನನಾದ. ಈತನ ಮಗನೇ ನಮ್ಮ ಆದಿಕವಿ. ಪಂಪ ದೇವೇಂದ್ರಮುನಿಗಳ ಬಳಿ ಕಲಿತು ಉಭಯ ಭಾಷಾ ಪಂಡಿತನಾದ. ಕೇವಲ ಪಾಂಡಿತ್ಯ ಮಾತ್ರವೇ ಅಲ್ಲದೆ ಇವನಿಗೆ ದೈವದತ್ತವಾದ ಪ್ರತಿಭೆಯೂ ಇದ್ದಿತು. ಅಲ್ಲದೆ ಪಂಪನು ಕವಿಯೂ, ಕಲಿಯೂ ಆಗಿದ್ದನು. ಇವನಿಗೆ ಸರಸ್ವತಿ ಲಕ್ಷ್ಮೀ ಇಬ್ಬರ ಕೃಪೆಯೂ ಇದ್ದಿತು ಎಂದು ತೋರುತ್ತದೆ

ಪಂಪಕವಿ ಕನ್ನಡ ಕಾವ್ಯಲೋಕಕ್ಕೆ ಎರಡು ಮಹತ್ಕೃತಿಗಳನ್ನು ಕೊಟ್ಟು ಹೋಗಿದ್ದಾನೆ ಎರಡೂ ಚಂಪೂಗ್ರಂಥಗಳು ಕ್ರಿ. ಶ. ೯೪೧ ರಲ್ಲಿ ಎಂದರೆ ತನ್ನ ಮೂವತ್ತೊಂಬತ್ತನೇ ವಯಸ್ಸಿನಲ್ಲಿ ಪ್ರಥಮ ತೀರ್ಥೇಶನನ್ನು ಕುರಿತು ‘ಆದಿಪುರಾಣ’ ವೆಂಬ ಆಗಮಗ್ರಂಥವನ್ನು ರಸವತ್ತಾಗಿ ರಚಿಸಿದನು. ಕೆಲವು ವರ್ಷಗಳ ಅನಂತರ ಚಾಳುಕ್ಯ ಸಾಮಂತರಾಜನಾದ

ಅರಿಕೇಸರಿಗೂ ಪಂಪನಿಗೂ ಮೈತ್ರಿ ಬೆಳೆದು, ಅವನ ಪ್ರೀತ್ಯರ್ಥವಾಗಿ 'ವಿಕ್ರಮಾರ್ಜುನ ವಿಜಯ'ವನ್ನು ರಚಿಸಿದನು ಇವನ ಕಾವ್ಯಮಾರ್ಗವನ್ನೂ, ಶೈಲಿಯನ್ನೂ ಸುಮಾರು ಮೂರು ಶತಮಾನಗಳ ಕಾಲ ಅನೇಕ ಕವಿಗಳು ಅನುಕರಿಸಿ ಅನುಸರಿಸಿ ಇವನ ಕೀರ್ತಿಗೆ ಕಳಶವಿಟ್ಟರು.

ಇವನ ಆದಿಪುರಾಣ ಕಾವ್ಯದಿಂದ ಈ ಭರತ-ಬಾಹುಬಲಿ ಕಥೆಯನ್ನು ಸಂಗ್ರಹಿಸಿದೆ. ಆದಿಪುರಾಣ ಜೈನಪುರಾಣಗಳಲ್ಲೆಲ್ಲಾ ರಮಣೀಯವಾದ ಕಾವ್ಯ. ಇಲ್ಲಿ ಈ ಕಥಾಭಾಗವಲ್ಲದೆ ಇನ್ನೂ ಕೆಲವು ಸ್ವಾರಸ್ಯವಾದ ಪ್ರಸಂಗಗಳೂ ಉಂಟು.

ಆ ಬೃಹದ್ಗ್ರಂಥದಿಂದ ಈ ಭಾಗವನ್ನು ಸಂಗ್ರಹಿಸುವಾಗ ಕಷ್ಟವೇ ಆಯಿತೆಂದು ಹೇಳಬೇಕಾಗಿದೆ ಮಧ್ಯೆಮಧ್ಯೆ ಲಂಬಿತವಾದ, ಕ್ಲಿಷ್ಟವಾದ ಭಾಗಗಳನ್ನು ಒಟ್ಟು ಕಥೆಗೆ ಕುಂದು ಬಾರದಂತೆಯೂ, ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಂಬಂಧ ತಪ್ಪದಂತೆಯೂ, ಕಥೆಯ ಸ್ವಾರಸ್ಯ, ಓಟ ಕೆಡದಂತೆಯೂ, ಸಾಧ್ಯವಾದ ಮಟ್ಟಿಗೂ ಗಮನವಿಟ್ಟು ಸಂಗ್ರಹಿಸಿದ್ದೇವೆ. ಮಧ್ಯೆ ಕೆಲವು ಕಡೆ ಅಷ್ಟು ಪ್ರಾಮುಖ್ಯವಲ್ಲದ ಭಾಗಕ್ಕೆ ಅಲ್ಲಿಯ ವಿಷಯವನ್ನೇ ಸಂಗ್ರಹಿಸಿ ಹೊಸಗನ್ನಡ ಗದ್ಯದಲ್ಲಿ ಕೊಟ್ಟು ಕಥೆಯನ್ನು ಮುಂದಕ್ಕೆ ಒಯ್ದಿದ್ದೇವೆ.

ಪಂಪಕವಿಯ ಪರಿಚಯವೆಂಬ ಮೊದಲನೆಯ ಭಾಗವನ್ನು ಕೊಡುವಾಗ ಆದಿಪುರಾಣದಿಂದಲ್ಲದೆ ಪಂಪನ ವಿಕ್ರಮಾರ್ಜುನ ವಿಜಯದಿಂದಲೂ ಕೆಲವು ಪದ್ಯಗಳನ್ನು ಆಗಿಸಿ ಕೊಟ್ಟಿರುತ್ತೇವೆ

ಕಥಾಸಾರಾಂಶ

ಭರತ-ಬಾಹುಬಲಿ ಗ್ರಂಥದ ಕಥೆ ಹೀಗಿದೆ

ಮನು ಪರಂಪರೆಯಲ್ಲಿ ಹದಿನಾಲ್ಕನೆಯವನು ನಾಭಿರಾಜ. ಈತನ ಪತ್ನಿ ಮರುದೇವಿ ಈ ಪುಣ್ಯದಂಪತಿಗಳಿಗೆ ತೀರ್ಥಂಕರನಾಗುವ ಪುತ್ರನು

ದಯಿಸುವನೆಂಬುದನ್ನು ಅರಿತ ದೇವೇಂದ್ರನು ಭೂಮಿಗೆ ಬಂದು ಅಯೋಧ್ಯಾಪುರವನ್ನು ನಿರ್ಮಿಸಿ ಅಲ್ಲಿ ತೀರ್ಥಂಕರೋದಯಕ್ಕೆ ಆರು ತಿಂಗಳು ಮುಂಚಿತವಾಗಿ ರತ್ನವೃಷ್ಟಿಯನ್ನು ಕರೆಯುತ್ತಾನೆ. ಇವರ ಮಗುವಿಗೆ ವೃಷಭನೆಂದು ಹೆಸರು. ಮಗು ಬೆಳೆದ ಮೇಲೆ ಆತನನ್ನೊಪ್ಪಿಸಿ ಯಶಸ್ವತೀ ದೇವಿ ಭರತನೇ ಮುಂತಾದ ನೂರು ಜನ ಗಂಡು ಮಕ್ಕಳನ್ನೂ, ಬ್ರಾಹ್ಮೀ ಎಂಬೊಬ್ಬ ಮಗಳನ್ನೂ ಪಡೆದಳು. ಸುನಂದಾದೇವಿಯ ಹೊಟ್ಟೆಯಲ್ಲಿ ಬಾಹುಬಲಿ, ಸೌಂದರಿ ಎಂಬ ಇಬ್ಬರು ಮಕ್ಕಳಾದರು.

ಭರತೇಶನು ಬಾಲ್ಯದಲ್ಲೇ ವೀರೋಚಿತ ಕಾರ್ಯಗಳಲ್ಲಿ ತೊಡಗಿ ತಂದೆ ತಾಯಿಗಳ ಮನಸ್ಸಿಗೆ ಹರ್ಷವನ್ನುಂಟುಮಾಡುತ್ತಿದ್ದನು. ಮಕ್ಕಳ ಬಾಲಲೀಲೆಯನ್ನು ನೋಡಿ ಬಂಧುಮಿತ್ರರಾದಿಯಾಗಿ ತಾಯಿ ತಂದೆಗಳು ಆನಂದತುಂದಿಲರಾದರು. ಬಾಹುಬಲಿಯ ರೂಪು ಮನೋಮೋಹಕವಾಗಿತ್ತು ಇದರಿಂದ ಕಾಮದೇವನೆಂಬ ಹೆಸರಿಗೆ ಅರ್ಹನಾದನು. ಮಕ್ಕಳೆಲ್ಲರಿಗೂ ಅವರವರ ಪ್ರವೃತ್ತಿಗನುಗುಣವಾಗಿ ವಿದ್ಯಾಭ್ಯಾಸ ಸಾಂಗೋಪಾಂಗವಾಗಿ ನೆರವೇರಿತು.

ವೃಷಭದೇವನೆಂದರೆ ರಸಿಕಶಿಖಾಮಣಿ ಈತನ ಬಾಳೆಲ್ಲ ಒಂದು ಭೋಗಸಾಗರವಿದ್ದಂತೆ !

ಒಮ್ಮೆ ಸಿಂಹಾಸನದಲ್ಲಿ ಮಂಡಿಸಿ, ಅಕ್ಕಪಕ್ಕಗಳಲ್ಲಿ ಮಕ್ಕಳನ್ನು ಕೂಡಿಸಿಕೊಂಡು ಸುತ್ತಮುತ್ತ ನೆರೆದಿದ್ದ ಬಂಧುಮಿತ್ರರನ್ನು ನೋಡಿ ವೃಷಭದೇವ ಸಂತೋಷದಿಂದಿದ್ದಾಗ ದೇವೇಂದ್ರನು ಆಸ್ಥಾನಕ್ಕೆ ಬಂದು ಭಕ್ತಿಯಿಂದ ವಂದಿಸಿ "ದೇವ ಇಲ್ಲಿ ಗಾನ, ನರ್ತನಗಳಿಂದ ತಮ್ಮನ್ನು ಮೆಚ್ಚಿಸಬೇಕೆಂದು ದೇವನಾರೀವೃಂದ ಬಂದಿದೆ. ಕಲಾಪ್ರಸಂಗಕ್ಕೆ ಅನುಮತಿಯನ್ನು ಕೊಡು" ಎಂದು ಕೇಳಿಕೊಂಡನು. "ನಿಮ್ಮ ಆನಂದವೇ ನಮ್ಮ ಆನಂದ" ಎಂದು ವೃಷಭನಾಥನು ಹೇಳಲು ಅಮರಾಂಗನೆಯರು ಮದನನ ಬಿಲ್ಲೊಳು, ರತಿಯು ಬೀಣೆಯೊಳು, ಎಸೆವ ದನಿಯುಳಿಸಿ, ಸುರ ತೂರ್ಯರವದಲ್ಲಿ ಪಾಡಿದರು. ಇವರಲ್ಲಿ ನೀಲಾಂಜನೆಯೆಂಬುವಳ ಗಾನ, ರೂಪು, ನರ್ತನಗಳು ಎಲ್ಲರ ಮನಸ್ಸನ್ನೊ ಸೆರೆಹಿಡಿದುವು. ಈಕೆ ಇಂದ್ರ

ನಿಂದ ನಿತ್ಯವೂ ಮೆಚ್ಚನ್ನು ಪಡೆಯುತ್ತಿದ್ದ ಗಣಿಕಾರತ್ನ. ಕಬ್ಬಿನ ಬಿಲ್ಲಿಂದ ಮಸೆದಹೂವಿನ ಬಾಣ ಪೊರಮಡುವಂತೆ ನೀಲಾಂಜನೆ ನಾಟ್ಯರಂಗವನ್ನೂ, ಜನಮನೋರಂಗವನ್ನೂ, ಏಕಕಾಲದಲ್ಲಿ ಹೊಕ್ಕಳು.

ಮುಚ್ಚಿದ್ದ ಮುಸುಕನ್ನು ಓರೆಮಾಡಿ ಸಭಾಂಗಣದಲ್ಲಿ ಆಕೆ ಚೆಲ್ಲಿದ ಪುಷ್ಪರಾಶಿಯಲ್ಲಿ ಒಂದೊಂದು ಹೂವೂ 'ನನೆಯಂ ಬಾಗಿ' ಪ್ರೇಕ್ಷಕರ ದೃಢಚಿತ್ತವನ್ನು ಭೇದಿಸಿತು ಭಾರತಿ, ಸಾತ್ವಕಿ, ಕೈಶಿಕೆ, ಆರಭಟೆಗಳೆಂಬ ವಿವಿಧ ನಾಟ್ಯಶಾಸ್ತ್ರಾಂಗಗಳಲ್ಲಿ ಪರಿಣತಳಾದ ನೀಲಾಂಜನೆ ವೃಷಭನಾಥನ ಮನಸ್ಸನ್ನೂ ಅಂದು ಸೂರೆಗೊಂಡಳು. ಅವಳ ಕಡೆಗಣ್ಣೋಟದಿಂದ ಬಂದ ಬೆಳದಿಂಗಳಲ್ಲಿ ಆಸ್ಥಾನ ಮುಳುಗಿತು. ಆಕೆಯ ನರ್ತನವೆಂದರೆ ಮದನರಾಜ್ಯವಿಲಾಸವಿದ್ದಂತೆ. ಆಕೆಯ ನರ್ತನದ ವಿವಿಧ ಭಂಗಿಗಳು ರಸಿಕಲೋಕದ ಮನಸ್ಸನ್ನು ಸೆರೆಹಿಡಿದುವು ವೃಷಭನಾಥ ಸುರಗಣಿಕಾ ನಾಟ್ಯರಸದಲ್ಲಿ ತೇಲಿಹೋಗುತ್ತಿರುವಾಗ ಇದ್ದಕ್ಕಿದ್ದಂತೆ ನೀಲಾಂಜನೆಯ ಆಯುಸ್ಸು ಮುಗಿದು ಬಂದು 'ಆ ಮಧುರಾಕಾರ ಲತಾಕೋಮಳೆ ರಂಗದೊಳ್ ಅದೃಶ್ಯೆಯಾದಳ್ !' ರಸಿಕರಿಗೆ ರಸಭಂಗವಾಗದಿರಲೆಂದು ಇಂದ್ರನು ಯಾರಿಗೂ ತಿಳಿಯದಂತೆ ಚಮತ್ಕಾರವಾಗಿ ನೀಲಾಂಜನೆಯ ಸ್ಥಳದಲ್ಲಿ ಆಕೆಯ ಪ್ರತಿರೂಪವೆಂಬಂತ್ತಿದ್ದ ಮತ್ತೊಬ್ಬ ಗಣಿಕೆಯನ್ನು ನಿರ್ಮಿಸಿ ನರ್ತನ ಮುಂದುವರಿಯುವಂತೆ ಯೋಜಿಸಿದನು.

ಆದರೆ ಈ ದುರಂತ ಚಾಣಾಕ್ಷನಾದ ವೃಷಭನಾಥನಿಗೆ ತಕ್ಷಣವೇ ಹೊಳೆದು ಸಂಸಾರದ ಅನಿತ್ಯತೆಯ ಅರಿವಾಯಿತು. ಇದೇ ಅವನ ವೈರಾಗ್ಯಕ್ಕೆ ಆದಿಯಾಯಿತು. "ಎಷ್ಟೋ ಜನ್ಮಗಳನ್ನೆತ್ತಿದ್ದಾಯಿತು, ಎಷ್ಟೋ ಬಾರಿ ಸತ್ತಿದ್ದೂ ಆಯಿತು, ವಿಷಯಾನಲಕ್ಕೆ ಸಿಕ್ಕಿ ತಹತಹಿಸಿದ್ದೂ ಆಯಿತು. ಇನ್ನು ಭವಸಾಗರದಲ್ಲಿ ಅಲೆಯಲಾರೆ' ಎಂದು ಪ್ರಲಾಪಿಸುತ್ತಿರುವಾಗ ದೇವೇಂದ್ರಾದಿಗಳು ಈತನಲ್ಲಿಗೆ ಬಂದು "ಮುಕುತಿವನಿತೆ ನಿನಗಾಗಿ ಕಾಯುತ್ತಿರುವಳು. ಮೂರು ಲೋಕಗಳೂ ನಿನ್ನ ಮುಕ್ತಿಯನ್ನು ನಿರೀಕ್ಷಿಸುತ್ತಿದೆ. ದೇವಾ ತ್ವರೆಮಾಡು" ಎಂದು ಪರಿನಿಷ್ಕ್ರಮಣ ಕಲ್ಯಾಣೋದ್ಯುಕ್ತರಾದರು. ಇತ್ತ ಭರತೇಶನ ರಾಜ್ಯಾಭಿಷೇಕವೂ ಆಯಿತು. ಬಾಹುಬಲಿಯನ್ನು

ಯುವರಾಜಪದವಿಯಲ್ಲಿರಿಸಿ ಉಳಿದ ಮಕ್ಕಳಿಗೂ ಸಂಪತ್ತನಿತ್ತು ಆದಿದೇವ ನಾದ ವೃಷಭನಾಥನು ತಪೋಭೂಮಿಗಭಿಮುಖನಾದನು.

ಕೆಲ ಕಾಲಾನಂತರ ಆದಿದೇವನಿಗೆ ಕೇವಲ ಜ್ಞಾನವಾದುದನ್ನು ಭರ ತೇಶ್ವರನು ಕೇಳಿ ಸಂತಸಗೊಳ್ಳುವ ಸಮಯಕ್ಕೆ ಸರಿಯಾಗಿ, ಪುತ್ರೋತ್ಸ ವವೂ ಆಯಿತು. ಮತ್ತೊಂದೆಡೆ ಅವನ ಆಯುಧಾಗಾರದಲ್ಲಿ ಅಪೂರ್ವ ಚಕ್ರೋದ್ಭವವೂ ಆಯಿತು. ರಾಜರಾಜನಾದ ಭರತನು ಬಂಧುಮಿತ್ರರ ಸಮೇತ ತನ್ನ ತಂದೆಯ ಸಮವಸರಣಕ್ಕೆ ಹೋಗಿ ಮೂರು ಲೋಕದೊಡೆ ಯನಾಗಿದ್ದ ಆದಿದೇವನನ್ನು ಪೂಜಿಸಿ ಅಯೋಧ್ಯೆಗೆ ಮರಳಿ ಪುತ್ರನಿಗೆ ಜಾತಕರ್ಮವನ್ನು ನೆರವೇರಿಸಿ ಚಕ್ರರತ್ನವನ್ನು ಪೂಜಿಸಿ ದಿಗ್ವಿಜಯದ ಯೋಚನೆಯನ್ನು ಮಾಡಿದನು.

ಹೀಗೆ ಭರತನು ಷಡಂಗಸೇನೆಯನ್ನು ಕಟ್ಟಿಕೊಂಡು ಎಂಟು ಅಜೀವ ರತ್ನಗಳನ್ನೂ, ಆರು ಜೀವರತ್ನಗಳನ್ನೂ ಹೊಂದಿ ತನ್ನನ್ನು ಸೋಲಿಸುವ ರಾರಿಲ್ಲವೆಂಬ ನಿರ್ಭಯದಿಂದ ದಿಗ್ವಿಜಯ ಪ್ರಾರಂಭಿಸಿದನು. ಭೂಮ್ಯಾ ಕಾಶಗಳೆರಡೂ ಭರತೇಶನ ಸೇನೆಗೆ ಸಾಲದಾಯಿತು.

ಪ್ರಯಾಣ ಮಾಡುತ್ತ ಗಂಗಾನದಿಯೆಡೆಗೆ ಭರತೇಶ ಬಂದು ಆ ದಿವ್ಯ ನದಿಯನ್ನು ಕಂಡು ಪುಲಕಿತನಾಗಿ ಅಲ್ಲಿಯ ಪ್ರಕೃತಿ ಸೌಂದರ್ಯವನ್ನು ಸವಿಯಲೋಸುಗ ಬೀಡುಬಿಟ್ಟನು.

ಈತನ ರಾಣಿವಾಸವೂ ಜೊತೆಯಲ್ಲಿತ್ತು. ಅವರೂ ಸಹ ಗಂಗೆಯ ಸೊಬಗನ್ನು ಕಂಡು ಹರ್ಷಗೊಂಡು ಅಲ್ಲಲ್ಲೇ ಅಡ್ಡಾಡುವಾಗ ದುಂಬಿಗಳು ಅವರ 'ಸುಯ್ಯ ಕಂಪಿಗೆ' ಮುಸುರಿದುವಂತೆ ! ಈ ವನಿತೆಯರು ವನದ ಅರಗಿಳಿಗಳೊಡನೆ ಇನಿಮಾತುಗಳನ್ನಾಡಿ ಅಲ್ಲಿಯ ಕೋಗಿಲೆಗಳನ್ನು ಕೆಣಕಿ ಕೂಗಿಸಿ, ಅರೆಮುಚ್ಚಿದ ಅಲರುಗಳನ್ನು ಮುಟ್ಟಿ ಅರಳಿಸಿ, ಮುದ್ದಾಡಿ ಮುಡಿಗೇರಿಸುತ್ತಿದ್ದರಂತೆ ! ಆ ವನಲತೆಗಳು ಕೂಡ ಲತಾಂಗಿಯರ ಕಡೆ ಬಾಗಿ ಅವರ ಸ್ನೇಹಕ್ಕೆ ಹಾತೊರೆಯುತ್ತಿದ್ದುವಂತೆ ! ಅಲ್ಲಿಯ ಪುಷ್ಪರಾಜಿ ಇವರೊಂದಿಗೆ ಮಾತನಾಡುವ ಆಸೆಯಿದ್ದರೂ ನಸುನಾಚಿ ಬಾಗಿ ಬಳುಕಿ ಮೇಲೇಳುತ್ತಿದ್ದುವಂತೆ !

ವನವಿಹಾರದಿಂದ ತೃಪ್ತಿ ಹೊಂದಿದ ಲಲಿತಾಂಗಿಯರೊಡನೆ ಭರತ ರಾಜ ಜಲಕ್ರೀಡಾ ವಿನೋದದಲ್ಲಿ ತಲ್ಲೀನನಾದನು. ಮಂದರ ಪರ್ವತದ ಮೇಲೆ ಸುರಸುಂದರಿಯರು ಹಾಲಿನ ಮಳೆಗರೆವಂತೆ ವನಿತಾವೃಂದ ಭರತೇಶನ ಮೇಲೆ ಗಂಗಾಸಲಿಲವನ್ನು ಸುರಿದರಂತೆ !

ಹೀಗೆ ಇವರ ದಿಗ್ವಿಜಯದ ಸುಖಪ್ರವಾಸ ಸುಖವಾಗಿ ಸಾಗಿತು. ಮಧ್ಯೆಮಧ್ಯೆ ಅನೇಕ ರಾಜರು ಈತನಿಗೆರಗಿ ಯುದ್ಧದ ಗೋಜಿಗೆ ಹೋಗದೆ ಕಾಣಿಕೆಗಳನ್ನು ಅರ್ಪಿಸುತ್ತಿದ್ದರು.

ಹೀಗೆ ಸೈನ್ಯ ಸಾಗುತ್ತಿರುವಾಗ ವಜ್ರವೇದಿಕೆಯೆಂಬ ಮಹಾಪರ್ವತವೂ, ದಾಟಲಸದಳವಾದ ಸಾಗರವೂ ಇವರನ್ನು ತಡೆದವು ಭರತ ಇವನ್ನು ನೋಡಿ ಅಂಜಲಿಲ್ಲ. ಈ ವಜ್ರವೇದಿಕೆ ನನಗೆ ಬಂಡು ಹೊಸ್ತಿಲಿದ್ದಂತೆ, ಈ ಮಹಾಸಾಗರ ಗೋಷ್ಪಾದದಂತೆ' ಎಂದು ಕೊಂಡನಂತೆ. ಇವೆರಡನ್ನೂ ದಾಟಿ ಮಾಗಧನನ್ನು ಕಟ್ಟಬರುತ್ತೇನೆಯೋ ಎಂದು ಯೋಚಿಸಿ, ಮೂರು ದಿನ ಉಪವಾಸವ್ರತವನ್ನು ಕೈಗೊಂಡು ದರ್ಭಶಯನದಲ್ಲಿ ಮಲಗಿ ಪಂಚಪರಮೇಷ್ಠಿಗಳನ್ನು ಪೂಜಿಸಿ ನಾಲ್ಕನೆಯ ದಿನ ದಿವ್ಯಾಸ್ತ್ರಗಳ ಸಮೇತ ಗಿಳಿಯ ಬಣ್ಣದ ಕುದುರೆಗಳುಳ್ಳ ಜಿತಂಜಯ ಎಂಬ ರಥವನ್ನೇರಿ ಲೀಲಾಜಾಲವಾಗಿ ದಾಟುವಂತೆ ಆ ಪರ್ವತವನ್ನೂ, ಸಾಗರವನ್ನೂ ಈಕ್ಷಿಸಿದನು.

ನಿರಾಯಾಸವಾಗಿ ಭರತನ ರಥ ಸಾಗರದಲ್ಲಿ ಹನ್ನೆರಡು ಗಾವುದ ಹರಿದುಇದ್ದಕ್ಕಿದ್ದಂತೆಯೇ ನಿಂತುಹೋದುದರಿಂದ ಆಶ್ಚರ್ಯವೂ ಕೋಪವೂ ಏಕಕಾಲದಲ್ಲಿ ಬಂದು ಭರತೇಶನು ಸಮುದ್ರವನ್ನೇ ಆಪೋಶನ ತೆಗೆದುಕೊಳ್ಳುವಂತೆ ಗರ್ಜಿಸಿದನು. ರಥದ ತಡೆಗೆ ಮಾಗಧನೇ ಕಾರಣನೆಂದು ತಿಳಿದ ಮೇಲೆ ತನ್ನ ಬಿಲ್ಲನ್ನು ಜೇವೊಡೆದು ಅಮೋಘಬಾಣವನ್ನು ಚೆರ್ಕೊಂಡು ಪ್ರಯೋಗಿಸಿದನು. ಪ್ರಳಯಕಾಲದ ಬೆಂಕಿಯಂತೆ ಭೀಕರಾಕಾರದಿಂದ ಆ ಬಾಣ ಮಾಗಧನ ಆಸ್ಥಾನದ ಮಂಟಪಕ್ಕೆ ಬಂದು ತಾಗಿತು. ಚಕಿತನಾದ ಮಾಗಧ ಬಾಣವನ್ನವಲೋಕಿಸಿದಾಗ "ಭರತೇಶನಿಗೆ ಬಂದು ಎರಗು" ಎಂದಿದ್ದುದನ್ನು ಕಂಡು ಕೆರಳಿ ಪ್ರತೀಕಾರಕ್ಕೆ ಹಾತೊರೆದಾಗ ಅಲ್ಲಿದ್ದ ಕುಲವೃದ್ಧರು. "ಭರತೇಶ ಸಾಮಾನ್ಯನಲ್ಲ. ಈ ಯುಗದ ಚಕ್ರ

ವರ್ತಿ. ಆರು ಖಂಡಗಳೂ ಅವನಿಗೆ ಮಣಿಯಲೇ ಬೇಕು ಮರುಮಾತಾ ಡದೆ ನೀನು ಶರಣಾದರೇನೆ ನಿನಗೂ ನಿನ್ನ ಕುಲಕ್ಕೂ ಕ್ಷೇಮ” ಎಂದು ಉಪದೇಶಿಸಿದಾಗ ಮಾಗಧ ಭರತೇಶನಲ್ಲಿಗೆ ಬಂದು ಕಾಣಿಕೆಯಿತ್ತು ಆಶ್ರಿತ ನಾದನು.

ವರತನು ಮತ್ತು ಪ್ರಭಾಸಾಮರರೂ ಚಕ್ರವರ್ತಿಯೆಡೆಗೆ ಬಂದು ಎರಗಿ ಭರತನ ಚಕ್ರವರ್ತಿತ್ವವನ್ನು ಒಪ್ಪಿಕೊಂಡರು. ಮುಂದೆ ವಿಜ ಯಾರ್ಧ ಪರ್ವತದ ಬಳಿಗೆ ಬಂದಾಗ, ವಿಜಯಾರ್ಧಕುಮಾರನೂ ಭರತೇ ಶನನ್ನು ಕಂಡು ಅಪೂರ್ವರತ್ನಗಳನ್ನಿತ್ತು ಸನ್ಮಾನಿಸಿದನು. ಕೃತಮಾಳ ನೆಂಬ ರಾಜನು ಚಕ್ರೇಶನನ್ನು ಕಂಡು ನಮ್ರನಾಗಿ ತಮಿಸ್ರಗುಹಾ ಪ್ರವೇ ಶೋಪಾಯವನ್ನು ತಿಳಿಸಿದನು.

ಕೆಲವು ದಿನಗಳ ಪ್ರಯಾಣವಾದ ಮೇಲೆ ಹನ್ನೆರಡು ಯೋಜನ ವಿಸ್ತಾರ, ಎಂಟು ಯೋಜನ ಎತ್ತರ ಉಳ್ಳ ವಜ್ರಕವಾಟಪುಟ ಭರತನ ಮುನ್ನಡೆಯನ್ನು ಅಡ್ಡಗಟ್ಟಿತು. ಆಗ ಚಕ್ರವರ್ತಿಯ ರಥಿನೀಪತಿಯು ಭರತನ ಆಜ್ಞೆಯಂತೆ ದಂಡರತ್ನದಿಂದ ಆ ವಜ್ರಕವಾಟವನ್ನು ತಾಟಿಸಿದಾಗ ಅದು ಪ್ರಳಯ ಘನಘಟಾಟೋಪ ಮಾಡುತ್ತ ಪುಡಿಪುಡಿಯಾಗಿ ಜ್ವಾಲಾ ಮುಖಿಯಂತೆ ಬೆಂಕಿಯನ್ನುಗುಳಿತು. ಆದರೂ ಈ ಬೆಂಕಿ ಬಲಿಷ್ಠನಾದ ಭರತನನ್ನು ಏನೂ ಮಾಡಲಾರದೇ ಹೋಯಿತು. ಮುಂದೆ ಬಂದ ಘೋರಾಂಧಕಾರದಿಂದ ತುಂಬಿದ ತಮಿಸ್ರ ಗುಹೆಯ ಗೋಡೆಯಲ್ಲಿ ಕಾಕಿಣಿ ಮತ್ತು ಮಣಿ ಎಂಬ ರತ್ನಗಳಿಂದ ಭರತೇಶ ಸೂರ್ಯ ಚಂದ್ರರನ್ನು ಬರೆಸಿ ದಾಗ ಅಲ್ಲಿನ ಕತ್ತಲೆಲ್ಲಾ ಕರಗಿ ಇವರ ಪಯಣ ಸುಗಮವಾಗಿ ಸಾಗಿತು. ಈ ಗುಹೆಯಿಂದ ಪಾರಾಗಿ ಬಂದ ಭರತೇಶನನ್ನು ಚಿಳಾತಾವರ್ತರೆಂಬ ಮ್ಲೇಚ್ಛ ರಾಜರು ತಡೆದು, ಸಿಡಿಲು ಮಿಂಚುಗಳ ಮಳೆ ಸುರಿಸಿದಾಗ ಚರ್ಮ ರತ್ನವನ್ನು ಹಾಸಿ, ಛತ್ರರತ್ನವನ್ನು ಎತ್ತಿ ಹಿಡಿದು, ಭರತಚಕ್ರವರ್ತಿ ತನ್ನ ವರನ್ನೆಲ್ಲಾ ಕಾಪಾಡಿದನು. ಈ ಯುದ್ಧದಲ್ಲೂ ಭರತನಿಗೇ ಜಯ ಲಭಿಸಿತು.

ಎಲ್ಲೆಲ್ಲಿಯೂ ಜಯಶೀಲನಾಗಿ ಭರತೇಶ ವೃಷಭಾದ್ರಿಯ ಬಳಿಗೆ ಬಂದು ಆ ಪರ್ವತದಲ್ಲಿ ತನ್ನ ಹೆಸರನ್ನು ಚಿರಸ್ಥಾಯಿಯಾಗುವಂತೆ ಕಡೆಸ

ಬೇಕೆಂದು ಸರಿಯಾದ ಸ್ಥಳವನ್ನು ಹುಡುಕತೊಡಗಿದಾಗ ಪರ್ವತದ ತುಂಬ ಹಿಂದಿನ ರಾಜರುಗಳ ಪ್ರಶಸ್ತಿಗಳೇ ತುಂಬಿದ್ದುದನ್ನು ಕಂಡು ಭರತನ ಗರ್ವರಸವೆಲ್ಲ ಸೋರಿಹೋಯಿತು. ಆದರೂ ಅಲ್ಲಿದ್ದ ಕೆಲವು ಹೆಸರುಗಳನ್ನಳಿಸಿ ತನ್ನ ಕೀರ್ತಿಯನ್ನು ಕೆತ್ತಿಸಿದನು.

ಅಲ್ಲಿಂದ ಮುಂದೆ ದಕ್ಷಿಣಾಭಿಮುಖನಾಗಿ ಹೊರಟಾಗ ಭರತೇಶನಲ್ಲಿಗೆ ವಿದ್ಯಾಧರರಾಜನಾದ ನಮಿವಿನಮಿಗಳು ಬಂದು, ತಮ್ಮ ಸಹೋದರಿಯಾದ ಸುಭದ್ರೆಯನ್ನಿತ್ತು ವಿಜೃಂಭಣೆಯಿಂದ ವಿವಾಹವೆಸಗಿದನು.

ಭರತೇಶ್ವರ ಹೀಗೆ ಸಿದ್ಧ ದಿಗ್ವಿಜಯಿಯಾಗಿ ಕೈಲಾಸಪರ್ವತದೆಡೆಗೆ ಬಂದು ತಪ್ಪಲಲ್ಲಿ ತನ್ನ ಕಟಕವನ್ನಿಸಿರಿ ಪರಿಮಿತ ಪರಿಜನರನ್ನೊಡಗೊಂಡು ಕೈಲಾಸವನ್ನಡರಿ ಸಮವಸರಣಕ್ಕೆ ಬಂದು ಸುರವೃಂದದ ಮಧ್ಯೆ ಸಿಂಹಾಸನದೊಳಿದ್ದ ತ್ರಿಲೋಕ ಗುರುವಾದ ತನ್ನ ತಂದೆಯ ಪದತಲದಲ್ಲಿ ಮಸ್ತಕವನ್ನಿಟ್ಟು ಪೂಜಿಸಿದನು.

ಈ ದಿಗ್ವಿಜಯ ಅರವತ್ತುಸಾವಿರ ವರ್ಷಗಳು ಹಿಡಿಯಿತಂತೆ. ಸಮವಸರಣದಿಂದ ಭರತೇಶ ತನ್ನ ರಾಜಧಾನಿಯಾದ ಅಯೋಧ್ಯೆಯೆಡೆಗೆ ಬಂದನು. ಪುರದ್ವಾರದಲ್ಲಿ ಇದ್ದಕ್ಕಿದ್ದಂತೆ ಇದುವರೆಗೂ ಜಯಪರಂಪರೆಯನ್ನು ತಂದಿತ್ತ ಎಲ್ಲಿಯೂ ನಿಲ್ಲದ ಚಕ್ರರತ್ನ ನಿಂತಿತು. ಇದನ್ನು ನೋಡಿ ವಿಸ್ಮಯಗೊಂಡ ಭರತ ಪುರೋಹಿತನನ್ನು ಕುರಿತು "ಎನಗಮರಾತಿಗಳೊಳರೆಂಬನಿತು ಪರಾಭವಮನೀಗಳೆ ಚಕ್ರಂ ಸೂಚನೆಗೈದುದು" ಯಾರಿರಬಹುದು ಎಂದು ಕೇಳಿದಾಗ "ನಿನ್ನ ಅನುಜರೆಲ್ಲರೂ ಮಾನೋನ್ನತರು. ಅವರಲ್ಲಿ ಅಭಿಮಾನಮೂರ್ತಿಯೆಂದರೆ ಬಾಹುಬಲಿಯೇ. ಇವರೆಲ್ಲ ನಿನಗೆ ಆಶ್ರಿತರಾದ ಹೊರತು ಈ ಸಮಸ್ಯೆ ಬಗೆಹರಿಯುವುದಿಲ್ಲ. ಅವರು ಇಂದು ನಿನಗೆರಗಿ ಸಾಮಂತರಾಗಬೇಕು, ಇಲ್ಲವೇ ಸನ್ಯಾಸಿಗಳಾಗಬೇಕು." ಎಂದು ಪುರೋಹಿತನು ತಿಳಿಸಿದನು. ಅವರ ಬಳಿಗೆ ರಾಯಭಾರವನ್ನು ಕಳುಹಿಸಿ ಸಾಮದಿಂದಲೇ ಇದನ್ನು ಪರಿಹರಿಸಿದರೊಳ್ಳೆಯದೆಂದು ಪುರೋಹಿತನು ಸಲಹೆ ಕೊಟ್ಟನು. ಭರತ ಅದನ್ನು ಮನ್ನಿಸಿ ತನ್ನ ತಮ್ಮಂದಿರ ಬಳಿಗೆ ರಾಯಭಾರಿಗಳನ್ನು ಕಳುಹಿಸುವನು.

ರಾಯಭಾರಿಗಳು ಭರತಾನುಜರಲ್ಲಿಗೆ ಬಂದು ಭರತನ ಸಂದೇಶವನ್ನ ರುಹಿದರು. "ಇದುವರೆವಿಗೂ ಅಣ್ಣನಾಗಿದ್ದ ಭರತ ಈಗ ಚಕ್ರವರ್ತಿ ಯಾದ. ನಾವು ಆಳುಗಳಾದೆವು" ಎಂದು ನೊಂದ ಅವರು ರಾಜ್ಯ ತೊರೆದು ವಿರಾಗಿಗಳಾದರು.

ಸ್ವಾಭಿಮಾನಿಯಾದ ಬಾಹುಬಲಿಯೊಬ್ಬನನ್ನುಳಿದು ಉಳಿದವರೆಲ್ಲ ರೂ ತಪಸ್ಸಿಗೆ ತೆರಳಿದರು ಎಂಬ ವಾರ್ತೆ ಭರತನಿಗೆ ಬಂದಿತು. ಆಗ ಭರತ ಸಾಮೋಪಾಯಕ್ಕೆ ಬಾಹುಬಲಿ ಮಣಿಯದಿದ್ದರೆ ಬಲವಂತದಿಂದಾದರೂ ಅವನನ್ನು ಬಗ್ಗಿಸುವುದಕ್ಕೆ ಈ ಚಕ್ರರತ್ನ ನನ್ನಲ್ಲಿದೆ ಎಂದುಕೊಂಡನು.

ಭರತೇಶನಟ್ಟಿದ ವಕ್ರೋಕ್ತಿ ನಿಪುಣನಾದ ರಾಯಭಾರಿ ಪೌದನ ಪುರಕ್ಕೆ ಬಂದು ಬಾಹುಬಲಿಗೆರಗಿ ರಾಜಾದೇಶ ಪತ್ರವನ್ನಿತ್ತನು. ಪತ್ರ ಲಿಖಿತವಾದ ಭರತೇಶನಾಟೋಪವನ್ನು ಕಂಡು ಬಾಹುಬಲಿ ಕೆರಳಿದನು. ಚಕ್ರೇಶನ ದಿಗ್ವಿಜಯ ಸಂಭ್ರಮವನ್ನು ವಿವರಿಸುತ್ತಿದ್ದ ರಾಯಭಾರಿಯನ್ನು ತಡೆದು, ದಿಗ್ವಿಜಯ ಕಾಲದಲ್ಲಿ ಭರತೇಶ ಪಟ್ಟ ಪಾಡನ್ನು, ಅನಂತರ ಹಿಂದಣ ರಾಜರ ನಾಮಾವಳಿಗಳನ್ನು ಅಳಿಸಿ ಅನ್ಯಾಯವೆಸಗಿದ ತನ್ನಣ್ಣನ ಅನುಚಿತ ಕಾರ್ಯಗಳನ್ನು ಬಾಹುಬಲಿ ವಿಶದಪಡಿಸಿ ರಣರಂಗದಲ್ಲೇ ಚಕ್ರೇಶನನ್ನು ಸಂದರ್ಶಿಸುವೆನೆಂದು ಖಚಿತವಾಗಿ ನುಡಿದನು. ಬಂದಿದ್ದ ರಾಯಭಾರಿ ಭರತೇಶನಲ್ಲಿಗೆ ಮರಳಿ ಬಾಹುಬಲಿಯ ನಿರ್ಧಾರವನ್ನು ತಿಳಿಸಿ ದನು. ಅತ್ತ ಚಕ್ರೇಶ ಸಕಲ ಸನ್ನಾಹದಿಂದ ಸಮರರಂಗಕ್ಕಿಳಿದ. ಇತ್ತ ಬಾಹುಬಲಿ ಸೈನ್ಯಸಮೇತ ಅಣ್ಣನನ್ನಿದಿರಿಸಲು ಬಂದ.

ಕತ್ತಿ ಮಸೆಯುತ್ತಿದ್ದ ಭರತ–ಬಾಹುಬಲಿಗಳನ್ನು ಕುಲವೃದ್ಧರು ಸಮಾಧಾನ ಪಡಿಸಿ, ಸೇನೆಯನ್ನುಳಿದು ಅವರಿಬ್ಬರೇ ದೃಷ್ಟಿ, ಜಲ, ಮಲ್ಲ ಯುದ್ಧಗಳನೆಸಗಿ ತಮ್ಮ ಶಕ್ತಿಯನ್ನು ಪರೀಕ್ಷಿಸಲು ಅವರಿಬ್ಬರೂ ಒಡಂ ಬಡುವಂತೆ ಮಾಡಿದರು. ಭರತ ಮೂರು ವಿಧ ಯುದ್ಧಗಳಲ್ಲೂ ಸೋತು ರೊಚ್ಚಿಗೆದ್ದು ವಿವೇಕಶೂನ್ಯನಾಗಿ ಬಾಹುಬಲಿಯ ಮೇಲೆ ಚಕ್ರಪ್ರಯೋಗ ಮಾಡಿದನು. ಆದರೆ ಆ ಚಕ್ರರತ್ನ ರಭಸದಿಂದ ಹೊರಟರೂ, ಬಾಹುಬಲಿ ಯ ಬಳಿಗೆ ಬರುವ ವೇಳೆಗೆ ಮಂಕಾಗಿ ಅವನನ್ನು ಪ್ರದಕ್ಷಿಣೆ ಮಾಡಿ ನಮ್ರ

ವಾಗಿ ನಿಂತಿತು. ಎಲ್ಲರಿಗೂ ಅಚ್ಚರಿಯಾಯಿತು. ಭರತೇಶ ದಿಕ್ಕೆಟ್ಟು ಅಪಮಾನದಿಂದ ತಲೆತಗ್ಗಿಸಿ ನಿಂತಾಗ, ಗೆದ್ದ ಬಾಹುಬಲಿಗೆ ವೈರಾಗ್ಯ ಹುಟ್ಟಿ ಐಹಿಕ ಸುಖ ಸಂಪತ್ತುಗಳ ಮೇಲೆ ತಿರಸ್ಕಾರ ಬಂದು, ಸೋತ ಅಣ್ಣನನ್ನು ಸಮಾಧಾನ ಪಡಿಸಿ ಚಕ್ರರತ್ನವನ್ನು ಅವನಿಗೇ ಕೊಟ್ಟು ಸರ್ವಸಂಗಪರಿತ್ಯಾಗ ಮಾಡಿ ತಪಸ್ಸಿಗೆ ಹೊರಟನು.

ಸಮರರಂಗದಿಂದ ಹೊರಟ ಬಾಹುಬಲಿ ನೇರವಾಗಿ ಸಮವಸರಣಕ್ಕೆ ಬಂದು ಭಕ್ತಿಯಿಂದ ಆದಿದೇವನಿಗೆರಗಿ ಆತನ ಕೈಯಿಂದಲೇ ಸನ್ಯಾಸದೀಕ್ಷೆ ಯನ್ನು ತೆಗೆದುಕೊಂಡು, ಅವನ ಉಪದೇಶದಂತೆ ಘೋರ ತಪಸ್ಸಿನಲ್ಲಿ ಮಗ್ನನಾಗಿ ಒಂದು ವರ್ಷ ಕಳೆದನು. ಮೈಮೇಲೆ ಹುತ್ತ ಎದ್ದಿತು; ಬಳ್ಳಿ ಗಳು ದೇಹವನ್ನು ಸುತ್ತಿ ಫಲಪುಷ್ಪಗಳಿಂದ ಪೂಜಿಸುತ್ತಿದ್ದುವು. ಹೀಗಿ ದ್ದರೂ ಕೇವಲ ಜ್ಞಾನ ಅವನಿಗಾಗಲಿಲ್ಲ. ಭರತೇಶ ಇದರ ಕಾರಣವನ್ನು ಆದಿದೇವನಿಂದ ತಿಳಿದು ಬಾಹುಬಲಿಯೆಡೆಗೆ ಬಂದು ತನ್ನ ಮಣಿಮಕುಟ ವನ್ನು ಆತನ ಪದತಲದಲ್ಲಿಟ್ಟು "ಲೋಕವೆಲ್ಲ ನಿನ್ನದು, ನಿನ್ನ ಕರುಣೆ ಯಿಂದಲೇ ಅದು ನನಗೆ ಬಂದದ್ದು, ಎಲ್ಲವನ್ನೂ ಮರೆತುಬಿಡು, ಆತ್ಮ ನನ್ನು ಮಾತ್ರ ನೆನೆ" ಎಂದಾಗ ಬಾಹುಬಲಿಯ ಮನ ತಿಳಿಯಾಗಿ ಅನಂತ ವಸ್ತು ಪ್ರಕಾಶಿಯಾದ ಕೇವಲ ಜ್ಞಾನ ಉದಯಿಸಿತು. ದೇವದುಂದುಭಿ ಮೊಳಗಿತು ಬಾಹುಬಲಿ ಜಿನೇಂದ್ರನು ಸಮವಸರಣಕ್ಕೆ ಬಂದು ತಂದೆ ಎಸಗುತ್ತಿದ್ದ ಲೋಕೋದ್ಧಾರ ಕಾರ್ಯದಲ್ಲಿ ತಾನೂ ನೆರವಾದನು.

ಭರತೇಶ ಬಹುಕಾಲ ಧರ್ಮದಿಂದ ರಾಜ್ಯವಾಳಿ ವ್ರತಸಂಸ್ಕಾರವುಳ್ಳ ವರನ್ನು ದ್ವಿಜರೆಂದು ಪರಿಗಣಿಸಿ ಸನ್ಮಾನಿಸುತ್ತಿದ್ದನು. ಹೀಗಿರುವಲ್ಲಿ ಆದಿ ದೇವನ ಇಹಲೋಕಯಾತ್ರೆ ಮುಗಿಯುವ ವೇಳೆಗೆ ಸನ್ನಿಹಿತವಾದುದ ನ್ನರಿತು ಭರತೇಶ ಆಪ್ತಮಿತ್ರರ ಸಮೇತ ಸಮವಸರಣಕ್ಕೆ ಬಂದು ತನ್ನ ಅಂತ್ಯಪೂಜೆಯನ್ನು ಮಾಡಿದನು. ಮಾಘಮಾಸ ಕೃಷ್ಣ ಚತುರ್ದಶಿ ಯಂದು ಪುರುದೇವ ಮುಕ್ತಿಗೆ ಸಂದನು. ಭರತೇಶನಿಗೆ ತುಂಬ ವ್ಯಥೆ ಯಾಯಿತು ಆಗ ವೃಷಭ ಸೇನಗಣಾಗ್ರಣಿ ಈತನನ್ನು ಸಮಾಧಾನ ಪಡಿಸಿ ಅಯೋಧ್ಯೆಗೆ ಕಳುಹಿಸಿದನು. ದೇವತೆಗಳು ಕೊನೆಯದಾದ ನಿರ್ವಾಣಕಲ್ಯಾಣವನ್ನು ನೆರವೇರಿಸಿದರು.

ಒಮ್ಮೆ ಭರತೇಶ ತನ್ನ ಕೆನ್ನೆಯಲ್ಲಿ ನೆರೆಗೂದಲನ್ನು ಕಂಡು ನಿರ್ವೇಗ ಹೊಂದಿ ಅರ್ಕಕೀರ್ತಿಗೆ ಪಟ್ಟಗಟ್ಟಿ ಕೈಲಾಸಪರ್ವತಕ್ಕೆ ನಡೆದು ಆದಿನಾಥನ ನಿರ್ವಾಣಭೂಮಿಯ ಸಮೀಪದ ಸ್ಫಟಿಕ ಶಿಲಾತಲದ ಮೇಲೆ ಉತ್ತರಾಭಿಮುಖನಾಗಿ ಕುಳಿತು ಘನವಾದ ತಪಸ್ಸನ್ನೆಸಗಿದನು. ಅತಿ ಜಾಗ್ರತೆಯಾಗಿ ಈತನಿಗೆ ಸಕಲ ಜ್ಞಾನ ಲಭಿಸಿತು. ದಿಗ್ವಿಜಯಮಾಡಿ ಭೂಲೋಕವನ್ನು ಗೆದ್ದಿದ್ದ ಭರತೇಶನೇ ಧರ್ಮವಿಜಯ ಮಾಡಿ ಮೂರು ಲೋಕಕ್ಕೂ ಒಡೆಯನಾದನು.

|| ಶ್ರೀ ||

ಪಂಪಕವಿಯ

ಭರತ-ಬಾಹುಬಲಿ

೧ ಪಂಪಕವಿಯ ಪರಿಚಯ

ಆ ಮಳಯಾಚಳ ಹಿಮಗಿರಿ ।
ಸೀಮಾವನಿತಳಕೆ ಬೆಂಗಿ ಮಂಡಳದೊಳ್ ಚೆ ॥
ಲ್ವಾವಗಮೆ ತನಗದೊಂದೂರ್ ।
ನಾಮದೊಳಂ ವೆಂಗಿಪೞುಕರಂ ಸೊಗಯಿಸುಗುಂ ॥ ೧ ॥

ನಯಶಾಲಿ ವತ್ಸಗೋತ್ರ ।
ಶ್ರಯಣೀಯನನೇಕ ಸಕಳ ಶಾಸ್ತ್ರಾರ್ಥವಿನಿ ॥
ಶ್ಚಯಮತಿಕೃತಿ ಮಾಧವ ಸೋ ।
ಮಯಾಜಿಸಲೆ ನೆಗಳ್ದನಾ ಸಮುದ್ರಂ ಬರೆಗಂ ॥ ೨ ॥

ತತ್ತನಯನಖಿಳ ಕರಿತುರ ।
ಗೋತ್ತಮ ಮಣಿಕನಕ ಸಾರವಸ್ತುವನೆರೆದ ॥
ರ್ಗಿತ್ತು ಸಲೆ ನೆಗಳ್ದನತಿ ಪುರು ।
ಷೋತ್ತಮನಭಿಮಾನ ಚಂದ್ರನೆನಿಪಂ ಪೆಸರಿಂ ॥ ೩ ॥

ಆತಂಗೆ ಭುವನಭವನ ।
ಖ್ಯಾತಂಗೆ ಸಮಸ್ತ ವೇದವೇದಾಂಗ ಸಮು ॥
ದ್ಯೋತಿತ ಮತಿಯುತನುಚಿತ ಪು ।
ರಾತನ ಚರಿತಂ ತನೂಭವಂ ಕೊಮರಯ್ಯಂ ॥ ೪ ॥

ಆ ಕೊಮರಯ್ಯಂಗವನಿತ ।
ಳಾಕಾಶ ವ್ಯಾಪ್ತಕೀರ್ತಿ ನಿಜಗುಣಮಣಿ ರ ॥
ತ್ನಾಕರನ ಜ್ಞಾನತವೋ ।
ನೀಕರನಭಿರಾಮ ದೇವರಾಯಂ ತನಯಂ ॥ ೫ ॥

ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ನಂಬಲೇ ।
ಮಾತೊ ಜಿನೇಂದ್ರ ಧರ್ಮಮೆನಲಂ ದೊರೆ ಧರ್ಮದೊಳೆಂದು ನಂಬಿತ ॥
ಜ್ಞಾತಿಯನುತ್ತರೋತ್ತರಮೆಮಾಡಿ ನೆಗಳ್ಚಿದನಿಂತಿರಾತ್ಮವಿ ।
ಖ್ಯಾತಿಯನಾತನಾತನ ಮಗಂ ನೆಗಳ್ದಂ ಕವಿತಾಗುಣಾರ್ಣವಂ ॥ ೬ ॥

ದುಂದುಭಿ ಗಭೀರ ನಿನದಂ ।
ದುಂದುಭಿ ಸಂವತ್ಸರೋದ್ಭವಂ ಪ್ರಕಟಯಶೋ ॥
ದುಂದುಭಿ ಸಿಂಹಾಸನ ಸುರ ।
ದುಂದುಭಿ ಪತಿಚರಣಕಮಳ ಭೃಂಗಂ ಪಂಪಂ ॥ ೭ ॥

ಪಂಪಂ ಧಾತ್ರೀವಳಯು ನಿ ।
ಳಿಂಪಂ ಚತುರಂಗ ಬಳಭಯಂಕರಣಂ ನಿ ॥
ಷ್ಕಂಪಂ ಲಲಿತಾಲಂಕರ ।
ಣಂ ಪಂಚಶರೈಕ ರೂಪನಪಗತಪಾಪಂ ॥ ೮ ॥

ಕದಳೀಗರ್ಭಶ್ಯಾಮಂ ।
ಮೃದುಕುಟಿಲ ಶಿರೋರುಹಂ ಸರೋರುಹ ವದನಂ ॥
ಮೃದು ಮಧ್ಯಮತನು ಹಿತಮಿತ ।
ಮೃದುವಚನಂ ಲಲಿತ ಮಧುರ ಸುಂದರ ವೇಷಂ ॥ ೯ ॥

ಗುರುದೇವೇಂದ್ರ ಮುನೀಂದ್ರನಿಂದ್ರನಮಿತಂ ದೇವಂ ಕಥಾನಾಯಕಂ ।
ಪುರುದೇವಂ ಕಥೆಯುಂ ತದಾದಿಪುರುಷ ಪ್ರಸ್ತುತ್ಯ ಜನ್ಮಾಳಿ ಒಂ ॥

ಧುರ ಮೆಂದಂದೆ ಮದೀಯ ವಾಗ್ವಿಭವವಿನ್ಯಾಸಂ ಬಲಂಬೆತ್ತುದಿ ।
ನ್ನಿರು ಬಲ್ಲಿತ್ತಱಿ ಕೋಡುಕೂರಿತದನಂತಿಂತುಂತೆನಲ್ಬರ್ಕುಮೋ ॥ ೧೦ ॥

ಕವಿತೆಯೊಳಾಸೆಗೈಯ್ವ ಫಲಮಾವುದೊ ಪೂಜೆ ನೆಗಳ್ತೆ ಲಾಭವೆಂ ।
ಬಿವೆ ವಲಮಿಂದ್ರಪೂಜೆ ಭುವನ ಸ್ತುತಮಪ್ಪ ನೆಗಳ್ತೆ ಮುಕ್ತಿ ಸಂ ॥
ಭವಿಸುವ ಲಾಭಮೆಂಬಿವೆ ಜಿನೇಂದ್ರ ಗುಣಸ್ತುತಿಯಿಂದೆ ತಾಮೆ ಸಾ ।
ರವೆ ಪೆಱೀವುದೇಂ ಪೆಱರಮಾಡುವುದೇಂ ಪೆಱರಿಂದಮಪ್ಪುದೇಂ ॥ ೧೧ ॥

ಇದುವೆ ಸುಕವಿಪ್ರಮೋದ ।
ಪ್ರದ ಮಿದುವೆ ಸಮಸ್ತಭವ್ಯಲೋಕ ಪ್ರಮದ ॥
ಪ್ರದಮೆನೆ ನೆಗಳ್ದಾದಿಪುರಾ ।
ಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ ॥ ೧೨ ॥

ಬೆಳಗುವೆ ನಿಲ್ಲಿ[1] ಲೌಕಿಕಮನಲ್ಲಿ ಜಿನಾಗಮಮಂ ಸಮಸ್ತ ಭೂ ।
ತಳಕೆ ಸಮಸ್ತ ಭಾರತಮುಮಾದಿಪುರಾಣಮುಮೆಂದು ವ್ಯೆಯ್ಯಸುಂ ॥
ಗೊಳುತಿರೆ ಪೂರ್ವ ಪೂರ್ಣ ತೆಱದಿಂದಱುದಿಂಗಳೊಳೊಂದುಮೂಱುತಿಂ ।
ಗಳೊಳೆ ಸಮಾಪ್ತಿಯಾದುದೆನೆ ಬಣ್ಣಿಸಿದಂ ಕವಿತಾಗುಣಾರ್ಣವಂ॥ ೧೩ ॥

ಇರು ಮರುಳೆ ಶುಷ್ಕ ವೈಯಾ ।
ಕರಣಂಗಂ ಶುಷ್ಕತಾರ್ಕಿಕಂಗಂ ಬೆಳ್ಳ ॥
ಕ್ಕರಿ ಗಂಗಂ ವಿಷಯಮೆ ಕಾ ।
ವ್ಯರತ್ನಮತಿ ಚತುರ ಕವಿಕದಂಬಕ ವಿಷಯಂ ॥ ೧೪ ॥

---

1 ‘ಇಲ್ಲಿ’ ಎಂದರೆ ‘ವಿಕ್ರಮಾರ್ಜುನ ವಿಜಯ’ ಎಂಬ ಕಾವ್ಯದಲ್ಲಿ ಎಂದರ್ಥ.

೨ ಭರತ-ಬಾಹುಬಲಿಗಳ ಜನನ, ವಿದ್ಯಾಭ್ಯಾಸ

ಪರಮ ಜಿನೇಂದ್ರವಾಣಿಯೆ ಸರಸ್ವತಿ ಬೇಱದು ಪೆಣ್ಣರೂಪಮಂ ।
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ ॥
ದರಿಸುವ ಭವ್ಯಕೋಟಿಗೆ ನಿರಂತರ ಸೌಖ್ಯಮನೀವುದಾನದ ।
ರ್ಕೆರೆದಪೆನಾ ಸರಸ್ವತಿಯೇ ಮಾಱ್ಕೆಮಗಿಲ್ಲಿಯೆ ವಾಗ್ವಿಳಾಸಮಂ ॥ ೧ ॥

ಮನುಗಳೊಳೀತನೆ ಪದಿನಾ ।
ಲ್ಕನೆಯಾತಂ ತಪ್ಪದಪ್ಪನೆನಿಸಿಯು ಮಂತಾ ॥
ಮನುಗಳೊಳೀತನೆ ಮೊದಲಿಗ ।
ನೆನಿಸಿದನೇಂ ನಾಭಿನಾಭಿಯೋಗುಣಗಣದಾ ॥ ೨ ॥

ಕುಳಧರನುಂ ಕುಳಕರನುಂ ।
ಕುಳತಿಳಕನುಮೆನಿಪ ನಾಭಿರಾಜಂಗೆ ಲತಾ ॥
ಲಳಿತೆ ದಳಿತಾಂಬುಜಾನನೆ ।
ವಿಳಾಸ ಲಾವಣ್ಯಕಾಂತಿಯುತೆ ಸತಿರತಿವೊಲ್ ॥ ೩ ॥

ಮರುದೇವಿಯೆಂಬಳಂಬರ ।
ಚರನರಸುರ ಯುವತಿರೂಪ ಸರ್ವಸ್ವಮನಾ ॥
ದರದೆ ಬಿದಿನೆಱಪಿ ಲಲನಾ ।
ಸ್ವರೂಪದಿಂ ನಿಱಿಸಿತೆನ್ನದಿನ್ನೇವೊಗಳ್ವೆಂ ॥ ೪ ॥

ವಚನ : ಅಂತನ್ಯೋನ್ಯಪ್ರೇಮ ಸಂಜಾತ ಸ್ವಾಂತ ಸಂಪತ್ಪರಂಪರಾಪರಿಗತವಾಗಿ ನಿಳಿಂಪದಂಪತಿಯೆನೆ ಪೋಲ್ವ ದಂಪತಿಗೆ ಪವಿತ್ರೀಭೂತಮಪ್ಪ ಭೂತಳೋದ್ದೇಶದೊಳುತ್ಪತ್ಸ್ಯಮಾನ ಭಾವಿತೀರ್ಥಕರ ಪುಣ್ಯದೂತಃ ಪೂತಂ ಪುರುಹೂತಂ ಬಂದು.

ಕೆವಲಿ ಮನುಷ್ಯದಂಪತಿಗಳಿರ್ದುವನೊಂದೆಡೆಯೊಳ್ ತೆರಳ್ಚಿ ನಾ ।
ಕದ ಫಣಿಲೋಕದಂದದ ಪ್ರೊಲಿಲ್ಗಳ ನೀಪ್ರೊಲಿಲೊಂದು ರಮ್ಯಹ ॥
ರ್ಮ್ಯದ ಬೆವೆಗಂಬರಂ ನೆಜ಼ಿಯುದೆಂಬಿನಮುಜ್ವಳ ಪಂಚರತ್ನಭಾ ।
ಸ್ವದ ಸದನಂಗಳಿಂ ನೆಜ಼ಿಸುದಂ ಸಮೆದಂ ಪುರಮಂ ಪುರಂಧರಂ ॥ ೫ ॥

ತಾನು ನಿರ್ಮಿಸಿದ ಪಟ್ಟಣಕ್ಕೆ ದೇವೇಂದ್ರನು ಅಯೋಧ್ಯೆ ಎಂದು ಹೆಸರಿಟ್ಟನು. ತೀರ್ಥೇಶನ ಜನನವನ್ನು ಅವಧಿಜ್ಞಾನದಿಂದ ತಿಳಿದು ಆರು ತಿಂಗಳಿಗೆ ಮುಂಚಿತವಾಗಿಯೇ ಅಯೋಧ್ಯೆಯ ಮೇಲೆ ರತ್ನವೃಷ್ಟಿಯನ್ನು ಕರೆವಂತೆ ಅಮರೇಂದ್ರ ಕುಬೇರನಿಗೆ ಆಜ್ಞಾಪಿಸಿದನು. ಅಮರಾಂಗನೆಯರು ಬಂದು ಜಿನಜನನಿಯನ್ನು ಸೇವಿಸತೊಡಗಿದರು ! ಒಂದು ದಿನ ಮರುದೇವಿ ಬೆಳಗಿನ ಝಾವದಲ್ಲಿ ಹದಿನಾರು ಶುಭಸ್ವಪ್ನಗಳನ್ನು ಕಂಡು ಪತಿಗೆ ತಿಳಿಸಲು ಆತನು ತೀರ್ಥಂಕರನು ಜನಿಸುವನೆಂದು ಊಹಿಸಿ ಹೇಳಿದನು. ಮರುದೇವಿ ಗರ್ಭವತಿಯಾದಳು. ನವಮಾಸ ತುಂಬಿದ ಮೇಲೆ ಅಪೂರ್ವ ಪುತ್ರರತ್ನವನ್ನು ಪಡೆದಳು. ದೇವತೆಗಳು ಬಂದು ಈಕೆಗೆ ಮಾಯಾನಿದ್ರೆ ಬರುವಂತೆ ಮಾಡಿ ಅಲ್ಲಿ ಒಂದು ಮಾಯಾಶಿಶುವನ್ನಿಟ್ಟು ಹಸುಗೂಸನ್ನೆತ್ತಿಕೊಂಡು ಐರಾವತದ ಮೇಲೇರಿ ಮಂದರಾಚಲಕ್ಕೆ ನಡೆದು ಪಾಂಡುಕ ಶಿಲಾತಲದಲ್ಲಿ ಮಗುವನ್ನು ಕೂರಿಸಿ ಧೂಪದೀಪಗಳಿಂದ ಅರ್ಚಿಸಿ, ಕ್ಷೀರಾಭಿಷೇಕ ಮಾಡಿಸಿ ಮತ್ತೆ ತಾಯಿಯ ಬಳಿಗೆ ಶಿಶುವನ್ನು ತಂದುಬಿಡುವರು. ಜಾತಕರ್ಮೋತ್ಸವಗಳು ನಡೆದವು. ಬಿದಿಗೆಯ ಚಂದ್ರನಂತೆ ವೃಷಭದೇವನು ಬೆಳೆಯತೊಡಗಿದನು.

ಮಗನಿಗೆ ಯೌವನ ಬಂದುದನ್ನು ನೋಡಿ ತಂದೆಯಾದ ನಾಭಿರಾಜನು ಮಗನನ್ನು ಕುರಿತು.

ಇದುದಲ್ವಸ್ತುವೆನ್ನದೆ ಮದುಕ್ತಿಯನೊಯ್ಯನೆ ಕೇಳ್ದು ದಿವ್ಯ ಚಿ ।
ತ್ತದೊಳವಧಾರಿಸೆಂತೆನೆ ಜಗದ್ಗುರು ಲೋಕಹಿತಾರ್ಥದಿಂದೆ ಸ ॥
ಲ್ವದು ವಲಮಿಂತಿದಂ ಬಗೆದು ಪುತ್ರಕಳತ್ರ ಪರಿಗ್ರಹಕ್ಕೆ ಮಾ ।
ಣದೆ ಬಗೆದಪುದೊಲ್ಲೆಸಿದನೆಂದೊಡೆ ಸೃಷ್ಟಿಯೆ ಕೆಟ್ಟು ಪೋಗದೇ ॥ ೬ ॥

ಶಾಂತಾತ್ಮ ಮದುವೆನಿಲ್ ನೀ ।
ನಿಂತೆನ್ನ ಗೃಹಸ್ಥಧರ್ಮದಿಂದಂ ನೀನೆಂ ॥
ತಂತೆ ಸತಿ ನೆಗಳ್ದೆ ಜಗತಿ ।
ಸಂತತಿ ನಿವೆ ನಿನ್ನ ಧರ್ಮಸಂತತಿ ನಿಲ್ಕುಂ ॥ ೭

ಎನೆ ದೇವನ ದರಹಸಿತಾ ।
ನನದೊಳ್ ತನಗಿಂಬುಕೈವ ಬಗೆಯಂ ಪದಿನಾ ।
ಲ್ಕನೆಯ ಮನು ಜಲಕನಲುದಂ ।
ವನಿತುಂ ಭುವನವುಮನಾಗಳಾಳ್ದಂತೊಸೆದಂ ॥ ೮

ವಚನ: ಅಂತನುವಲುದೊಸಗೆಯೊಳಮರರಾಜನುಂ ಸನಾಭಿಗಳ್
ರಸು ಸುನಾಭಿರಾಜನುಂ ಬಂದು ವಿಳಾಸವತಿಯೆನಿಸಿದ ಯಶಸ್ವತಿಯೊಳ
ಮನೋನಯನಾನಂದೆಯೆನಿಸಿದ ಸುನಂದೆಯೊಳಂ ಒಂದೇ ಪಸೆಯೊಳ
ಪಾಣಿಗ್ರಹಣಂ ಗೈಸಿದಾಗಳ್.

ಅನ್ನೆಗಂ ವ್ಯಾಘ್ರನುಂ ದಿವಾಕರಪ್ರಭಾಕರನುಂ ಮತಿವರ ಮಂತ್ರಿ
ಯುಂ ಅಧೋಗ್ರೈವೇಯಕ ದಿವಿಜನುಂ ಸುಬಾಹು ಮಹೀತಳಿಯು
ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದು ಯಶಸ್ವತಿ ಮಹ
ದೇವಿಯ ಗರ್ಭವಾಸದೊಳ್ ಶುಕ್ತಿ ಪುಟೋದರವರ್ತಿಯಪ್ಪ ನಿರ್ಮಳೊ
ದಕದ ಬಿಂದು ಗರ್ಭಂ ತಾಳ್ದಿ.

ಕೆಲದೊಳ್ ಶ್ರೀದರ್ಪಣಂ ಬಂದಿರೆಯುಮೊಸೆದು ವಕ್ತ್ರೇಂದುವಂ
ಖಳ್ಗದೊಳ್ ನೋ
ಡಲು ವಾತೋದ್ಯ ಪ್ರಗೀತಧ್ವನಿಗಳಿರೆ ಧನುರ್ದಂಡ ಟಂಕಾರಮಂ ಕೇ
ಳಲು ಮುಟ್ಟಿರ್ಪೆಚ್ಚೆ ತತ್ಕಾಂತೆಗೆ ನೆಗಟ್ದುವು ಗರ್ಭಸ್ಥಸುತ್ಸಾಹಮಂತೋ
ಕ್ವಲಿಮಂ ಸಾಮ್ರಾಜ್ಯಮಂ ಸೂಚಿಸುವವೊಲತಿಚೋದ್ಯಂಗಳೀವಾ
ಹೃದಂಗಳ್ ॥ ೯

ವಚನ: ಅಂತು ಚಕ್ರವರ್ತಿ ಜನ್ಮೋತ್ಸವ ಸೂಚಕಮಪ್ಪನೇಕ ದೋಹಳ ಸಂದೋಹಂ ನೆಗಳ್ದೆ ಸುಖಪ್ರಸೂತಿಸಮಯದೊಳ್.

ಮನುಗೋತ್ರಾಂಭೋಧಿಚಂದ್ರಂ ಮನುಕುಲ ಸರಸೀವಿಭ್ರಮೋತ್ತಂಸ ಹಂಸಂ ।
ಮನುವಂಶ ಪ್ರಾಚ್ಯಶೈಲದ್ಯುಮಣಿ ಮನುನೃಪಾಮ್ನಾಯ ದುರ್ಗಾದ್ರಿಸಿಂಹಂ
ಮನುಭೂಪಾಳಾನ್ವಯ ಶ್ರೀಭವನಕಳಶಮೆಂಬಂತು ವಿಖ್ಯಾತಪುಣ್ಯಂ ।
ಮನುಧಾತ್ರೀಪಾಲ ಚೂಡಾಮಣಿ ಜನಿಯಿಸಿದಂ ಚಕ್ರವರ್ತಿ ಪ್ರಧಾನಂ ॥

ವಚನ: ಆ ಪ್ರಸ್ತಾವದೊಳ್

ಎಸಗಿದುದು ಸವಿಾರಂ ಶೈತ್ಯಸೌರಭ್ಯಮಾಂದ್ಯಾ ।
ವಸತಮೆಸೆದುರಾಶಾಚಕ್ರಮಂಭೋದ ಮಾರ್ಗಂ ॥
ಪೊಸತೆ ತೊಳೆದುದೀಗಳ್ ಪಾಮೊಳೆಂಬಂತುಟಾಯ್ತೇ ।
ನೆಸೆದು ಸೊಗಯಿಸಿತ್ತಾ ಚಕ್ರಿಜನ್ಮೋತ್ಸವಾಹಂ ॥ ೧೧ ॥

ವಚನ: ಆಗಳ್ ನಾಭಿರಾಜ ಕಚ್ಛಮಹಾಕಚ್ಛ ಪ್ರಮುಖ ಪ್ರಭುಗಳ್ ನೆರೆದು ಜಾತಕರ್ಮೋತ್ಸವುಮಂ ಮಾಡಿದ ತದನಂತರದೊಳ್.

ಭಾವಿ ಭರತೇಶ ಪದಮುಮಿ ।
ಳಾವಿಪುಳ ಪ್ರೇಮಭರಮುಮೆರ್ದೆಗೊಂಡಿರೆ ಸ ॥
ಧ್ಭಾವದಿಸಿಟ್ಟುದು ಬಂದು ಜ ।
ನಾವಳಿ ಕೂಸಿಂಗೆ ಭರತನೆಂಬೀ ಪೆಸರಂ ॥ ೧೨ ॥

ದರ ಹಸಿತಂ ಹಸಿತಂ ಸುಂ ।
ದರ ಮನ್ಮಥಲಸಿತ ರುಚಿ ತರಂಗಿತಮೆಂಬೀ ॥
ಪರಿವಡಿಯ ಬಾಲ ಕೇಳಿಯೆ !
ಕರಮೆ ಮರಳ್ಚಿದುದು ತಾಯುಮಂ ತಂದೆಯುಮಂ ॥ ೧೩ ॥

ನುಡಿಯು ತೊದಳ್ ನಡೆಯು ತಳರ್ ।
ಜಡೆಗಳ ಕೆಂಪಲರ್ದವೊಗದ ಕಿಱುನಗೆ ಕೆಂಪಂ ॥
ಪಡೆದ ಧರಮಣಿಯು ಚೆಲ್ವಡಿ ।
ಗಡಿಗೆಸೆದುದು ಬಾಳ ಭಾವದೊಳ್ ಪುರುಸುತನಾ ॥ ೧೪ ॥

ಕೊರಲೊಳ್ ಶಾರ್ದೂಲ ನಖಾಂ ।
ಕುರಂಗಳುಂ ಹರಿನಖಾಂಕುರಂಗಳುಮುಂದೇಂ ॥
ಕರಮೆಸೆದಿರ್ದುವೊ ಶೌರ್ಯಾಂ ।
ಕುರಂಗಳೆಂಬಿನೆಗಮಾದಿದೇವಾತ್ಮಜನಾ ॥ ೧೫ ॥

ನುಡಿಯು ಪೊದಲ್ಕೆಯೊಳೊಳ್ನುಡಿ ।
ನುಡಿದಂ ನಿಜ ಸಕಳ ಚಕ್ರವರ್ತಿತ್ವಕ್ಕಂ ॥
ದಡಿಯಿಡುವಂತೆ ನಿರಂತರ ।
ಮಡಿಯಿಟ್ಟಂ ಪದ್ಮರಾಗ ಕುಟ್ಟಿಮ ತಳದೊಳ್ ॥ ೧೬ ॥

ವಿವಿಧ ಕಳಿಂಗ ವಂಗ ಖಗ ಘೂರ್ಜರ ಮಾಳವ ಚೋಳ ಪಾಂಡ್ಯ ಪ ।
ಲ್ಲವ ನೃಪಮಂಡಲಂಗಳೊಳಿವಂಗಿವು ಜೀವಿತಮೆಂದು ಕೊಟ್ಟು ಪೊ ॥
ಣ್ಣವ ನಿಜವಿಕ್ರಮೈಕರಸಮುಂ ಶಿಶುಭಾವದೊಳಂ ನಿರಂತರಂ ।
ಭುವನಜನಕ್ಕೆ ಸೂಚಿಸಿದನೀತೆರದಿಂ ಪುರುದೇವ ನಂದನಂ ॥ ೧೬ ॥

ವಚನ: ಅಯ ನಿಖಿಳಜನದಾಶ್ಚರ್ಯ ಶೌರ್ಯರಸ ಬಹಳ ಬಾಲಕ್ರೀಡಾ ಚಮತ್ಕಾರಿತ ವೀರಚಕ್ರನುಂ ನಿಜೋದಯಾನಂದಿತ ಜಗಚ್ಚಕ್ರನುಮಾಗಿ ಯೌವನಪ್ರಾಪ್ತನಾಗೆ

ತಂದೆಯರೂಪೆ ತಂದೆಯ ವಿಳಾಸಮೆ ತಂದೆಯ ಚೆಲ್ವೆ ತಂದೆಯೊಂ ।
ದಂದಮೆ ತಂದೆಯೊಂದು ನುಡಿಯೋಜೆಯೆ ತನ್ನೊಳಮರ್ಕೆವೆತ್ತು ದಾ ॥

ನಂದಕರಂ ಕರಂ ಸೊಗಯಿಸುತ್ತಿರೆ ಶೋಭಿಸಿದಂ ಕುಮಾರ ನಾ ।
ನಂದಿತರೂಪ ನಂದೆಸೆಯೆ ತಂದೆಯೊಳಚ್ಚಿನೊಳೊತ್ತಿದಂತೆವೋಲ್ ॥ ೧೮ ॥

ವಿಪುಳ ಯಶಃ ಪಿಂಡಂ ಪು ।
ಣ್ಯಪುಂಜಮಾಕ್ಷತ್ರಧಾಮ ಧಾಮಂತಾನಾ ॥
ನೃಪಸುತನೆನ್ನದೆ ಪೆಱತೊಂ ।
ದುಪಾಂಗಿನೊಳ್ ನೆಗಟ್ದ ಭರತನಂ ಬಣ್ಣಿಪರಾರ್ ॥ ೧೯ ॥

ವಚನ: ಭರತ ಕುಮಾರಂಬೆರಸು ಏಟ್ಬರ್ ಕುಮಾರರಾದಿಯಾಗಿ ನೂರ್ವರ್ ಕುಮಾರರು ಮನಸಿಬರಿಂ ಕಿಱಿಯಳ್ ಬ್ರಾಹ್ಮಿಯೆಂಬ ಮಗಳಂ ಪಡೆದು.

ಘಳಲಲಿತಂ ವಿನೂತಕಳಿಕಾಕಳಿತಂ ಕಡುರಯ್ಯಮಾಯ್ತು ಕೋ ।
ಮಳಲತೆಯೆಂಬಿನಂ ಚರಮದೇಹಶತಾತ್ಮಜರಿಂದ ಮಾಮಹೋ ॥
ತ್ಪಳಮುಖಿಯಿಂದ ಮಾಸತಿ ಯಶಸ್ವತಿ ವಿಶ್ವಮಹೀತಳಂ ಗುಣಂ ।
ಗೊಳೆ ಪಡೆದಳ್ ತದಗ್ರಮಹಿಷೀಪದದೊಳ್ ಪಿರಿದೊಂದು ಮೈಮೆಯಂ ॥

ವಚನ: ವಜ್ರಜಂಘನ[2] ಸೇನಾನಾಯಕನ ಕಂಪನನುಮಧೋಗ್ರೈವೇಯಕಾಹಮಿಂದ್ರನುಂ ಮಹಾಬಾಹು ಮಹೀಪತಿಯುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದು ಸುನಂದಾ ಮಹಾದೇವಿಯ ಗರ್ಭದೊಳ್ ಬಂದವತರಿಸಿ.

---

2. ಆದಿದೇವನೇ ತನ್ನ ನಾಲ್ಕನೆಯ ಜನ್ಮದಲ್ಲಿ ವಜ್ರಜಂಘನಾಗಿದ್ದನು. ವಜ್ರಜಂಘ ಶ್ರೀಮತಿ ಇವರ ಪ್ರಣಯ ಪ್ರಕರಣ ಪಂಪನ ಆದಿಪುರಾಣ ಕಾವ್ಯದ ಹಲವು ರಸವತ್ತಾದ ಭಾಗಗಳಲ್ಲಿ ಒಂದು.

ಜನನೀಗರ್ಭಾವತಾರೋತ್ಸವ ಮುದಿತ ಸುರಾನೀಕ ಮುದ್ವೃತ್ತ ವಿಶ್ವಾ
ವನಿಭೃದ್ವ್ಯಾಹಾ ಬಳೋನ್ಮೂಲನಪಟುತರದೋರ್ವಿಕ್ರಮಂ ದೇವತೂರ್ಯ
ಧ್ವನಿ ಮಿಶ್ರಾತೋದ್ಯ ನೃತ್ಯಂ ಮನುನೃಪತಿ ಕುಲಶ್ರೀಯಶ ಶ್ರೀ ಜಯಶ್ರೀ
ವನಿತೌಘಂ ಪುಣ್ಯಪುಂಜೋದಯನುದಯಿಸಿವಂ ವಂಶಲಕ್ಷ್ಮೀಲಲಾಮಂ

ವಚನ: ಅಂತು ಜನ್ಮೋತ್ಸವಾನಂತರವಾಬಾಳಕಂಗೆ ಬಾಹು
ಬಲಿಯೆಂಬನ್ವರ್ಥಾಭಿದಾನವನಿಟ್ಟಾತನ ಲಲಿತೋತ್ತಾನಶಯಿತವರಹಸಿ
ತರಂಗಿತಗತಿಸ್ಖಲಿತ ಮುಗ್ಧಜಲ್ಪಿತಾದಿ ಬಾಲ್ಯವಿಳಾಸಂಗಳಿಂದಂ ಕರೀ
ದ್ಧೂತ ಧೂಳೀ ವಿಳಾಸ ಪಾಂಸು ಕೇಳಿಯಿಂದಂ ಮಲ್ಲವೇಷೋದ್ಧ
ರಾಜದಾರಕ ನಿಯುದ್ಧದಿಂದವಾನಂದಿತ ಹೃದಯನಾಗಿ ನಾಭಿರಾಜ
ನಂದನ ನಂದನ ನಿರ್ಪನ್ನಿಗಂ ಯೌವನಪ್ರವೇಶ ಸಮಯದೊಳ್.

ದಳಿತಾಂಭೋಜಾಸ್ಯನಿಂದೀವರದಳನಯನಂ ಪಕ್ವಬಿಂಬಾಧರಂ ಕೋ।
ಮಳವಂಶ ಶ್ಯಾಮನಂಭೋಧರವನಳಿನೀ ಕುಂತಳಂ ವ್ಯೂಢವಕ್ಷ॥
ಸ್ಥಳನಾಜಾನು ಪ್ರಲಂಬಪ್ರಬಲ ಭುಜಯುಗಂ ಚಾರುವೃತ್ತೋರುಯುಗ್ಮಂ
ಕುಳಶೈಲೇಂದ್ರೋನ್ನತಂ ಬಾಹುಬಲಿ ಸಕಲಸೌಂದರ್ಯ ಸಂಪನ್ನನಾದಂ

ಆ ಕಮನೀಯ ವಿಲೋಕನ ।
ನಾಕಾಲದ ಕಾಮದೇವನೆಂದೊಡೆ ಕಾಂತಾ ॥
ನೀಕದ ಮರುಳ್ಪುದಂ ಮದ ।
ನಾಕುಳತೆಯನುಂತೆ ಪೇಳ್ವುದೊಂದಗ್ಗಳಿತೇ ॥ ೨೩

ಕನಸಿನೊಳ ಮಾಕುಮಾರನೆ ।
ಮನಮಂ ತಣ್ಮಲೆಯೆ ಚಿತ್ತಜಂ ಚಿತ್ತಭವಂ ॥
ಮನಸಿಜನನಂಗ ನಂಗಜ ।
ನೆನೆ ನೆಗಟ್ಟುವು ಬಾಹುಬಲಿಗೆ ಪಲವುಂ ಪೆಸರ್ಗಳ್ ॥ ೨೪

ವಚನ: ಮುನ್ನಂ ವೃಷಭೇಶ್ವರಂ ವಜ್ರಜಂಘನಾದ ಭವದೊಳಾ ಮಹಾತ್ಮಂಗೆ ತಂಗೆಯಾದ ಸುಂದರಿಯೆ ಕತಿಪಯಭವ ಪರಿಭ್ರಮಣದಿಂ ಬಂದು ಬಾಹುಬಲಿ ಕುಮಾರನಿಂನೇರ್ಗಿಱಿಯಳಾಗಿ.

ಸೌಂದರ ತನುರುಚಿಯೊಳ್ ಸುರ ।
ಸೌಂದರಿಯೆನೆ ಸೌಂದರಾಂಗಿ ಸೌಂದರಿಯೆಂಬಳ್ ॥
ಸೌಂದರ ವೃಷಭ ಮಹೀಭುಜ ।
ಸೌಂದರಿಗೆ ಸುನಂದೆಗಂದು ನಂದನೆಯಾದಳ್ ॥ ೨೫ ॥

ವಚನ: ಅಂತು ಭರತೇಶ್ವರಂ ಬಾಹುಬಲಿಕುಮಾರಂ ಮೊದಲಾಗೆ ನೂರ್ವರ್ ಕುಮಾರರು ಮನಿರ್ವರ್ ಕನ್ಯೆಯರು ಮನಾದಿಪುರುಷಂ ನೋಡಿ ಮನದೊಳಾದಲ್ಕಱಿಂ ನಿಜಾನ್ವಯ ಭೂಷಣ ತನಯವರ್ಗಕ್ಕೆ.

ಇವರ್ಗಿವು ತಕ್ಕುವೆಂದವರ್ಗವಂ ದಯೆಯಿಂದಯೆಗೆಯ್ಯೆ ರಾಗದಿಂ ।
ದವರವನೆಲ್ಲಮುಂ ನೆಱಿಯೆ ತೊಟ್ಟುತದುಜ್ವಳ ರತ್ನದೀಪ್ತಿದಿ ॥
ಗ್ವಿವರನಭೋ ವಿಭಾಗ ಪರಿಪೂರಿತವಾಗಿರೆ ತಮ್ಮನೊಲ್ದುನೋ ।
ಱ್ವವರ್ಗಳ ಕಣ್ಗೆದೀಪ್ತಿ ಪರಮಾಣುಗಳಿಂ ನಮೆದಂತೆ ತೋಱಿದರ್ ॥ ೨೬ ॥

ಒಂದಾನೊಂದು ದಿವಸ ಆದಿಬ್ರಹ್ಮನು ತನ್ನ ಮಕ್ಕಳಿಗೆ ವಿದ್ಯೆಯನ್ನು ಉಪದೇಶಿಸಬೇಕೆಂದು ಆಲೋಚಿಸುತ್ತಿರುವಾಗ ಪುತ್ರಿಯರಿಬ್ಬರು ಬಂದು ನಮಸ್ಕರಿಸಿದರು. ಅವರಿಬ್ಬರನ್ನೂ ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಬ್ರಾಹ್ಮಿಗೆ 'ಸಿದ್ಧಂ ನಮಃ' ಎಂದು ಪ್ರಾರಂಭಿಸಿ ಲಿಪಿಗಳನ್ನು ಬಲಗೈಯಿಂದ ಬರೆದು ಉಪದೇಶಿಸಿದನು. ಸೌಂದರಿಗೆ ಗಣಿತವನ್ನು ಎಡಗೈಯಲ್ಲಿ ಬರೆದು ತೋರಿಸಿ ಛಂದಸ್ಸು ಅಲಂಕಾರ, ಮುಂತಾದುವನ್ನೂ ಕಲಿಸಿದನು. ಬಳಿಕ ಗಂಡು ಮಕ್ಕಳಲ್ಲಿ ಭರತ, ಅರ್ಥಶಾಸ್ತ್ರ, ಗಾಂಧರ್ವಶಾಸ್ತ್ರ, ಮೊದಲಾದ ಲೋಕೋಪಕಾರೀ ವಿದ್ಯೆಗಳನ್ನು ಉಪದೇಶಿಸಿ ಸಂತೋಷದಿಂದಿದ್ದನು.

೩ ಭರತನ ಪಟ್ಟಾಭಿಷೇಕ

ಆದಿದೇವನ ಆಸ್ಥಾನದಲ್ಲಿ ಒಂದು ದಿನ

ಎರಡೋಳಿಯಾಳಂ ಮೊದಲೊಳ್ ।
ಭರತೇಶ್ವರ ಬಾಹುಬಲಿಗಳಿರೆ ಮತ್ತಿನ ಪು ॥
ತ್ರರುಮವರ ಕೆಲದೊಳಿರೆ ಸುರ ।
ಶರಾಸನಂ ನೆಗಳ್ದುದವರ ಮಕುಟ ಪ್ರಭೆಯೊಳ್ ॥ ೧ ॥

ಕನಕಗಿರಿಯೆನಿಪ ಸಿಂಹಾ ।
ಸನಮುಮನಾ ಪರಮ ಚರಮತನುರುಚಿಯುಮನೇ ॥
ನನವರತಂ ಪುದಿದುವೊ ನಿಮಿ ।
ರ್ದನೇಕ ಚಮರೀಜ ದುಗ್ಧ ಜಳಲಹರಿಕೆಗಳ್ ॥ ೨ ॥

ವಚನ: ಮತ್ತಂ ಸಿಂಹಾಸನಾಸನ್ನ ಸ್ಥಿತಮಣಿಮಯ ಪೀ
ದೊಳ್ ನಾಭಿರಾಜನುಂ, ಕನಕಪೀಠದೊಳ್ ಕಚ್ಛಮಹಾಕಚ್ಛರುಂ
ಸೋಮವಂಶಲಲಾಮನುಂ ಸೋಮಪ್ರಭನುಂ ಹರಿವಂಶಾಗ್ರಗಣ್ಯಂ ಹ
ಕಾಂತನುಂ ನಾಥವಂಶನಾಯಕನ ಕಂಪನನುಂ, ಉಗ್ರವಂಶಾಗ್ರಗಣ್ಯಂ
ಕಾಶ್ಯಪನುಂ ಇದೆ, ಮತ್ತಂ ಪೆಱರುಮಱಿಕೆಯ ನಾಯಕರುಂ ಮ
ಮಕುಟಬದ್ಧರಾತ್ಮೋಚಿತ ಪ್ರದೇಶಾಸನಂಗಳೊಳಿರ್ದೋಲಗಿಸುತ್ತಿರ್ದನ್ನೆ
ಮಾದಿದೇವನ ಪರಿನಿಷ್ಕ್ರಮಣಕಲ್ಯಾಣ ಮತ್ಯಾಸನ್ನಮೆಂಬುದಂ ನಿಜ
ವಧಿಬೋಧದಿಂದಮಱಿದು ಸಂಗೀತಪ್ರಸಂಗದಿಂದವೋಲಗಿಸಲೆಂದು ...
ಸುರೇಂದ್ರಂ ಬಂದು ಭಗವದಾಸ್ಥಾನಮಂಟಪಮನವನತಮಣಿ ಕಿರೀಟರತ್ನ
ಪ್ರದೀಪಂಗಳಿಂದಮರ್ಚಿಸಿ ಸಿಂಹಾಸನೋಪಾಂತಸ್ಥಿತಕನಕ ಪೀಠದೊ
ಕುಳ್ಳಿರ್ದು

ಪರಮನನೊಲಗಿಸಿ ಕೃತಾ ।
ರ್ಥರೆಮಪ್ಪೆವವೋಘವವಸರಂ ಗುಡಿಸುವುದೆಂ ॥
ದಿರದೆನ್ನನಧಿಕ ಭಕ್ತಿಯೈ ।
ತರೆ ಬಂದುದು ದೇವದಿವಿಜ ಪೇಟಕಮನಿತುಂ ॥ ೩ ॥

ಸಮನಿಸಲಿವರ ಮನೋರಥ ।
ಮುಮರೀನೃತ್ಯಪ್ರಸಂಗಮಕ್ಕಭವ ಭವ ॥
ತ್ಕ್ರಮು ಕಮಳಸೇವೆಯಿಂದಿಂ ।
ತುಮನಂತಂ ಗೀತವಾದಿತಂ ಫಲಮಲ್ತೇ ॥ ೪ ॥

ಎಂದಿಂದ್ರಂ ಬಿನ್ನವಿಸಲೊ ।
ಡಂ ದರಹಸಿತಾನನಾಬ್ಜನಾವುದು ನಿಮಗಾ ॥
ನಂದಮುದಕ್ಕೆನೆ ಸುತಸುರ ।
ವೃಂದಂ ಸಂಗೀತರವಕ್ಕೊಡರ್ಚಲೇವೇಳ್ದಂ ॥ ೫ ॥

ಪೇಟ್ಟಿದು ಮನಂಗನಿರ್ದಡೆ ।
ವೇಟ್ಟವೂಲೊರ್ಮೊದಲೆ ಗೀತವಾದಿತರವಮು ॥
ವೇಟ್ಟಿದೊ ಸಭೆಯುಂ ರಸದೊಳ್ ।
ಪೂಟ್ಟಿಪೊಲೆಸೆದತ್ತು ದಿವಿಜಪೇಟಕಜನಿತಂ ॥ ೬ ॥

ಮದನವ ಬಿಲ್ಲೊಳುಮಂತನ ।
ಸುದತಿಯ ಬೀಣೆಯೊಳಮೆಸೆವ ದನಿಯುಂ ಮನಿಲಿಸಿ ॥
ತ್ತಿದುದಲೆನಿಸಿದುದು ಸುರತೂ ।
ರ್ಯದ ರವದೊಳ್ ಪುದಿದ ಸುರವಧೂಗೀತರವಂ ॥ ೭ ॥

ಅಂಬರಭೂಷಣ ಮಾಲಾ ।
ಡಂಬರದ ಬೆಡಂಗನಮರ ನರ್ತಕಿಗಡಮೇ ॥
ನೆಂಬುದೊ ಧರಣೇಂದ್ರಂಗಮ ।
ಳುಂಬಂ ಪೊಗಟಲ್ಕೆ ರೂಪುನೀಳಾಂಜನೆಯಾ ॥ ೮ ॥

ಕಳೆಗೀತಂ ವಾದ್ಯಂ ನೃತ್ಯ ।
ಲೀಳೆ ಪೆಱರ್ಗೊಪ್ಪದೀಕೆಗಲ್ಲದೆಗಣಿಕಾ ॥
ತಿಳಕಮಿವಳ್ ನರ್ತನ ರಸ ।
ದೊಳೆ ನಿಚ್ಚಂ ಮೆಚ್ಚುಗೊಳ್ವಳಿಂದ್ರನ ಕೈಯೊಳ್ ॥ ೯ ॥

ಎನಿಸಿದ ನೀಳಾಂಜನೆ ಕ ।
ಬ್ಬಿನ ಬಿಲ್ಲಂ ಮಸೆದ ಮದನನಲರ್ಗಣೆಬದುಕಿ ॥
ತ್ತೆನಿಸುತ್ತೊಳಪೊಕ್ಕಳ್ ಭೋಂ ।
ಕೆನೆ ನಿಖಿಳ ಜನಾಂತರಂಗಮುಂ ರಂಗಮುಮಂ ॥ ೧೦ ॥

ನಿಲ್ತುವು ರಸಂಗಳಿಲ್ಲಿ ಮ ।
ಡಲ್ತೆನೆ ಭಂಗಿಯೊಳನಂಗಮು ಜಂಗಮು ಲತೆವೊಲ್ ॥
ನಿಲ್ತು ಜವನಿಕೆಯ ಮಱೆಯೊಳ್ ।
ಪೊಲ್ತುಳವಳ್ ಮುಗಿಲ ಮಱೆಯ ವಿದ್ಯುಲ್ಲತೆಯುಂ ॥ ೧೧ ॥

ಓಸರಿಸಿದ ಜವನಿಕೆಯೊಡ ।
ನೋಸರಿಸಿದನಿಸಲೆ ಕಂತು ಪುಷ್ಪಾಂಜಳಿಯಂ ॥
ಸೂಸಿದ ಪದದೊಳೆ ಸಭೆಗಂ ।
ಸೂಸಿದನೊಡನೆ ನನೆಯ ಮೊನೆಯಂಬುಗಳಂ ॥ ೧೨ ॥

ನೆಗೆಲಿಱ ನಿಜಪ್ರತಿಬಿಂಬಂ ।
ನೆಗಬ್ದಿರಸುಗಳುರದೊಳೆಸೆವ ಹಾರಮಣಿ ಜೋ ॥
ತಿಂಗಳೊಳವರೆರ್ದೆಯುನಲ್ಲಿಂ ।
ಪುಗುವುದನನುಕರಿಸಿ ರಂಗದೊಳ್ ಸೊಗಯಿಸಿದಳ್ ॥ ೧೩ ॥

ಭಾರತಿ ಸಾತ್ವಕಿ ಕೈಶಿಕೆ ।
ಯಾರಭಟಿಯುಮೆಂಬ ವೃತ್ತಿಯೊಳ್ ರಸಮಂ ಸಂ ॥
ಚಾರಿಸುವ ಭಾವಮಂ ವಿ ।
ಸ್ತಾರಿಸುವ ಬೆಡಂಗು ಬೇಱಿ ನೀಳಾಂಜನೆಯಾ ॥ ೧೪ ॥

ಭಾವದನು ಭಾವದೆಸೆವ ವಿ ।
ಭಾವದ ಪಸುಗೆಗಳೊಳೊಸರ್ವ ರಸದಭಿನಯಮಂ ॥
ಭಾವಿಸುವೊಡಾದಿ ದೇವನ ।
ದೇವೇಂದ್ರನ ಬಗೆಗಮುಸದಳಂ ನರ್ತಕಿಯಾ ॥ ೧೫ ॥

ಪುಗುವ ಪೊಱಮಡುವ ತೆರನೆರ್ದೆ ।
ವುಗುವಳ್ ಪೊಱಮಡುವಳೆನಿಸೆ ಪೊಸತಮರ್ದಂ ಮೋ ॥
ಗುಗುಬ್ದಿಪಳೆನಿಸಿ ಮುಗುಳ್ನಗೆ ।
ನಗೆಮೊಗದ ಬೆಡಂಗವಳ್ಗದೇನೊಪ್ಪಿದುದೋ ॥ ೧೬ ॥

ಪೊಸವೆಳ್ದಿಂಗಳ್ ದೆಸೆದೆಸೆ ।
ಗೆಸೆದುದು ಕುಮುದವನ ಮಲರ್ದುದೆಂಬಂತಿದೇ ॥
ನೆಸೆದುದೊ ಕಟಾಕ್ಷಮಾಲಾ ।
ಪ್ರಸರಂ ಭ್ರೂಲಾಸ್ಯಸುಂದರಂ ನರ್ತಕಿಯಾ ॥ ೧೭ ॥

ಅವಯುವದಿಂದವೆ ದೇವಾಂ ।
ಗವಸ್ತ್ರದುಳ್ಳುಡೆಯು ನಾಕೆಯೋಸರಿಸುವ ಸೂ ॥
ಸುವ ಹಾರಲತೆಯನಳವಡಿ ।
ಸುವ ಭಂಗಿಯೆ ಮದನ ರಾಜರಾಜ್ಯ ವಿಳಾಸಂ ॥ ೧೮ ॥

ಪಾಟಿಸಿ ಮಾಡಿದ ಸೊರ್ಕಿವ ।
ಳಾಟವೆ ವಲಮೆನಿಸಿ ನೆಗಲ್ದ ನೀಲಾಂಜನೆ ತ ॥
ನ್ನಾಟವನೊಱಲ್ದು ನೋಡುವ ।
ನೋಟಕರಂ ತವದ ಮಾಲ್ಕೆಯಿಂ ಮೋಹಿಸಿದಳ್ ॥ ೧೯ ॥

ಸುರಗಣಿಕಾನಾಟ್ಯರಸಂ ।
ಪರಮನ ಚಿತ್ತಮುಮನೆಯ್ದೆ ರಂಜಿಸಿದುದು ವಿ ॥
ಸ್ಫುರಿತ ಸ್ಫಟಿಕಂ ಶುದ್ಧಾಂ ।
ತರಂಗಮೇನನ್ಯರಾಗದಿಂ ರಂಜಿಸದೇ ॥ ೨೦ ॥

ಆ ಮಧುರಾಕಾರಲತಾ ।
ಕೋಮಳೆ ತನಗಾಗಳಾಯುರಂತಂ ಬರೆಸೌ ॥
ದಾಮಿನಿವೊಲ್ ಭೋಂಕನೆ ಸುರ ।
ಕಾಮಿನಿ ರಂಗದೊಳದೃಶ್ಯೆಯಪ್ಪುದುಮಾಗಳ್ ॥ ೨೧ ॥

ರಸಭಂಗಭಯದಿನಿಂದ್ರಂ ।
ಪೊಸತೊಂದಾದೊರೆಯ ಪಾತ್ರಮಂ ತಂದನು ಸಂ ॥
ಧಿಸುವುದು ಮದನಮುಬಿಯ ।
ಲ್ಕೆ ಸುರಾಸುರಸಮಿತಿಗಾದುದಿಲ್ಲಾ ಕ್ಷಣದೊಳ್ ॥ ೨೨ ॥

ಆ ನೀಲಾಂಜನೆಯೆಂದೆವು ।
ನೋನಯನೋದಿತ ವಿಮೋಹದಿಂದಿರೆ ಸಭೆ ವಿ ॥
ದ್ಯಾನಿಳಯನಱಿದದಂ ದೇ ।
ಹಾನಿತ್ಯತೆಗಿಂತು ನಾಡೆಚೋದ್ಯಂ ಬಟ್ಟಂ ॥ ೨೩ ॥

ನಾರೀರೂಪದ ಯಂತ್ರಂ ।
ಚಾರುತರಂ ನೋಡೆ ನೋಡೆ ಕರಗಿದುದೀ ಸಂ ॥
ಸಾರದ ನಿತ್ಯತೆ ಮನದೊಳ್ ।
ಜೇರೂಱಿದುದೀಗಳಿಂತಿರಂ ಕಡೆಗಣಿಪೆಂ ॥ ೨೪ ॥

ಕೋಟಿತೆ ಱದಿಂದಮೆಸೆವೀ ।
ನಾಟಕಮಂ ತೋಱಿಪಾಣ್ಡಳಿಲ್ಲಳ್ ಬಗೆಯೊಳ್ ॥
ನಾಟುವಿನಮಮರಿ ಸಂಸೃತಿ ।
ನಾಟಕಮುಮನೆನಗೆ ನೆಱೆಯೆ ತೋಱಿದಳೀಗಳ್ ॥ ೨೫ ॥

ತನುರೂಪವಿಭವ ಯೌವನ ।
ಧನ ಸೌಭಾಗ್ಯಾಯುರಾದಿಗಳ್ಗೆಣೆ ಕುಡುಮಿಂ ॥
ಚಿನ ಪೊಳೆಪು ಮುಗಿಲನೆಲಲಿಂ ।
ದ್ರನ ಬಿಲ್ ಬೊಬ್ಬುಳಿಕೆಯುರ್ಬು ಪೊರ್ಜಿದ ಭೋಗಂ ॥ ೨೬ ॥

ಕಷ್ಟಂ ದುಃಖಾನಳ ಪರಿ ।
ಪುಷ್ಟಂಚೆಃ ಗತಿಚತುಷ್ಟಯಂ ಪ್ರಾಣಿಗೆ ಸಂ ॥
ತುಷ್ಟತೆಯನೆಯ್ದೆ ಪಡೆದುಮ ।
ಭೀಷ್ಟಸುಖಪ್ರದಮುದೊಂದೆ ಮುಕ್ತಿಸ್ಥಾನಂ ॥ ೨೭ ॥

ಎನಿತೊಡಲಂ ತಾಳ್ದಿದುದಿ ।
ಲ್ಲೆನಿತೊಡಲಂ ಬಿಸುಟುದಿಲ್ಲ ವಿಷಯಾನಳನಿಂ ॥
ದೆನಿತೆನಿತಂ ಮಱುಗಿದುದಿ ।
ಲ್ಲನಂತ ಸಂಸಾರ ಗಹನದೊಳ್ ಜೀವಂಗಳ್ ॥ ೨೮ ॥

ಎನಿತಾನುಮಂಬುನಿಧಿಗಳ ।
ನನೇಕ ನಾಕಂಗಳಲ್ಲಿ ಕುಡಿದುಂ ಪೋಯ್ತಿ ॥
ಲ್ಲೆನಗೆ ನರಭೋಗ ಮೆಂಬೀ ।
ಪನಿಪುಲ್ಲಂನಕ್ಕೆ ತೃಷ್ಣೆ ಪೇೞ್ ಪೋದಪುದೇ ॥ ೨೯ ॥

ಬಗೆದೀಡಾಡೆ ದುರಂತದುಃಖತತಿಗಳ್ ಬೆನ್ನಟ್ಟಿದುರ್ವೋಹ ಮ ।
ತ್ಸ್ಯಗಣಂಗಳ್ ಕಡಿದಿಕ್ಕೆ ಲೋಭಮಕರಾನೀಕಂಗಳಾಟಂದು ನು ॥
ಣ್ಣಗೆ ನುಂಗುತ್ತಿರೆ ಮಾರರಾಗ ಶಿಶುಮಾರಂಗಳ್ ಮಹೋಗ್ರಂಗಳಿ ।
ನ್ನೆಗಮೋರಂತೆ ತೊೞಲ್ದೆನಿಂ ತಿರಿಯಲಾಱೆಂ ಭವಾಂಭೋಧಿಯೊಳ್ ॥

ಆಗ ಲೋಕಾಂತಿಕ ದೇವರ್ ಆದಿ ದೇವನ ಬಳಿಗೆ ಬಂದು.

ಸುರಭೂಜ ಪ್ರಸವಂಗಳಂ ಸುರಿದು ಪಾದಾಂಭೋಜದೊಳ್ ದೇವ ಭೀ ।
ಕರಕರ್ಮದ್ವಿಷತಂ ಪಡಲ್ವಡಿಸಲುಂ ಭವ್ಯರ್ಕಳಂ ಘೋರ ಸಂ ॥
ಸರಣಾಂಭೋನಿಧಿಪಾರಮಂ ಸಲಿಸಲುಂ ಸಾಲ್ಗುಂ ತ್ವದುದ್ಯೋಗ ಮಿ ।
ನ್ನಿರವೇಂ ತ್ರೈಭುವನೋಪಕಾರ ಕರಣವ್ಯಾಪಾರ ಪಾರಾಯಣಾ ॥ ೩೦ ॥

ವಚನ: ಎಂದವರ್ ಪ್ರತಿಬೋಧಿಸಿ ಪೋಗಲೊಡಂ ಪರಿನಿಷ್ಕ್ರ ಮಣ ಕಲ್ಯಾಣೋತ್ಸವೋತ್ಸುಕರಾಗಿರಲಾ ಸಕಳಸುರಸಮಾಜಂ ಬೆರಸಮರರಾಜನುಂ ಮಾಡಿದ ಜನ್ಮಾಭಿಷೇಕಕ್ಕಂ ಬೞಿಕ್ಕ ಮಾಡಿದ ರಾಜ್ಯಾಭಿಷೇಕಕ್ಕಮಿದುವೆ ಮಿಗಿಲೆಂಬಂತಾಗಿ ಪಂಚಮಹಾಂಬುಧಿ ಪವಿತ್ರಜಳಪರಿ

ಪೂರ್ಣ ಸುವರ್ಣಕಳಶಂಗಳಿಂದಮಭಿಷೇಕಂಗೈಯ್ದು ತದನಂತರದೊಳ್ ಭರತರಾಜನಂ ಬರಿಸಿ ರಾಜ್ಯಾಭಿಷೇಕಂ ಗೈಯ್ದ [ರ್].

ಭರತಂಗಭಿಷೇಕ ಪುರ ।
ಸ್ಸರಮೂರ್ಜಿತ ರಾಜ್ಯಪದವಿಯುಂ ಕೊಟ್ಟು ನಿಜಾ ॥
ದರದಿಂದೆ ಬಾಹುಬಲಿಗಂ ।
ಪರಮಂ ಯುವರಾಜಪದವಿಯಂ ದಯೆಗೈಯ್ದು ॥ ೩೨ ॥

ವಚನ: ಅಂತು ದಯೆಗೈಯ್ದಯೋಧ್ಯಾಪೌದನ ಪುರಾಧಿಪತ್ಯದೊಳಿರ್ವರುಮಂ ನಿಱಿಸಿ ನಿರ್ಭರ ಪ್ರಮೋದ ಪರಂಪರಾಪರೀತ ದಿವಿಜ ಮನುಜ ಸಮಾಜ ದೊಳ್.

ಭಗವತ್ಪರಿನಿಷ್ಕ್ರಮಣ ।
ಪ್ರಗುಣೀಕೃತ ಸುರಮೃದಂಗ ರವಮೊಂದೆಡೆಯೊಳ್ ॥
ನೆಗಲ್ದುದು ರಾಜ್ಯಸಮರ್ಪಣ ।
ಯುಗ ಪತ್ಪ್ರತಿಹತಮುಮಂದರರವಮೊಂದೆಡೆಯೊಳ್ ॥ ೩೩ ॥

ನೆಗಲ್ದ ತಪೋರಾಜ್ಯದ ಬಗೆ ।
ಮಿಗೆನಿಂದಂ ವೃಷಭನಾಥನತ್ತೊಂದೆಡೆಯೊಳ್ ॥
ಜಗತೀರಾಜ್ಯದಬಗೆ ಕೈ ।
ಮಿಗೆನಿಂದಂ ಭರತರಾಜನಿತ್ತೊಂದೆಡೆಯೊಳ್ ॥ ೩೪ ॥

ಸುರಶಿಲ್ಪಿಗಳಿಂ ಶಿಬಿಕಾ ।
ವಿರಚನೆಪೆಸೆಗೆಸೆಯುತಿರ್ದುದತ್ತೊಂದೆಡೆಯೊಳ್ ॥
ನರಶಿಲ್ಪಿಗಳಿಂ ಮಂಡಪ ।
ವಿರಚನೆ ನೆಗಳುತ್ತಮಿರ್ದುದಿತ್ತೊಂದೆಡೆಯೊಳ್ ॥ ೩೫ ॥

ಸುರವೃಂದಾರಕರಿಂದಂ ।
ಪರಿವೃತನಾದಂ ಚಿದಾತ್ಮನಿತ್ತೊಂದೆಡೆಯೊಳ್ ॥
ನರವೃಂದಾರಕರಿಂದಂ ।
ಪರಿವೃತನಾದಂ ಮಹಾತ್ಮನಿತ್ತೊಂದೆಡೆಯೊಳ್ ॥ ೩೬ ॥

ತನಯುರಸಿಟ್ಟು ಸಂತತಿಯೊಳಿಂತಿಮಗಂ ಬಗೆವೇಟದೇಕೆ ಪೋ ।
ದನೊ ನೃಪನೆಂತು ಸೈರಿಸುವೆವಯ್ಯ ವಿಯೋಗಮನೆಂದು ಸೋರ್ವಕ ॥
ಣ್ಬನಿಯ ತೆರಳ್ಕೆ ಗದ್ಗದಿಕೆಗೊಳ್ವ ಸರಂವಿಗೆ ಪೋದರಾತ್ಮ ನಾ ।
ಥನಬಲಿಯಂ ಮನಂಮುಱುಕನೊಯ್ಯೆ ಯಶಸ್ವತಿಯುಂ ಸುನಂದೆಯುಂ॥

ಆ ಮಹಾರಾಣಿಯರಿಬ್ಬರನ್ನೂ ಹಿರಿಯರು ಸಮಾಧಾನ ಪಡಿಸಿ ಹಿಂದಕ್ಕೆ ಕರೆದು ತಂದರು. ಭರತಾದಿಗಳು ಮಾತ್ರ ಆದಿನಾಥನನ್ನು ಹಿಂಬಾಲಿಸಿದರು. ಇಂದ್ರಾದಿಗಳು ಶಿಬಿಕೆಯನ್ನು ಹೊತ್ತು ಅಯೋಧ್ಯಾಪುರದ ಬಳಿ ಸಿದ್ಧಾರ್ಥವನದ ಮಧ್ಯೆ ಚಂದ್ರಶಿಲಾತಳದಲ್ಲಿ ಇಳಿಸಿದರು. ಆದಿನಾಥನು ಪೂರ್ವಾಭಿಮುಖವಾಗಿ ಪಲ್ಯಂಕಾಸನದಲ್ಲಿ 'ಲೋಚ್' ತನ್ನ ಕೈಯಿಂದಲೇ ಮಾಡಿಕೊಂಡು ಮುನಿದೀಕ್ಷೆ ಯನ್ನು ಕೈಕೊಂಡನು. ಅನಂತರ ದೇವೇಂದ್ರನು ಪರಿನಿಷ್ಕ್ರಮಣ ಕಲ್ಯಾಣ ವನ್ನು ನೆರವೇರಿಸಿ ದೇವಲೋಕಕ್ಕೆ ತೆರಳಿದನು. ಇತ್ತ ಭರತೇಶ ತಮ್ಮಂದಿ ರೊಡನೆ ರಾಜಧಾನಿಗೆ ಮರಳಿದನು. ಅವರ ಕಚ್ಛಮಹಾಕಚ್ಛರು ಭರತನ ಮಗ ನಾದ ಮರೀಚಿಯೇ ಮೊದಲಾದ ನಾಲ್ಕುಸಾವಿರ ರಾಜಪುತ್ರರು ಹಿಂದಿರುಗಲೊಲ್ಲದೆ ಜಾತರೂಪವನ್ನು ಅಂಗೀಕರಿಸಿ ಆದಿದೇವನೊಡನೆ ತಪಸ್ಸಿಗೆ ತೆರಳಿದರು.

ಆದಿದೇವನು ಆರು ತಿಂಗಳು ತಪಸ್ಸು ಮಾಡಿ ಅನಂತರ ಒಂದು ದಿವ ಹಸ್ತಿನಾಪುರದ ಶ್ರೇಯಾಂಸ ರಾಜನಿತ್ತ ಕಬ್ಬಿನ ಹಾಲನ್ನು ತನ್ನ ಪಾಣಿಪುಟದಲ್ಲಿ ಸ್ವೀಕರಿಸಿ ಜಿನಕಲ್ಪವೆಂಬ ಆಚರಣೆಯನ್ನು ಅಂಗೀಕರಿಸಿ ಸಾವಿರ ವರ್ಷ ನಾನಾ ಸ್ಥಳಗಳಲ್ಲಿ ಸಂಚರಿಸಿ ಕೊನೆಗೆ ಪುರಿಮತಾಳಪುರದ ಹೊರವಲಯದ ಉದ್ಯಾನ ವೊಂದರ ಆಲದಮರದ ಕೆಳಗೆ ಪೂರ್ವಾಭಿಮುಖನಾಗಿ ಪಲ್ಯಂಕಾಸನದಲ್ಲಿ ತಪ ವನ್ನು ಕೈಗೊಂಡನು. ಇದೇಸ್ಥಳದಲ್ಲಿಯೇ ಮೂರು ಲೋಕವನ್ನೂ ಮೂರು

ಕಾಲವನ್ನೂ ಕ್ಷಣದಲ್ಲಿ ಅರಿಯುವಂತಹ ಕೇವಲ ಜ್ಞಾನವನ್ನು ಆದಿದೇವನು ಪಡೆದುಕೊಂಡನು. ಆಗ ಸೌಧರ್ಮೇಂದ್ರನು ಸತಿಸಮೇತ ಅಲ್ಲಿಗೆ ಬಂದು ದೇವದೇವನನ್ನು 'ಸಮವಸರಣ' ಕ್ಕೆ ಕರೆದೊಯ್ದನು.

ವಚನ: ಅನ್ನೆಗಮಿತ್ತ ಭರತರಾಜನಯೋಧ್ಯೆಯೊಳಾಸ್ಥಾನಮಂ ಟಪದೊಳಿರೆ ತತ್ಪುರೋಹಿತಾಯುಧ್ಯಕ್ಷಾಂತಃಪುರ ವೃದ್ಧಕಂಚುಕಿಗಳ್ ಬಂದು ಮಹೀತಳಾಶ್ಲಿಷ್ಟಜಾನು ಲಲಾಟಪಟ್ಟರ್ ಪ್ರಣಾಮಾರ್ಪಣಪುರಸ್ಸರಂ ಶಿರೋವೇಷ್ಠನ ಪ್ರಳಂಬಚೋಳಾಂಚಲಪಿಹಿತವದನರಾಗಿ

ಪುರುದೇವಂಗಾದ ಕೈವಲ್ಯದ ಮಹಿಮೆಯನುಗ್ರಾಯುಧಾಗಾರದೊಳ್ ಭಾ ।
ಸ್ವರ ಚಕ್ರೋದ್ಭಾಸಿಚಕ್ರೋದ್ಭವದ ಪಿಱಿದುಮಾಶ್ಚರ್ಯಮಂ
ಶೋಭಿತಾಂತಃ ॥
ಪುರಮೊಳ್ ಮಾದೇವಿಗಾದಾತ್ಮಜನೊಸಗೆಯನಾಮೂವರುಂ ಬಿನ್ನಪಂಗೆ ।
ಯ್ದಿರೆ ಜಾತನಂದನೀಮೂಱುೊಸಗೆಗಳೊಳಮಿನ್ನಾವುದುಂ
ಮುನ್ನಮಾಲ್ಪಿಂ ॥ ೩೮ ॥

ಧರ್ಮಾರ್ಥಕಾಮಮೆಂಬಿವು ।
ಧರ್ಮಾರ್ಥಜನಕ್ಕೆ ನೆಱೆದನೆರ್ಮಂತವಱೊಳ್ ॥
ಧರ್ಮಂ ಪ್ರಧಾನಮರ್ಥಂ ।
ಧರ್ಮಾಂಘ್ರಿಪ ಫಳಮದರ್ಕೆ ರಸಮುದುಕಾಮಂ ॥ ೩೯ ॥

ಆದಱಿಂದಮಿವಱೊಳರ್ಹ ।
ತ್ಪದ ಪದ್ಮಪ್ರಣತಿ ಮುಖ್ಯಮೊಸಗೆಯುಮೆಮಗಿ ॥
ನ್ನಿದಱಿಂದಮಿಲ್ಲಿ ಮೇಲಾ ।
ವುದೆಂದು ಬಗೆಬೆದಱಿ ಭಕ್ತಿನಿರಂತಂ ಭರತಂ ॥ ೪೦ ॥

ಪುರಜನ ಸಕಳಾಂತಃಪುರ ।
ಪರಿಜನಮುದಕರಿ ಕರೇಣಾಪರಿವೃತನಂಭೋ ॥
ಧರರವಗಭೀರ ಭೇರೀ ।
ಸ್ವರಪೂರಿತ ಸಕಳಗಗನದಿಗವನಿಮಧ್ಯಂ ॥ ೪೧ ॥

ವಚನ : ಅಂತು ಬಂದು ಗಗನಮಂಡಳಮನಲಂಕರಿಸಿದ ಭವನಾಸ್ಥಾನಮಂಟಪಮಂ ಗೆಂಟಱಳೆಕಂಡು ಮದಗಜೇಂದ್ರಮನಿೞಿದು ರಾಜಚಿಹ್ನಂಗಳನಿರಿಸಿ ಧೂಳಿರಾಳಮೂನಸ್ತಂಭಾಂಬಃ ಖಾತಿಕಾವಲ್ಲೀವನೋಪವನಪತಾಕಾವನಿಕಲ್ಪಭೂರುಹ ಭೂತಳಸ್ತೂಪಪ್ರಾಸಾದಮಾಳಾವಿಳಾಸಿತಮುಮನವಱಿಡೆಯೆಡೆಯ ಕನಕಪ್ರಾಕಾರವೇದಿಕಾನೇಕ ಗೋಪುರದ್ವಾರಸೌಳಕಾಷ್ಟ ಮಂಗಳ ನವನಿಧಿತೋರಣ ಧೂಪಘಟನಾಟ್ಯಶಾಲಾಚೈತ್ಯವೃಕ್ಷಸಿದ್ಧಾರ್ಥ ಮಹೀರುಹ ಮಹಾಶೋಭೆಯುಮಂ ಶ್ರೀಮಂಟಪಶ್ರೀಯುಮನತ್ಯಂತ ವಿಸ್ಮಯಸ್ಮೇರ ಮುಖನುಮತಿಚಿದನ್ಯಸ್ತ ಹಸ್ತಪಲ್ಲವನುಂ ಮುಹುರ್ಮುಹುರಾಂದೋಳಿತಮಸ್ತಮಂ ಉದಂಚದ್ರೋಮಾಂಚ ಕಂಚುಕಿ ತನುಮಾಗಿ ನೋಡುತ್ತುಮುತ್ತುಂಗ ಪ್ರಥಮ ದ್ವಿತೀಯ ತೃತೀಯ ಪೀಠಗಳನನೇಕಾರ್ಚನೆಗಳಿಂದರ್ಚಿಸುತ್ತುಂ ಮೂಱುಂ ಸೊಬ್ಬಲಗೊಂಡು ಜಗತ್ರಿತಯಾಧೀಶ್ವರ ಶ್ರೀಮುಖಾಭಿಮುಖನಾಗಿ ನಿಂದು ಸ್ತುತಿಸಿ

ಭುವನೇಶ್ವರ ನಿಜರೂಪ ।
ಸ್ತವವಸ್ತು ಸ್ತವಗುಣಸ್ತವಂಗಳನವಱಿಂ ॥
ತುವರಂ ಬಣ್ಣಿಸಲಮರೇಂ ।
ದ್ರ ವಾಸುಕಿ ಪ್ರಭುಗರಾರ್ತರಿಲ್ಲೆನ್ನಳವೇ ॥ ೪೨ ॥

ಅಳತೆಗೆ ಕೂಕಕ್ಕೆಣಿಕೆಗೆ ।
ಯೊಳಗಾದುವು ಸಕಳವಸ್ತುಗಳ್ ಭುವನಜನ ॥
ಕ್ಕಳೆಯಲ್ ತೂಗಲ್ಕೆಣಿಸ ।
ಲ್ಕಳುಂಬಮೆನಿಸಿದುವು ನಿನ್ನ ಗುಣಗಣಮುರ್ಹಾ ॥ ೪೩ ॥

ಭವನಿಗಳದತೊಡರಂ ಕಳೆ ।
ಭವಜಳಧಿಯ ತಡಿಗೆಸಾರ್ಚೆ ಭವಗಹನದುಪ ॥
ದ್ರವಮಂ ಕಿಡಿಸು ಭವಾಂತಕ ।
ಭವನುಕ್ಕೊಯ್ ತಡೆಯದೆನ್ನಂ ನೀಂ ಭವಮಥನಾ ॥ ೪೪ ॥

ಅಮರೇಂದ್ರೋನ್ನತಿಖೇಚರೇಂದ್ರವಿಭವಂ ಭೋಗೀಂದ್ರಭೋಗಂ ಮಹೇಂ
ದ್ರ ಮಹೈಶ್ವರ್ಯಮಿವೆಲ್ಲಮಧ್ರುವಮಿವಂ ಬೇಳ್ಪಂತು ಬೇಳಲ್ಲೆನು ॥
ತ್ತಮದೀಕ್ಷಾವಿಧಿಯುಂ ಸಮಾಧಿಮರಣಂ ಕರ್ಮಕ್ಷಯಂ ಬೋಧಿಲಾ ।
ಭಮಮೋಘಂ ದೊರೆಕೊಳ್ವುದಕ್ಕೆಮಗೆ ಮುಕ್ತಿಶ್ರೀಮನೋವಲ್ಲಭಾ ॥

ವಚನ: ಎಂದನೇಕ ಸ್ತೋತ್ರ ಪವಿತ್ರೀಕೃತಮುಖಾರವಿಂದನಮರ ಸಮಾಜ ವಿಸ್ಮಯ ಸ್ಮೇರೇಕ್ಷಣೈಕ ಲಕ್ಷಲಕ್ಷಣನಾಗಿ ನಿಜೋಚಿತ ಪ್ರದೇಶ ಸ್ಥಾನದೊಳ್ ಕುಳ್ಳಿರ್ದು

ನೃಸುರಾಸರ ಪರಿಷತ್ಸ ।
ಸ್ಯ ಸಂಕುಳಂ ಜಿನವಚೋಮೃತಾಸಾರ ಮನಂ ॥
ದಸದಳಮೆ ಬಯಸೆ ಭರತಂ ।
ಬೆಸಗೊಂಡಂ ಜಿನನಖಿಳವಸ್ತು ಸ್ಥಿತಿಯಂ ॥ ೪೬ ॥

ಅಂದಪಗತತಾಲ್ವೋಷ್ಠ ।
ಸ್ಪಂದನಮಸ್ಪೃಶ್ಯಕರಣವರ್ಣಂ ಜಗದಾ ॥
ನಂದಕರಂ ಜಳಧರರವ ।
ಸೌಂದರ ಮತಿವಿಶದ ಮಧುರಗಂಭೀರರವಂ ॥ ೪೭ ॥

ಸುರದನುಜ ಮನುಜವರಕಿ ।
ನ್ನರ ತಿರ್ಯಗ್ಗಣಮನೆಯ್ದೆ ತಿಳಿಪಿದುದರ್ಹ ॥
ತ್ಪರಮೇಶ್ವರಗದಿತ ಮನೋ ।
ಹರ ಧರ್ಮಾಮೃತಮದಿದೊಡಮಮೃತಂ ಸವಿಯೇ ॥ ೪೮ ॥

ವಚನ: ತದನಂತರಂ ಕುರುವಂಶಚೂಡಾಮಣಿಯೆನಿಸಿದ ಸೋಮಪ್ರಭನು ಮಾತನನುಜನಾದಿದಾನತೀರ್ಥಕರ ಪ್ರವರ್ತನಂ ಶ್ರೇಯಾಂಸನುಂ ಭರತೇಶ್ವರಾನುಜನನಂತ ವೀರ್ಯನುಂ ಭಟ್ಟಾರಕಪಾದಮೂಲದೊಳ್ ದೀಕ್ಷೆಯಂ ಕೈಕೊಂಡು ಗಣಧರರಾದರ್; ಬ್ರಾಹ್ಮಿಯುಂ ಸುಂದರಿಯುಂ ಮತ್ತಂ ನಿರ್ವೇಗೆಯರ್ ವಿವಾಹವಿಮುಖೆಯರಾಗಿ ಗುರುಪ್ರಸಾದದಿಂ ದೀಕ್ಷೆಯಂ ಕೈಕೊಂಡು ಗಣನೀಗಣ ಪ್ರಧಾನೆಯರಾದರ್.............. ಭರತೇಶ್ವರನುಂ ಬಾಹುಬಲಿಕುಮಾರನುಂ ಜಿನೇಶ್ವರಪಾದಪದ್ಮಂಗಳ್ಗೆರಗಿ ನಿಜರಾಜಧಾನಿಗಳ್ಗೆ ಪೋದರ್.

---

೪ ಭರತಚಕ್ರವರ್ತಿಯ ದಿಗ್ವಿಜಯ

ಶ್ರೀಪರಿಪೂರ್ಣಂ ಭರತಮ ।
ಹೀಪಾಳಂ ಚಕ್ರಪೂಜೆಗೆಯ್ದಂ ಸಕಳ ॥
ಕ್ಷ್ಮಾಪ ಶಿರೋರತ್ನಾಂಶು ।
ವ್ಯಾಪಿತಚರಣಂ ಸರಸ್ವತೀಮಣಿಹಾರಂ ॥ ೧ ॥

ನೆಲನಾಕಾಶಂ ದಿಶಾಮಂಡಲಮೆನಿತನಿತುಂ ಚಕ್ರವರ್ತಿ ಪ್ರತಾಪಾ ।
ನಲ ತೀವ್ರಜ್ಯೋತಿಯಿಂ ಪರ್ವುವುದನಿದುವೆಪೇಳ್ದಪ್ಪುದೆಂಬಂತಿರೌರ್ವ ॥
ಜ್ವಲನಜ್ವಾಲಾಕಳಾಪೋದ್ಗಮಮನನುಗುಣಂಮಾಡುತುಂದ್ವಾದಶಾರ್ಕೋ
ಜ್ವಲತೇಜಶ್ಚಕ್ರರೂಪಂ ಬೆಳಗಿದುದು ದಿಶಾಚಕ್ರಮಂ ಚಕ್ರರತ್ನಂ ॥ ೨ ॥

ಅದು ದೇವಲೋಕದಂತೊ ।
ಪ್ಪಿದುದು ಸಹಸ್ರಾರ ಸಹಿತಮದು ಚಕ್ರಿಯ ತೇ ॥
ಜದ ಜಸದ ಮರಿಯ ವೀರ್ಯದ ।
ಪೊದಲ್ದ ಭುಜವೀರ್ಯದೊಂದು ರೂಪನೆಪೋಲ್ಕುಂ ॥ ೩ ॥

'ಸುದರ್ಶನ' ವೆಂಬ ಚಕ್ರರತ್ನವಲ್ಲದೆ ಇನ್ನೂ ಅನೇಕ ರತ್ನಗಳು ಭರತೇಶನ ಕರಗತವಾಗಿದ್ದುವು.

ಹನ್ನೆರಡು ಯೋಜನ ಉದ್ದ, ಒಂಭತ್ತು ಯೋಜನ ಅಗಲದಲ್ಲಿ ಬೀಡು ಬಿಡಬಹುದಾದಷ್ಟು ಮಹಾಸೇನೆ ಅವನಲ್ಲಿತ್ತು. 'ಸೂರ್ಯಪ್ರಭೆ' ಯೆಂಬ ಛತ್ರರತ್ನದಡಿಯಲ್ಲಿ ಭರತೇಶನ ಸೇನೆಯಲ್ಲಾ ವಿಶ್ರಾಂತಿಯನ್ನು ಪಡೆಯಬಹುದಾಗಿತ್ತು. ಅರಿಭಯಂಕರವಾದ 'ಸೌನಂದಕ' ವೆಂಬ ಖಡ್ಗರತ್ನಕ್ಕೆ ಈತನು ಒಡೆಯನಾಗಿದ್ದನು. ಭರತೇಶನ ಬಳಿ ವಜ್ರಕವಾಟಗಳನ್ನೂ ಕೂಡ ಪುಡಿಮಾಡುವ ಮಹಾದ್ಭುತವಾದ 'ಚಂಡವೇಗ' ವೆಂಬ ದಂಡರತ್ನವಿತ್ತು. ಈತನ ಸೈನ್ಯವನ್ನೆಲ್ಲಾ

ಹೊತ್ತು ಸಮುದ್ರದ ಮೇಲೆ ಹಡಗಿನಂತೆ ಸಂಚರಿಸುವ 'ವಜ್ರಮಯ' ವೆಂಬ ಚರ್ಮರತ್ನವು ಚಕ್ರೇಶನ ಸೇವೆಗೆ ಸಿದ್ಧವಾಗಿತ್ತು. ಈತನ ಮಣಿಕೂಟದಲ್ಲಿ 'ಚೂಡಾಮಣಿ' ಯೆಂಬ ಅಪೂರ್ವರತ್ನ ಕಂಗೊಳಿಸುತ್ತಿತ್ತು. ತಿಮಿರರಾಶಿಯನ್ನು ಕರಗಿಸಿ ಅತ್ಯುಜ್ವಲವಾಗಿ ಬೆಳಗುವ 'ಕಾಕಿಣಿರತ್ನ' ವನ್ನು ಪಡೆದು ಈತನು ರಾರಾಜಿಸುತ್ತಿದ್ದನು. ಬಯಕೆಯೆಲ್ಲವನ್ನೂ ಪೂರೈಸುವಂತಹ 'ಕಾಮವೃಷ್ಟಿ' ಯೆಂಬ ಗೃಹಪತಿರತ್ನ ಭರತೇಶನ ಭಾಗ್ಯರತ್ನವಾಗಿತ್ತು. ಷಡಂಗ ಸೇನಾನಾಯಕನಾಗಿ 'ಅಯೋಧ್ಯ' ನೆಂಬ ಸೇನಾನಿರತ್ನ ಚಕ್ರೇಶನ ಬೆಂಬಲಕ್ಕಿದ್ದನು. 'ಭದ್ರಮುಖ' ನೆಂಬ ತಕ್ಷಕರತ್ನ ಈತನ ಬೆಂಗಾವಲಾಗಿದ್ದನು. ಸರ್ವೋತ್ಕೃಷ್ಟ ಸಲಹೆಗಳನ್ನಿತ್ತು ಚಕ್ರವರ್ತಿಯ ಕೀರ್ತಿಲತೆಯನ್ನು ಹಬ್ಬಿಸಿದಾತ ಬುದ್ಧಿಸಾಗರನೆಂಬ ಪುರೋಹಿತರತ್ನ ! ವಿಜಯಾರ್ಧಪರ್ವತನೆಂಬ ಪಟ್ಟದಾನೆ ಚಕ್ರವರ್ತಿಯ ವಾಹನರತ್ನವಾಗಿತ್ತು. ಬಿರುಗಾಳಿಯಂತೆ ಸಂಚರಿಸುತ್ತಿದ್ದ 'ಪವನಂಜಯ' ವೆಂಬ ತುರಗರತ್ನವೂ ಈತನ ಮತ್ತೊಂದು ವಾಹನ. ಇವೆಲ್ಲಕ್ಕಿಂತಲೂ ಮಿಗಿಲಾಗಿ ಅನುರೂಪರಾದ ವನಿತಾರತ್ನಗಳಿಂದ ಭರತೇಶನ ಬದುಕು ರಸಮಯವಾಗಿತ್ತು. ಹೀಗೆ ಚಕ್ರೇಶನಿಗೆ ಎಂಟು ವಿಧವಾದ ಅಜೀವರತ್ನಗಳೂ, ಆರು ಜೀವರತ್ನಗಳೂ ಇದ್ದು ಅವನ ಶಕ್ತಿ ಮತ್ತು ಸುಖಗಳೂ ಅಸಾಧಾರಣವಾಗಿದ್ದುವು. ಈ ಹದಿನಾಲ್ಕು ರತ್ನಗಳನ್ನೂ ಪೂಜಿಸಿ ಅನಂತರ ಭರತೇಶ ದಿಗ್ವಿಜಯಕ್ಕೆ ಹೊರಡುತ್ತಾನೆ.

ಪೂಜಿಸಿ ಪೊಱಮಟ್ಟಗ್ರತ ।
ನೂ ಜೋತ್ಪತ್ತ್ಯುತ್ಸವಕ್ಕೊಡರ್ಚುವ ಪದದೊಳ್ ॥
ರಾಜಾಧಿರಾಜನ ಮರಮ ।
ಹೀಜದ ಲೀಲೆಯನೆ ಲೀಲೆಯಿನೆ ಕೈಕೊಂಡಂ ॥ ೪ ॥

ಮಲೆಪರ್ಗಭಿಚಾರಕ್ರಿಯೆ ।
ವಲಮೆನಿಸಲ್ ಚಕ್ರಿಪೂಜ್ಯನುಂ ಸಕಳ ಮಹೀ ॥
ವಳಯಕ್ಕೆ ಶಾಂತಿಕರ್ಮಂ ।
ಬಲಮೆನಿಸಲ್ ಜಾತಕರ್ಮಮೇಂ ನೆಱೆದಿತ್ತೋ ॥ ೫ ॥

ವಚನ: ಅಂತು ಭರತೇಶ್ವರ ಚಕ್ರವರ್ತಿ ಚಕ್ರಪೂಜಾಗ್ರತನೂಜ ಜಾತಕರ್ಮೋತ್ಸವ ನಿರ್ವರ್ತನಾತಿ ಪ್ರೀಣಿತಾಂತಃಕರಣನಾಗಿರ್ಪನ್ನೆಗಂ.

ಪೊಸಜಾದಿಯ ಬೆಳೆದೊಱಗಿವ ।
ಪೊಸಗಱಿಮೆಯ ಪೊಸತರಲ್ದ ತಾವರೆಗಳ ಕಂ ॥
ಪಸವಳಮೆಸೆದಿರೆ ದೆಸೆದೆಸೆ ।
ಗೊಸಗೆಯೆ ಬರ್ಪಂತೆ ಕಣ್ಗೆವಂದದು ಶರದಂ ॥ ೬ ॥

ಸುರಿದಪುದು ಮುಗಿಲ ಮುತ್ತಿನ ।
ಸರಿ ಗಗನದಿನೆನಿಸಿ ಪೊಳೆವುವೆಳವಿಸಿಲೊಳ್ ಬೆ ॥
ಳ್ಸರಿತೋರವನಿಯಪುದುವಿನೊ ।
ಳರಲ್ದ ತಿಳಿಗೊಳನೆ ನಭದೊಳಿಱಿದಂತಿರ್ಕುಂ ॥ ೭ ॥

ವಚನ: ಅಂತು ತನ್ನ ದಿಗ್ವಿಜಯೋದ್ಯೋಗಕ್ಕುಪಯೋಗಿಯಾಗಿ ಒಂದ ಶಾರದಶ್ರೀಯನಿದಿರ್ಗೊಂಡನೇಕ ಗಣಗಣಿತ ಶುಭ ದಿನ ನಕ್ಷತ್ರ ಮುಹೂರ್ತದೊಳ್ ದಿಗ್ವಿಜಯ ಪ್ರಯಾಣಭೇರಿಯಂ ಪೊಯ್ಸಿದಾಗಳ್.

ಸಮದಾರಾತಿಮರಾಳ ನೀರದರವಂ ಸಂಕ್ರುದ್ಧವೈವಸ್ವತೋ ।
ಪಮ ವಿದ್ವಿಷ್ಟ ಫಣೀಂದ್ರ ಚಂದ್ರಕರವಂ ದೋರ್ದಂಡಕಂಡೂಯ ದು ॥
ರ್ದಮ ವೈರಿದ್ವಿರದೇಂದ್ರಕೇಸರಿರವಂ ತಾನೆಂಬಿನಂ ವ್ಯೋಮಭಾ ।
ಗಮನೆಯ್ದಿರ್ದುದು ಚಕ್ರವರ್ತಿ ವಿಜಯಪ್ರಸ್ಥಾನ ಭೇರೀರವಂ ॥ ೮ ॥

ಅರಿಮುಕುಟರತ್ನಮಂ ನಿಜ ।
ಚರಣಕ್ಕರ್ಘ್ಯಪ್ರದೀಪಮಾಗಿಪ್ಪುದನಾ ॥
ಭರತೇಶ್ವರಂಗೆ ಕಾಣ್ಬಂ ।
ತಿರೆ ಸೂಚಿಸಿದತ್ತು ದಕ್ಷಿಣಾಕ್ಷಿಸ್ಪಂದಂ ॥ ೯ ॥

ವಚನ: ಆಗಳ್ ಮೌಹೂರ್ತಿಕರ್ ಬಂದು ದೇವಾ ವಿಜಯ ಪ್ರಸ್ಥಾನ ಲಗ್ನಂ ಸಾರೆ ವಂದುದೆಂದು ಬಿನ್ನಪಂಗೈದಾಗಳ್

ಶೋದೋಂತರ್ಭಾಗದೊಳ್ ದುಂದುಭಿಗಳೆಸೆಯೆ ಮಾಂಗಲ್ಯಗೀತಪ್ರಪಾದಂ
ವಾದಿತ್ರಧ್ವಾನದೊಳ್ ಸಂದಣಿಸೆ ಗುರುಜನೋದ್ಗೀತ ನಾನಾ ವಿಧಾಶೀ ।
ರ್ವಾದಂ ಶೇಷಾಕ್ಷತಂಗಳ್ ನೆರಸೆಸೆಯೆ ಮಹಾವಂದಿ ವೃಂದಾಂತಮಾಲಾ ।
ನಾದಂ ಗಂಭೀರನಾದಂ ನೆಗಲ್ದಿರೆ ತಳರ್ದಂ ರಾಗದಿಂ ಸಾರ್ವಭೌಮಂ ॥

ಗಿರಿರಾಜೋದಗ್ರ ಸಿಂಧೂರಿತಕರಟಿಘಟಾಟೋಪಮಂ ಕುಂಕುಮಾಂಭ ।
ಸ್ಫುರಿತಾಂಗೋತ್ತುಂಗವಲ್ಗತ್ತುರಗ ಬಲಮುದೋದ್ದಾಮ ಮಂಚಿತ್ರನೇತ್ರಂ
ಬರನಾನಾಹೇತಿಹಸ್ತೋದ್ಭಟ ಭಟಪೃತನಾಭೀಳಮಂ ಚಿತ್ತದೊಳ್ ನೀ ।
ರರಸಂ ಕೈಗಣ್ಮಿ ಪೊಣ್ಮುತ್ತಿರೆ ನಿಜಬಲಮಂ ನೋಡಿದಂ ಸಾರ್ವಭೌಮಂ ॥

ಎರಡುಂ ಕೆಲದೊಳಮರಸನ ।
ಬರವಂ ಪಾರುತ್ತೆ ಭೂಪರಿದ್ದಲ್ಲಿಯೆ ಮಾ ॥
ಣ್ದಿರದೆಱಗೆ ಮಕುಟಮಣಿಗಣ ।
ಮರೀಚಿಪುದಿದತ್ತು ದೆಸೆಯುಮಂ ವಸುಧೆಯುಮಂ ॥ ೧೨ ॥

ವಿಜಯಶ್ರೀಗೃಹಮೆನಿಸುವ ।
ವಿಜಯಪ್ರಸ್ಥಾನ ಶಿಬಿರ ನೃಪಮಂದಿರಮಂ ॥
ವಿಜಿಗೀಷು ಬಂದು ಪೊಕ್ಕಂ ।
ವಿಜಯಾಳಂಕಾರ ಬಾಹುಭರತಮಹೀಶಂ ॥ ೧೩ ॥

ಕಳಕಂಠೀಗೀತಂ ಬಗೆ ।
ಗೊಳೆಯುಂ ವೀಣಾಕ್ವಣಂ ಮನಂಗೊಳೆಯುಮಿಳಾ ॥
ವಳಯೇಶ್ವರನ ಮರ್ದನಕಡ ।
ಲೊಳಗಿರ್ಪಂತಿರ್ದನಂತವಾಸದೊಳಾಗಳ್ ॥ ೧೪ ॥

ವಚನ: ಅಂತು ಅಂದಿನ ದಿವಸಮಂ ಕಳಿದು ಮಱುದಿವಸಂ ಪೂರ್ವಾಭಿಮುಖನಾಗಿ ಚಕ್ರರತ್ನ ಪುರಸ್ಸರಂ ಬಿಜಯಂಗೆಯ್ವಾಗಳ್.

ವನಧಿಯ ನೀಳ್ದಪೆರ್ದೆರೆಗಳೀ ನೆಲಂ ಕವಿದಪ್ಪುವೀಗಳೆಂ ।
ಬಿನಮತಿವೇಗದಿಂ ಪರಿವಪಾಱುವಲಕ್ಕೆಯನೊಡ್ಡುವೊಳ್ಪುತ ॥
ನ್ನನೆ ನಡೆನೋಡಿಸುತ್ತುಮಿರೆ ಜಾಯಿಲನೊಂದೆರಡೆಂದು ತೋಱೆ ನೆ ।
ಟ್ಟನೆ ಪದಿನೆಂಟುಕೋಟಿವರೆಗಂ ತಳರ್ದತ್ತು ತುರಂಗ ಸಾಧನಂ ॥ ೧೫ ॥

ವಿವಿಧಾಯುಧಪೂರ್ಣಂಗಳ್ ।
ಪ್ರವೀರ ಪುರುಷ ಪ್ರತಿಷ್ಠಿತಂಗಳ್ ಚೇತೋ ॥
ಜವಹರಿಯೋಗ್ಯಂಗಳ್ ತಳ ।
ರ್ದುವಾಗಳೆಂಭತ್ತು ನಾಲ್ಕುಲಕ್ಕೆರಥಂಗಳ್ ॥ ೧೬ ॥

ಎಡೆನೆಱೆಯದು ಭುವನತಳಂ ।
ನಡೆವ ಚತುರ್ಬಲಕೆ ದಿವಿಜಖೇಚರ ಸೈನ್ಯ ॥
ಕ್ಕಡೆ ನೆಱೆಯದು ಗಗನಮುಮೆನೆ ।
ಷಡಂಗ ಬಲಮಿಂತು ತಳರೆ ತಳರ್ದಂ ಭರತಂ ॥ ೧೭ ॥

ವಚನ: ಅಂತು ಮಹೀಭಾಗಮೆಲ್ಲಂ ಚತುರಂಗಮಯಮುಂ, ದಿಗ್ವಿಭಾಗಮೆಲ್ಲಂ ರಜೋಮಯಮುಂ, ನಭೋಭಾಗಮೆಲ್ಲಂ ದಿವಿಜ ವಿದ್ಯಾಧರಮಯಮುಂ, ಭುವನವಿವರಮೆಲ್ಲಂ ಜಯಜಯ ನಿನಾದಮಯಮುಂ, ಅಂತರಿಕ್ಷಮೆಲ್ಲಂ, ಆತಪತ್ರಮಂಡಳಮಯಮುಂ, ಸಮೀರಣಸಂಚರಣಮೆಲ್ಲಂ ಮದಗಂಧಮಯಮುಂ, ಸೃಷ್ಟಿಯೆಲ್ಲಮವನಿಪಾಳಮಯಮುಂ, ಆಗಿ ನಡೆವ ನಿಜವಿಜಯ ಸೈನ್ಯದೊಳನೇಕ ಮಕುಟಬದ್ಧ ಶೇಖರ ಸಹಸ್ರ ಪರಿಸ್ರಸ್ತ ಕುಸುಮಕೇಸರ ರಜಮುಂ, ಅನವರತ ವಿತರಣನಿರತ ರಾಜಕುಮಾರ ಮುಷ್ಟಿವಿಕೀರ್ಯಮಾಣ ಸಂತರ್ಪಣಚೂರ್ಣ ಸಂಕೀರ್ಣ

ಕರ್ಪೂರರಜಮುಂ, ಶಮದ ವಿಜಯಗಜ ವಿಶಾಲ ಕುಂಭಿಭಿತ್ತಿ ಪರಿಕ್ಷಿಪ್ತ ಸಾಂದ್ರ ಸಿಂಧೂರ ರಜಮುಂ ನೆಱಂಬಡೆದು.

ಮದಕರಿ ತುರಂಗ ಮಾನವ ।
ಪದಹತಿಯಿಂ ಗಗನತಳವನೊಡನಡರ್ವರಜಂ ॥
ಪದೆಪೊದವೆ ದಿಗಂಗನೆಯರ ।
ಕೆದಱಿದ ಪಟವಾಸಚೂರ್ಣ ರಜಮನೆಪೋಲ್ಗುಂ ॥ ೧೮ ॥

ಸಿವಿಗೆ ತೆಱೆದುಮಿಗಲೊಡನಿ ।
ಕ್ಕುವ ಕುಂಚಂ ಲೀಲೆವಡೆಯೆ ಚೆಲ್ವೆಸೆದುದು ಷ ॥
ಣ್ಣವತಿ ಸಹಸ್ರಾಂತಃಪುರ ।
ಮವಯುವದೊಳೆ ಭರತಚಕ್ರವರ್ತಿಯ ಕೆಲದೊಳ್ ॥ ೧೯ ॥

ಪೊಳೆವಲರಮರ್ದಿನ ಕಪ್ಪುರ ।
ವಳಕಿನ ಕತ್ತುರಿಯ ಕೊಳತದುರ್ವಾಭರಣಂ ॥
ಗಳ ಪೊಳೆವ ಮಾಣಿಕಂಗಳ ।
ಬೆಳಗಿದೆ ಸೂಚಿಸಿತು ಭರತನಂತಃಪುರಮಂ ॥ ೨೦ ॥

ಪಡೆಗಡ್ಡಮಿರ್ದ ಬೆಟ್ಟ ।
ಟ್ಟೆಡೆ ಮಟ್ಟಮಿಱುಂಬಮೆಂಬಿವಂ ಸಣ್ಣಿಸಿ ಸಾ ॥
ರ್ಪಡೆ ನಡೆವ ದಂಡರತ್ನಂ ।
ಪಡೆವಳ್ಳನ ಮುಂದೆ ನಡೆಯ ನಡೆದಂ ಭರತಂ ॥ ೨೧ ॥

ಅಂತು ನೃಪಂ ನಡೆಯೆ ಲಲಾ ।
ಟಂತಪತ ಪನಾಂಶುವಿಂ ಸರೋವರಜಲ ಮೋ ॥
ರಂತಿರೆ ಕಾಯ್ಗೊಂಡವ ನೀ ।
ರಂತಿರೆ ಕುದಿದತ್ತು ಪೊಱಿಯೇ ಜಲಚರ ನಿಕರಂ ॥ ೨೨ ॥

ಪೊಳೆವಿನ ಕಿರಣಂ ಮೆಯ್ಗ್ಗಳ ।
ನಳುರೆ ಕನಲ್ದಗಿದು ಸೋಗೆಯಂ ಪರಪಿನೆಲಿ ॥
ಲ್ಗಳನಾಸೆವಡೆ ಶಿಖಾವಳಿ ।
ಕುಳತಾಂಡವವೆಸದುದಾ ಶರತ್ಸಮಯದೊಳಂ ॥ ೨೩ ॥

ಲಾವಣ್ಯರಸದ ಬಿಂದುಗ ।
ಳಾವರಿಸಿದುವೆನಿಸಿ ಪೊಳೆದುವವನೀಶ್ವರ ಕಾಂ ॥
ತಾವದನಂಗಳ್ ಸ್ವೇದಜ ।
ಲಾವಳಿಯಿಂ ಸಜಲ ಲವಸರೋಜಂಗಳವೋಲ್ ॥ ೨೪ ॥

ಶರತ್ತಪನ ತಾಪದಿಂ ಕೊರಗಿ ಕೂಡೆ ಕೋರೈಸಿದಾ ।
ನರೇಶ್ವರ ವಧೂಕದಂಬಕಮನಾಱಿಸಲ್ಗಾಗಳ ॥
ಬ್ಜರೇಣುಗಳನೆತ್ತಿ ಬಂದಿದಿರ್ವರ್ಪವೋಲ್ ನಂದನೋ ।
ತ್ಕರಂ ಬಿಡಿದು ಮಾರುತಂಚಳತರಂಗೆಯಿಂ ಗಂಗೆಯಿಂ ॥ ೨೫ ॥

ವಚನ: ಅಂತು ಮಳಯಜರಸ ಶಿಶಿರ ಶೀಕರಾಸಾರಧಾರಿಯಾಗಿ ಬಂದ ಮಂದಾನಳನ ಬಳಿಯನೆ ಬಂದು

ಆರಮ್ಯ ನದಿಯ ಚೆಲ್ವನಿ ।
ಳಾರಾಮಾರಮಣನಲ್ತೆಯಿಂ ನೋಡುವಿನಂ ॥
ಸಾರಥಿ ಕಣ್ಣಱಿದೊಯ್ಯನೆ ।
ತೇರಂ ಕೊಸೆಗೊಂಡು ಚಕ್ರಿಯಂ ಬಿನ್ನವಿಕುಂ ॥ ೨೬ ॥

ದಿವಿಜಜನಸೇವಿತಂ ಭುವ ।
ನವಂದ್ಯಮಾಹ್ಲಾದಿತ ತ್ರಿಲೋಕಂ ನೋಡೀ ॥
ದಿವಿಜನದಿ ನಿನ್ನ ಗುರುವಿನ ।
ಧವಳಯಶಶ್ರೀಯನಿನಿಸನನುಕರಿಸಿಕುಂ ॥ ೨೭ ॥

ತ್ರಿದಶಸ್ತುತ ನೋಡಪೊದ ।
ಬಿಟ್ಟೊದವಿದ ತಾಳೀತಮಾಳ ನೀಳದಳರ್ಪಿಂ ॥
ಪುದಿದು ಪರಭಾಗಮಂ ಪಡೆ ।
ದಿದಿಱೆರಡುಂ ಕೆಲದೊಳೆಸೆವ ವನರಾಜಿಗಳಂ ॥ ೨೮ ॥

ಕಡುಪಗಲಾದುದು ಬೀಡಂ ।
ಬಿಡಿಸುವುದೀ ಪುಣ್ಯನದಿಯ ತಡಿಯೊಳ್ ದೇವರ್ ॥
ಸಡೆವುದು ವನಜಳ ಕೇಳಿಗೆ ।
ಕಡುರಯ್ಯಂ ಬನದ ತೊಱೆಯ ಸಿರಿಧರಣಿಪತೀ ॥ ೨೯ ॥

ಎಂದೊಡೆ ಭರತೇಶ್ವರನಾ ।
ನಂದದೆ ಬೀಡಂ ಬಿಡಲ್ಕೆವೇಟ್ಟಿೞಿದು ಜಯ ॥
ಸ್ಯಂದನದಿಂದಂ ಜನಿತಾ ।
ನಂದದೆ ಬನಮುಂ ವಿಳಾಸದಿಂ ಪುಗುತಂದಂ ॥ ೩೦ ॥

ವನದೇವತೆಗಳ್ ನಂದನ ।
ವನಮಂ ಪುಗುವಂತೆ ತಳಿರ ಕಳಿಕೆಯ ಪೊಸಪೂ ॥
ವಿನ ಮೇಗೆ ದಿಟ್ಟಯಾಗಿರೆ ।
ವನಜಾನನೆಯರ್ ವಿಳಾಸವನಮಂ ಪೊಕ್ಕರ್ ॥ ೩೧ ॥

ಪುಗೆ ನಡೆವ ಪರಿಶ್ರಮದಿಂ ।
ದೊಗೆವ ಲತಾಂಗಿಯರ ಸುಯ್ಯಕಂಪಿಂಗಳಿಗಳ್ ॥
ಮೊಗಸಿ ಮುಸುಱುವು ಪೊಸಗಂ ।
ಪುಗಂಡು ಸೈರಿಸುವ ಮಧುಕರಂಗಳುಮೊಳವೇ ॥ ೩೨ ॥

ತಳಿರ ಪೊಸದಳಿರ ಕಾವಣ ।
ದೊಳಗೆ ನೃಪೇಶ್ವರನ ಘರ್ಮಜಳಕಣಗಣಮಂ ॥
ಕಳೆದುದು ಚಂದನ ಹಿಮಕರ ।
ವಿಳುಳಿತ ಜಳಪರಿಚಿತಂ ಜಳಾರ್ದ್ರಸಮೀರಂ ॥ ೩೩ ॥

ಗಿಳಿಗಳೊಳಿಗಳಪಿ ಮೊಱೆವಳಿ ।
ಕುಳದೊಡನಾಳ್ಪಿಸಿ ಪುರುಳಿಯೊಡನೆಳಸಿ ನವಿ ॥
ಲ್ಗಳ ಬಳಗದೊಡನೆ ನರ್ತಿಸಿ ।
ವಿಳಾಸಿನೀನಿವಹ ಮಾಗಳೇಂದಳ್ಕಿಸಿತೋ ॥ ೩೪ ॥

ಅಂತು ಭರತೇಶ್ವರಂ ಸಕ ।
ಳಾಂತಃಪುರ ಸಹಿತಮಲ್ಲಿ ವಿಶ್ರಮಿಸಿ ವನಾ ॥
ಭ್ಯಂತರಮಂ ತೊಲಲೆ ಮನ ।
ಕ್ಕಂತಿಲ್ಲದ ಮುದಮನುಂಟುಮಾಡಿದುದು ಬನಂ ॥ ೩೫ ॥

ಪೊಸತಲರ್ದ ಕೊಸಗು ತಳಿರ್ವೊ ।
ದಸುಗೆ ಪಸುರ್ನನೆಯೊಳಿಡಿವ ಮಲ್ಲಿಗೆ ನನೆಯಿಂ ॥
ಮುಸುಕಿದ ತಳಿರಂ ಪೇಱಿದ ।
ಪೊಸಮಾವುಗಳಿಂ ಬಸಂತ ಮೆಸೆದಪುದಿದಱೊಳ್ ॥ ೩೬ ॥

ವಚನ: ಅಂತು ದಿವ್ಯಪ್ರಭಾವದಿಂ ಸಕಳರ್ತುಕ ಸೌಂದರ್ಯಮುಮಂ ಬೇಱೆವೇಱೆ ತೋಱುವ ರಾಜ್ಯಲಕ್ಷ್ಮೀವಲ್ಲಭಂ ವನಲಕ್ಷ್ಮಿಯಂ ನೋಡುವಾಗಳ್

ನೋಡುತ್ತೆಂತಿರ್ಪಮೀ ಬಂದತಿಥಿಗತಿಥಿಸತ್ಕಾರಮಂ ನಾಮಮೋಘಂ ।
ಮಾಡಲ್ವೇಱ್ಕುಂ ಯಥಾಶಕ್ತಿಯಿನೆನುತೆ ಮಹಾಶ್ಚರ್ಯಮಂ ಕಣ್ಗಳುಂ ॥
ಮಾಡುತ್ತುಂ ದಿವ್ಯವಸ್ತ್ರಾಭರಣ ಕುಸುಮಗಂಧಂಗಳಂ ಚಕ್ರಿಗಾಗಳ್ ।
ನೀಡಿತ್ತತ್ಯಂತ ರಾಗೋತ್ಥಿತ ಕರತಳದಿಂ ತದ್ವನಶ್ರೀಸಮೂಹಂ ॥ ೩೭ ॥

ಮುಱುಕದ ಮೆಲ್ಪಿನ ಭಂಗಿಯು ।
ನೆಱಿವನೊಳಿವೆ ಮಿಗಿಲವರ್ಗವೆಃನೆ ಭಂತನ ಕ ॥
ಣ್ಗೆಱಕಮನೆ ಪಡೆದು ಚೆಲ್ವಿಂ ।
ಮಱಿಸಿದುವು ದ್ಯಾನಲತೆಗಳಂ ವನಲತೆಗಳ್ ॥ ೩೮ ॥

ವಚನ: ಅದಂ ಮೆಚ್ಚಿ ಮತ್ತೊಂದು ಪಲ್ಲವಿತ ಕೋರಕಿತ ಕುಸುಮಿತ ಫಲಿತ ಪರಿಣತ ಫಲಲಲಿತ ಸಹಕಾರ ಭೂರುಹಮನತಿ ನಿಬಿಡಾಲಿಂಗನಂ ಗೆಯ್ದು —

ತಳಿರೊಳ್ ನೀನೆ ಬೆಡಂಗನೈನಸೆಗಳೊಳ್ ನೀಂ ನೀಱನೈ ಪುಷ್ಪಸಂ ।
ಕುಳದೊಳ್ ನೀನೆ ವಿಳಾಸಿಯೈಮಿಡಿಗಳೊಳ್ ನೀ ಚಲ್ವನೈ ಪಣ್ತಪ ॥
ಣ್ಗಳಿನೋವೋ ಪೆಱತೇನೊ ನೀನೆ ಭುವನಶ್ಲಾಘ್ಯನೈ ಭೃಂಗಕೋ ।
ಕಿಳಕೀರಪ್ರಿಯ ಚೂತರಾಜತರುಗಳ್ ನಿನ್ನಂತೆ ಚೆನ್ನಂಗಳೇ ॥ ೩೯ ॥

ವಚನ: ಎಂದವರಂ ಪೊಗಳ್ದು

ಅಕ್ಕರ॥ ಸೊಡರ ಬೆಳಗಿನೊಳ್ ಕೊಱಗುವ ಜಾಜಿಯುಂ ತುಂಬಿಯೊಳ್
ಪಗೆಗೊಂಡ ಸಂಪಗೆಯಂ
ಮುಡಿಯೆ ಸೊಗಯಿಸಿದ ದಿವ್ಯಮೂರ್ತಿಯುಲರಂ ಮುಸಿಯೊಳೆಸವನಾದ
ಗೊಜ್ಜಗೆಯುಂ ।
ನುಡಿಯಲಕ್ಕುಮೆ ಪೊಗಳಲಕ್ಕುಮೆಂದೆಬ್ಬಿ ಕಾಮನೊಡ್ಡೋಲಗದೊಳ್
ಮುಡಿಗೆಯಿಕ್ಕಿಯುಂ ಕೈಯನೆತ್ತಿ ಪೊಗಳ್ದುಂ ತಣಿಯನೆ
ಮಾದನನುಂ ಮಲ್ಲಿಗೆಯುಂ ॥ ೪೦ ॥

ಪಡೆಮೊಡೆ ಕಂಪಂ ಬಣ್ಣಂ ।
ಒಡೆಯುವು ಬಣ್ಣಮನೆ ಪಡೆಮುವಪ್ಪೊಡೆ ಕಂಪಂ ॥
ಪಡೆಯುವು ಬಿದಲರ್ಗಳೆರಡು ಮ ।
ನೊಡೆನೆಳೆದೀ ಚಂಪಕಕ್ಕೆ ಪೊಗಳ ದೊರೆಯೇ ॥ ೪೧ ॥

ಮುಕ್ಕುಳಿಸಿ ಯುಗುಳ್ವ ಮಧುವಿಂ ।
ಮಿಕ್ಕೆಸೆವಾಮೋದಮಿದಱ ತಣ್ಗಂಪಿನೊಳೊಳ ॥
ಪೊಕ್ಕುದೆನೆ ಮಧುವ ಕಂಪಂ ।
ಮುಕ್ಕುಳಿಸಿದ ವಕುಳಮಾರುಮಂ ಸೊಕ್ಕಿಸದೇ ॥ ೫೨ ॥

ವಚನ: ಎಂದು ಬಗೆವಂದ ಪೂಗಳೊಳ್ ಪೂದುಡುಗೆಯ ಮಾಡಿ ವಸಂತಕಾಂತೆಯರಂತೆ ನೆಱೆಯೆ ಕಯ್ಗೆಯ್ದಾಗಳ್.

ಬನದ ತಳಿರ್ ಕಳಿಕೆ ಮುಗುಳ್ ।
ನನೆ ಬಿರಿಮುಗುಳಲರಗೊಂಚಲೆಂಬಿವು ವನಜಾ ॥
ನನೆಯರ ಪೂದುಡುಗೆಗೆ ಮ ।
ಟ್ಟನಾದುವೇಂಪೆಂಪೊ ಭರತನಂತಃಪುರದಾ ॥ ೫೩ ॥

ವಚನ: ಅಂತು ವನವಿಹಾರಾನಂತರಂ ಭರತೇಶ್ವರ ಚಕ್ರವರ್ತಿ ವನಕುಸುಮಪಲ್ಲವೋಪ ಶೋಭಿತ ಲೀಲಾಪ್ರಧಾನನಂ ಮದಾಂಧ ಸಿಂಧುರ ಲೀಲೆಯಿಂದಮಂತಃಪುರಕರಿಣೀಗಣಂಬೆರಸು ಗಂಗಾಜಲಕ್ರೀಡಾಸಕ್ತ ಚಿತ್ತನಾಗಿ ತತ್ಪರಿಸರಪ್ರದೇಶಮನೆಯ್ದುವಂದು ಚಂಚತ್ಪಂಚರತ್ನಗಳೊಳಂ ಕೆದಱಿದ ಕಾಳಾಗರು ಕಾಶ್ಮೀರಕಸ್ತೂರಿ ಕರ್ಪೂರಯುಕ್ತಕರ್ದಮಕ್ಷೋದದೊಳಂ ನದೀತರಂಗಂಗಳಂ ವಿಚಿತ್ರವರ್ಣಂಗಳಂ ಮಾಡಿ

ಮಂದರ ಪರ್ವತಮಂ ಸುರ ।
ಸೌಂದರ್ಯರ್ ದುಗ್ಧಜಳದೆ ತಳಿವಂತೆವೊಲಾ ॥
ನಂದೋದಯದಂತಃಪುರ ।
ಸೌಂದರ್ಯರ್ ತಳೆದರಾದಿದೇವಾತ್ಮಜನಂ ॥ ೫೪ ॥

ಅಂತು ಬೆಳೆರ್ತಧರಂ ಕ ।
ಣ್ಣಿಂ ತುಳ್ಕುವ ಕೆಂಪು ಸರದ ನಡುಕಂ ಮಿಗೆ ತ ॥

ನ್ನಂತಃಪುರ ಲಲನೆಯರ್ಗೆ ಲ ।
ತಾಂತದ ವಿಭವಮನೆ ಮಾಡಿ ತಾಂಪೊಱಮಟ್ಟಂ ॥ ೪೫ ॥

ವಚನ: ಅಂತು ಜಲಕ್ರೀಡಾವಿನೋದಂಗಳಂ ನಿರ್ವರ್ತಿಸಿದಾಗಳ್

ವನಕೇಳೀ ವಿಭವಂ ಸಲೀಲ ಸಲಿಲ ಕ್ರೀಡಾವಿಳಾಸಂ ಸಮ ।
ಸ್ತನಿಜಾಂತಃಪುರದೊಳ್ ಪೊದಲ್ದಿಸೆದು ಕಣ್ಗೊಂಡುಂಮನಂಗೊಂಡ:ವಿಂ॥
ದ್ರನೆ ಭೋಗೀಂದ್ರನೆ ಖೇಚರೇಂದ್ರನೆನಲೀ ಭೂಪೇಂದ್ರನೆಂಬನ್ನೆಗಂ ।
ಮನುವಂಶಪ್ರಭುಬೀಡಿನತ್ತತಳರ್ದನ್ ಸಂಸಾರ ನೀರೋದಯಂ ॥ ೪೬ ॥

ವಚನ: ಅಂತು ಭರತೇಶಚಕ್ರವರ್ತಿ ನಿಜಸ್ಥಪತಿರತ್ನ ವಿರಚಿತ ಮಣಿಮಯ ರಾಜಮಂದಿರಂ ಪುಗುವುದುಂ, ಆ ಪ್ರಸ್ತಾವದೊಳಂತಃಪುರದ ಪೂಸಿದ ಕಾಶ್ಮೀರರಾಗಮುಂ ಉಟ್ಟ ಕೌಸುಂಭಾಂಬರ ರುಚಿಯುಂ ತೊಟ್ಟ ಪದ್ಮರಾಗಾಭರಣಕಿರಣಂಗಳುಂ ಸಂಕ್ರಮಿಸಿದಂತೆ,

ಒಳಕೊಂಡ ಕೆಂಪಿನಿಂ ದಿನ ।
ವಳಯಂ ಪೊಲ್ತಿರ್ದುದಪರದಿಗ್ವಧು ಭೂಭ್ರು ॥
ತ್ತಿಳಕಂಗೆ ಪಿಡಿವಬಗೆ ಕೈ ।
ಕೊಳೆಬೆಳಗಿದ ಪದ್ಮರಾಗ ಮಣಿದರ್ಪಣಮಂ ॥ ೪೭ ॥

ಬೆಳಗುವ ಕೈದೀವಿಗೆಗಳ ।
ಬೆಳಗುಂ ತರತರದಿನೊಗೆವ ತಾರಗೆಗಳ ಗೊಂ ॥
ದಳಮುಂ ಮಿಳಾತಳದ ವಿಯ ।
ತ್ತಳದ ವಿಳಾಸ ಮನದೇನೊಡಂಬಡಿಸಿದುದೋ ॥ ೪೮ ॥

ಒಸರ್ದಪುದಮರ್ದಿನಪಾಲ್ಮಳೆ ।
ಪಸರಿಸಿತೆನೆ ಜಗಮನೊಡನೆ ಕಪ್ಪುರದ ರಜಂ ॥

ಮುಸುಕಿದುದೆನೆ ಪುದಿದೇನಾ ।
ಱಿಸಿದುದೊ ಪೊಳೆವಮೃತಕಿರಣನಮೃತಕರಂಗಳ್ ॥ ೪೯ ॥

ಭರತೇಶ್ವರಂ ನಿಜಾಂತಃ ।
ಪುರ ಕುಮುದವನಂಗಳಲರೆ ತನ್ನಿಂ ತಾನುಂ ॥
ಶರದ ಚಂದ್ರಮನೊಳ್ ಮ ।
ಚ್ಚರಿಪಂತಿರೆ ಚಂದ್ರಚರಿತಮಂ ಕೈಕೊಂಡಂ ॥ ೫೦ ॥

ವಚನ: ಅಂತು ಸುರತಾಂಬು ರಾಶಿಯೆನಿಸಿ ನಿದ್ರಾಂಗನಾಲಿಂಗಿತ ನಾಗಿರ್ಪನ್ನೆಗಂ

ಪುರುಪರಮೇಶ್ವರ ನಂದನ ।
ದೊರೆಕೊಳಿಸುಗೆ ನಿನಗೆ ತಡೆಯದಾಪುರುಪರಮೇ ॥
ಶ್ವರನ ನಿರತಿಶಯಗುಣ ಪರಿ ।
ಕರಮುಂ ತತ್ಪ್ರಾತಿಹಾರ್ಯಮುಂ ಮಂಗಳಮಂ ॥ ೫೧ ॥

ವಚನ: ಎಂಬ ಮಂಗಳ ಪಾಠಕರವಂಗಳೊಡನೆ ಭರತೇಶ್ವರನು ನ್ನಿದ್ರವಾದನನ್ನೆಗಂ

ದೆಸೆಗಳ ಸಂದಂ ಪಱಿದಾ ।
ಗಸದಿಂದಂ ಪತ್ತುವಿಡಿಸುವಂತೆವೊಲಿಳೆಯಂ ॥
ಮಸಕದೊಳೆ ಪೊತ್ತು ನೆಗೆದವೊ ।
ಲೆಸದುದು ದಿಗ್ವಿಜಯ ಭೂರಿಭೇರಿ ನಿನದಂ ॥ ೫೨ ॥

ಆಗಳ್ ಪ್ರಭಾತಕಾಲನಿ ।
ಯೋಗಮನಾಚಕ್ರವರ್ತಿ ನಿರ್ವರ್ತಿಸಿ ॥
ಪೋಗಲ್ವೇಱಿ ಪಯಣಮನೆಂ ।
ದಾಗಳ್ ತರವೇಱ್ದು ವಿಜಯಪರ್ವತ ಗಜಮಂ ॥ ೫೩ ॥

ವಚನ: ವಿಜಯಪರ್ವತಗಜೇಂದ್ರಂ ಬಂದು ಮುಂದೆ ನಿಲ್ವುದುಂ

ಇದು ವಿದ್ವಿಷ್ಟಪ್ರತಾಪೋದಯದವ ದಹನೇಂದ್ರಕ ವಿಧ್ವಂಸಿಸೀಳಾಂ ।
ಬುದಧಾರಾಸಾರವೆಂಬಂತೊದವಿದ ಮದಧಾರಾಜಳಾಸಾರದಿಂದು ॥
ಬಿಱದಗುರ್ಬಂ ತಾಳ್ದಿ ನಿಂದೂರ್ಜಿತ ಜಯಗಜಮಂ ರಾಗದಿಂದೇಱಿದಂ ನೀ
ರದಗರ್ಜದ್ಭೂರಿಭೇರೀರವ ಬಧಿರಿತ ದಿಙ್ಮಂಡಲಂ ಸಾರ್ವಭೌಮಂ ॥

ತಡೆವಂ ಗಂಗಾದ್ವಾರದಿ ।
ನೆಡೆಯೊಳ್ ಬೀಡಿಲ್ಲ ಭರತರಾಜಂಗೆಂದೇಂ ॥
ನಡೆದುಡೋ ಪೆರ್ಬಡೆ ಗಂಗೆಯು ।
ತಡಿವಿಡಿದೆರಡನೆಯ ಗಂಗೆ ನಡೆವಂತಾಗಳ್ ॥ ೫೫ ॥

ಸಾಗರದೊಳಗಿರ್ದಂಕದ ।
ಮಾಗಧನಂ ಕಟ್ಟಿದಲ್ಲದಿರನರಸನೆನು ॥
ತ್ತೋಗಡಿಸದೆ ನಡೆದುದು ಬಲ ।
ಸಾಗರಮಾಸಾಗರಂಬರಂ ತರತರದಿಂ ॥ ೫೬ ॥

ಚತುರಂಗ ಬಲಸಮನ್ವಿತ ।
ರತರ್ಕ್ಯ ವಿಕ್ರಮರನೇಕ ಕರಿತುರಗಮಣಿ ॥
ಪ್ರತತಿಗಳಂ ಮುಂದಿಟ್ಟವ ।
ನತರಾದರ್ ಚಕ್ರಿಗಳ್ಗೆ ದಂಡೋಪನತರ್ ॥ ೫೭ ॥

ಕಸ್ತೂರಿಕಾಂಡಕಂ ವನ ।
ಹಸ್ತಿರದಂ ಹಸ್ತಿಮಸ್ತಕೋದ್ಭವ ಮುಕ್ತಾ ॥
ವಿಸ್ತಾರವೆಂದು ತಂದು ಸ ।
ಮಸ್ತ ವನಾಧೀಶರ ವನಿಪತಿಯಂ ಕಂಡರ್ ॥ ೫೮ ॥

ವಚನ: ಮತ್ತಂ ಪ್ರಾಚ್ಯಾರ್ಣವತಟ ನಿಕಟವರ್ತಿಗಳ ಪ್ರತಿ ಪ್ರಚಂಡ ಮಂಡಳಿಕರ್ ಭರತೇಶ್ವರಚಕ್ರವರ್ತಿಯ ಬರವಂ ಕೇಳ್ದು—

ಕರಿಸಂಘಾತಮುಮಂ ಹಯವ್ರಜಮುಮಂ ಪಿಂತಿಕ್ಕಿತೂರ್ಯಸ್ವನೋ ।
ತ್ಕರಮಂ ಮಾಣಿಸಿಹೇತಿಮುಕ್ತ ಭಟದೋರ್ದಂಡಾಗ್ರ ಶುಂಭದ್ಧ್ವಜೋ ॥
ತ್ಕರ ಸಂದೇಹಮುಮಂ ಬಿಸುಟ್ಟಡುಗಿ ಪಿಂಛಚ್ಛತ್ರಮಂ ಪ್ರಶ್ರಯಾ ।
ಕರ ವೇಷೋಚಿತರರ್ಘ್ಯ ಹಸ್ತರಿದಿರಂ ಬಂದರ್ ಭಯಭ್ರಾಂತಿಯಿಂ ॥

ವಚನ: ಅಂತು ತನ್ನ ಬಲಂಬೆರಸೆಲ್ಲಿಯುಂ ನಿಲ್ಲದೆ ಬಂದು ಕಾಲಾನುಭಾವದಿಂ ಯುಗಾರಂಭದ ವರ್ಷಾರಂಭದೊಳಂ ತಗುಳ್ದೀ ದ್ವೀಪದೊಳಗಣ ನದೀನದಂಗಳ ಜಲಂಗಳನೊಳಕೊಂಡಲಘ್ಯತ್ವದೊಳಂ ದ್ವೀಪಪರ್ಯಂತ ವೇಷ್ಟನದೊಳಂ ನೆಱೆದು ವಜ್ರವೇದಿಕೆಯಿಂ ಪೊಱಪೊಣ್ಮಿದ ಲವಣಸಮುದ್ರದೊಳಗನೆ ಪೋಲ್ತಿರ್ದುಪಸಮುದ್ರದ ತಡಿವಿಡಿದು ಅದಂ ನೋಡುತ್ತಂತೆ ಬಂದು ಗಂಗಾದ್ವಾರದ ವಜ್ರವೇದಿಕೋತ್ತುಂಗ ತೋರಣದ್ವಾರ ದಂತರ್ವಣತುಂಗ ಕುಜಗಳ ನೆೞಲ್ಗಳೊಳ್ ನಲವತ್ತೆಣ್ಗಾವುದದ ನೀಳದ ಮೂವತ್ತಾಱು ಗಾವುದದಗಲದ ಬೀಡಿಂಗೆ ವಾಸ್ತುವಿಭಾಗಕ್ಕೆಡೆಯಿಲ್ಲದೆ ಪುಱಂಬಗಳೊಳ್ ಬೀಡಂ ಬಿಡಿಸಿದಾಗಳ್

ಅಂತು ಗಗನತಳಮಂ ತುಱುಂಬುವಂತೆ ನೆಗೆದ ವಜ್ರವೇದಿಕೆಯುಮಂ ಅಂಬುದ ಪಥಕ್ಕಾಲಂಬ ಮಿರ್ಪಂತಿರ್ದ ಲವಣಾಂಬುರಾಶಿಯಂ ನೋಡಿ—

ಎನಗೆ ಪ್ರೊಸಂತಿಲೀ ನೆಗಲ್ದ ವಜ್ರದ ವೇದಿಕೆ ಗೋಷ್ಪದಂದಲೀ ।
ವನನಿಧಿ ಪಾಯ್ದು ಮಾಗಧನನೀಗಳೆ ಕಟ್ಟುವೆನಿಲ್ಲಿ ಪೊಣ್ದು ನಿ ॥
ಲ್ಪನಿತುವರಂ ಸುರಂ ಗಹನಮೇ ಪುದಿದವ್ವಳಿಪೆನ್ನ ಕಾಯ್ಪು ಪೋ ।
ಪಿನವಿುರದೀಗಳೇಂಟುವೆನೋ ದಾಂಟುವೆನೋ ಲವಣಾಂಬುರಾಶಿಯಂ ॥

ಚಕ್ರದೊಳೇಂ ಮತ್ತೆ ಜಗ ।
ಚ್ಚಕ್ರಮೇ ಮುಂದಕ್ಕೆ ದಂಡರತ್ನಂಬರಮಾ ॥
ಚಕ್ರಮೆನಗಖಿಳ ಧರಣೀ ।
ಚಕ್ರದೊಳಿನ್ನೆನ್ನ ಬಾಹುದಂಡಮೆ ಸಾಲ್ಗುಂ ॥ ೬೧ ॥

ಅಧಿವಾಸಿತ ಜೈತ್ರಾಸ್ತ್ರಂ ।
ವಿಧುವಿಶದದುಕೂಲ ವಸನಶೋಭಂ ನಾನಾ ॥
ವಿಧ ಮಂತ್ರಾನುಷ್ಠಾನಂ ।
ಪ್ರಧಾನನುಪವಾಸದಿಂ ತ್ರಿರಾತ್ರಮನಿರ್ದಂ ॥ ೬೨ ॥

ವಚನ: ಅಂತು ದರ್ಭಶಯನತಳಗತನಾಗಿರ್ದು ಪಂಚಪರಮೇಷ್ಠಿ ಗಳ ಪೂಜೆಯಂ ಪುರೋಹಿತಂ ಮಾಡಿ ಶಾಂತಿಕ ಪೌಷ್ಟಿಕ ಕ್ರಿಯೆಯಂ ನಿರ್ವರ್ತಿಸಿ ಮರುದಿವಸಂ ನೇಸಱ್ ಮೂಡೆ ಮಂಗಳಾಳಂಕರಣಾಳಂಕೃತ ನಾಗಿ ಪಡೆವಳ್ಳನಂ ಪಡೆಗೆ ಕಾಪುವೇೞ್ದು ದಿವ್ಯಾಸ್ತ್ರಂಗಳಿಂ ತೆಕ್ಕನೆತೀವಿ ಜಳಸ್ಥಳಾವಿಳಂಬಗಳಪ್ಪ ಗಿಳಿಯಬಣ್ಣದ ಕುದುರೆಗಳೊಳ್ ಪೂಡಿದ ಜಿತಂ ಜಯಮೆಂಬ ರಥಮನೇಱಿ ತನ್ನ ಮನದನ್ನನಪ್ಪ ಸಾರಥಿಯಂ ಚೋದಿಸ ಲ್ಪೇೞ್ದು ವೇದ್ಯಾರೋಹಣಂ ತನಗೆ ವಿಜಯಶ್ರೀ ವಿವಾಹವೇದ್ಯಾರೋಹಣ ಮನೆ ಪೋಲೆ—

ವೇದಿಯನಾತ್ಮ ಗೃಹಾಂಗಣ ।
ವೇದಿಯೊಳೆಣೆಯಾಗೆ ಬಗೆದು ಜಳಧಿಯುಮಂ ಲ ॥
ಕ್ಷ್ಮೀದಯಿತಂ ನೀರ್ವರಿಯಿಂ ।
ದಾದಮೆ ಕಿಱಿದೆಂದು ಬಗೆದು ನೋಡಿದನಾಗಳ್ ॥ ೬೩ ॥

ವಚನ: ಅಂತು ತನಗೆ ವಿಜಯ ಕಾರ್ಯಸಿದ್ಧಿದ್ವಾರಮಿರ್ಪಂತೆ ವರ ಗಂಗಾದ್ವಾರದೊಳಗನೆ ಲವಣಜಲಧಿಯಂ ಪೊಕ್ಕಾಗಳ್

ಆ ಲವಣಜಲಧಿಯುಂ ಪರಿ ।
ಕಾಲನೆ ಬಗೆವಂತೆ ಬಗೆದು ಸಾರಥಿ ರಥಮಂ ॥
ಲೀಲೆಯೆ ಚೋದಿಸೆ ತೆರೆಗಳ ।
ಮಾಲೆಯನವಯವದೆ ದಾಂಟಿ ಪರಿದುವು ಹರಿಗಳ್ ॥ ೬೪ ॥

ಪತಿಯ ಜಯಸ್ತಂಭದ ಪರಿ ।
ಣತಿದಲಿದಲ್ಲದೊಡೆ ಜಳಪಥಂ ಸ್ಥಳಪಥದಂ ॥
ತತಿಸುಗಮಮಾಗದೆನೆ ಪರಿ ।
ದು ತೋಯರಾಶಿಯೊಳದೇಂ ರಥ ಸೊಗಯಿಸಿತೋ ॥ ೬೫ ॥

ವಚನ: ಅಂತು ಶೂರ ಸಾರಥಿ ಚೋದಿತಮಪ್ಪ ರಥಮಂ ಪುಣ್ಯ ಸಾರಥಿ ಚೋದಿತಮಪ್ಪ ಮನೋರಥಮುಂ ಉತ್ಸಾಹಮಂ ಪಡೆಯೆ ಪನ್ನೆರಡು ಯೋಜನಂ ಬಂದಂ ಪೋದಾಗಳ್.

ಮಿಡಕಲ್ಸಲ್ಲಿಲ್ಲಿಂ ದೊಂ ।
ದಡಿಯು ನಿನಗೆಂದು ಲವಣವಾರಾಶಿಯೆ ಬ ॥
ಲ್ವಿಡಿವಿಡಿದಂತೆ ವರೂಥಂ ।
ಮಿಡುಕದೆ ನಿಂದತ್ತು ಚೋದ್ಯಮಪ್ಪಿನಮಾಗಳ್ ॥ ೬೬ ॥

ವಚನ: ಅಂತು ಬೀಲ್ಗುಂಡಿಕ್ಕಿದ ಬಹಿತ್ರದಂತೆ ಅಲ್ಲಿಂ ತಳರದೆ ಸಿಂದ ತನ್ನ ರಥಮಂ ಕಂಡು —

ಕುಡಿವೆನೋ ಲವಣಾಬ್ಧಿಯನೀ !
ಗಡೆ ತೋಳೊಳ್ ತುಳ್ಕಿ ಬಱಿದುಮಾಳ್ಪೆನೊ ಪೇೞೆಂ ॥
ದೊಡನಳುರ್ವ ಕೋಪದಿಂ ಕಣ್ ।
ಕಿಡಿಯಂ ಕೆಂಡಮುಮನುಗುೞೆಮುಳಿದಂ ಭರತಂ ॥ ೬೭ ॥

ಕುಡಿತೆಯ ನೀರಂತುಗಲುಂ ।
ಕುಡಿಯಲ್ಕುಂಟೆನೆಗೆ ಲವಣವಾರ್ಧಿಯ ನೀರಂ ॥
ಕಡುಪಿದಱಿಕೊಳಪ್ಪೊಡೀಗಳೆ ।
ಸುಡುವೆಂ ಬಾಣಾನಳಾರ್ಚಿಯಿಂ ಮಾಗಧನಂ ॥ ೬೮ ॥

ವಚನ: ಎಂದು ವಜ್ರಕಾಂಡಮೆಂಬ ನಿಜವಿಜಯ ಕಾರ್ಮುಕಕ್ಕೆ ಸುರಕರಿಕರಾನುಕಾರಿಯಪ್ಪ ನಿಜಭುಜಾದಂಡಮಂ ನೀಡಿ ನೀಡಿಲ್ಲದೇಱಿಸಿ ನೀವಿಜೋವೊಡೆದಾಗಳ್.

ಲವಣಾಂಭೋರಾಶಿ ತೂಳ್ದುಚ್ಚಳಿಸಲೊಡರಿಸಿತ್ತೀ ಧರಾಭಾಗಮಂ ಪ ।
ತ್ತುವಿಡಲ್ ಭೂಭೃತ್ಕುಳಂಗಳ್ ಬಗೆದುವು ಜಳಧಿದ್ವೀಪ ಮಧ್ಯಸ್ಥನಾನಾ ॥
ದಿವಿಜಾವಾಸಂಗಳಭ್ರಕ್ಕೊಗೆದುವು ಭರದೊಳ್ ಕೂಡೆ ದಿಕ್ಪಾಲಲೀಲಾ ।
ಭವನಂಗಳ್ ಬಿರ್ದುವಿಂತಾಯ್ತಖಿಳ ಮಹಿತಳ ಕ್ಷೋಭಮಾಚಕ್ರಿಯಿಂದಂ

ವಚನ: ಅಂತಮೋಘ ಬಾಣಮನುರ್ಚಿಕೊಂಡು

ಪುರುಪರಮೇಶ್ವರ ಪುತ್ರಂ ।
ಭರತೇಶ್ವರ ಚಕ್ರವರ್ತಿ ಬಂದಿರ್ದಂ ತ ॥
ದ್ಧರಣಿ ನಿವಾಸಿಗಳುಂ ವ್ಯಂ ।
ತರಾಮರರ್ ಬಂದು ಕಾಣ್ಬುದವನತಮಕುಟರ್ ॥ ೭೦ ॥

ಎಂಬಕ್ಕರದಿಂದೆಸೆದುದ ।
ನಂಬರತಳಮೊಡನೆ ಬೆಳಗೆ ಬೆಳೆಪುದನಾಶಾ ॥
ರ್ಯಾಂಬುಧಿ ತೊಟ್ಟೆಸಲೆರಡಮರ ।
ದಂಬರದಿಂದುಳ್ಕುವುಳ್ಕುಮಂ ಪೋಲ್ತು ಶರಂ ॥ ೭೧ ॥

ಕಾಳಾಂತಪವನಹತಿಕ ।
ಲ್ಲೋಳಾವಿಳಜಳಧಿ ನಿನದಮೋ ನಿರ್ಘಾತಾ ॥
ಭೀಳತರ ರಭಸಮೋಲಯ ।
ಕಾಳಾಂಬುದ ಘೋಷಮೋ ನೆಲಂ ಮೊಳಗಿದುದೋ ॥ ೭೨ ॥

ಎನೆ ಪುರಜನಮಂತಃಪುರ ।
ಜನಮುಂ ಪರಿಜನಮುಮುಳ್ಕಿ ತದ್ರಾಜನಿಕೇ ॥
ತನದಲ್ಲಿ ಬಿರ್ದು ಪಡೆದುದು ।
ಮನಕ್ಕೆ ಕಡುಮುಳಿಸಿನೆಸಕಮಂ ಮಾಗಧನಾ ॥ ೭೩ ॥

ವಚನ: ಆ ಪ್ರಸ್ತಾವದೊಳಾತನ ಪರಿವಾರಾಮರರ್ ನಾನಾ ವಿಧಾಯುಧವ್ಯಗ್ರಪಾಣಿಗಳು ಮುದಾರವೀರರಸ ರಭಸೋಗ್ರಪಾಣಿಗಳುಮಾಗಿ ಮಾಗಧನ ಮುಂದೆ ಬಂದು ನಿಂದು

ಇದನಾವನೆಚ್ಚನಾತಂ ।
ತ್ರಿದಶಂ ಮೇಣಕ್ಕೆದಾನವಂ ಮೇಣಕ್ಕಾ ॥
ವುದು ಗಹನವಾಂತನಾತನ ।
ಪೊದರ್ಪು ಮಾರ್ಪೆನಿಪುವೆಮ್ಮೊಳೇಂ ಸಂದಪುವೇ ॥ ೭೪ ॥

ಬೆಸಸೆಮ್ಮ ನೀಗಳಿಂತೀ ।
ಬೆಸದೊಳ್ ಕಡೆಗಣಿಸಿ ಬಱಿಯಮಾವೆಡೆಯೊಳ್ ನೀಂ ॥
ಬೆಸಸುವೆಯೊ ನಿನ್ನ ಕಣ್ಣೊಳ್ ।
ಪಸರಿಸೆ ಕಡುಗೆಂಪು ನೋಡಿಯುಂ ಸೈರಿಪೆವೇ ॥ ೭೫ ॥

ಎನೆ ಮಾಗಧನಿಂತುಟಿ ನಿ ।
ಮ್ಮನಿಬರ ವಿಕ್ರಾಂತಮಾದೊಡಂ ಸೈರಿಸಿಮಿ ॥
ನ್ನಿನಿಸಂ ನೀಮಾಳ್ಗಳಿರಾ ।
ನೆ ನಿಮ್ಮ ಕುಲಪತಿಯೆನೆನಗೆ ಮಲೆವರುಮೊಳರೇ ॥ ೭೬ ॥

ಪರಿಭವದ ಪೊಱೆಯುನಾಂತಿ ।
ರ್ದ ರಾತಿಗಳ್ಗಳ್ಕಿ ತನ್ನ ಕುಲಮುಂ ಚಲಮುಂ ॥
ದೊರೆಯುಂಕಿಡೆ ಬಾಳ್ಗಿಂ ಗಂ ।
ಡರೂಪಿನೊಳ್ ಗಂಡನಲ್ತು ಪೆಂಡತಿಯೆಮಲಂ ॥ ೭೭ ॥

ಶರಚಾಪಚಕ್ರ ಭೀಕರ ।
ಕರವಾಳಾಯುಧ ವಿರಾಜಿಮತ್ಕರಯುಗಮಿಂ ॥
ದೊರೆಗಿಡೆ ಪೆಱಂಗೆ ಮುಗಿವುದೆ ।
ಕಿರೀಟಮಿದು ಪೆಂಪುದಿಡೆ ಪೆಱಂಗೆಱಗುವುದೆ ॥ ೭೮ ॥

ಕುಲದ ಚಲದಾಯದಱಿವಿನ ।
ಕಲಿತನದುನ್ನತಿಯನಲಸದೀಸುರ ಸಭೆಯೊಳ್ ॥
ಪಲನಾಡುವೆನ್ನ ನಾಲಗೆ ।
ಬಲಸ್ಥನೊರ್ವಂಗೆ ಜೀಯದೇವೆಂದಪುದೇ ॥ ೭೯ ॥

ಶರಮುನಿದಂ ಕಡಿಕಡಿದುಡಿ ।
ದೆರಡೆರಡಪ್ಪಂತು ತಱಿದು ರಿಪುಬಲಗಹನಾಂ ॥
ತರಮಂ ಸುಡಲೊಗೆವುದು ದು ।
ರ್ಧರ ಕೋಪಾಗ್ನಿಯೆನೆ ಮುನ್ನಮಾಂಪೊತ್ತಿಸೆನೇ ॥ ೮೦ ॥

ವಚನ: ಎಂದು ನುಡಿವಸಿತುಮಂ ನುಡಿದು ಮಾಣ್ದ ಮಾಗಧಾಮರನಂ ದೃಷ್ಟ ಪರಂಪರರಪ್ಪ ಕುಲವೃದ್ಧರೆಯ್ದೆವಂದು

ಚಲದಭಿಮಾನದುನ್ನತಿಯ ಪೆಂಪನೆ ತಾಳ್ದಿದುವೀ ನಿಕಾಮ ಕೋ ।
ಮಲಭವದುಕ್ತಿಗಳ್ ಬೆಸಸುವರ್ ಪೆಱರಾರಿದಸಿಂತು ಸಂವ ತೋ ॥
ಳ್ಬಲದದಟಂ ಪರಾಭವಮನೇಕೆಯೊ ಸೈರಿಸುವಂ ಬಲಸ್ಥನೊಳ್ ।
ಬಲಮನೆ ಪೂಣ್ಬುದುಂ ಪರಿಭವಕ್ಕೆ ಮೊದಲ್ ಸುರಸೈನ್ಯನಾಯಕಾ ॥

ಕಡುಗಲಿತನವುಂಬಾಗದ ।
ಪಡೆಮಾತುಂ ವಿದ್ಯೆಯುರ್ಕುವೊರ್ವನೊಳೆಂತುಂ ॥
ನಡೆಯವು ಭುವನಾಂತರದೊಳ್ ।
ನಿಡಿಯರ್ಗಂ ನಿಡಯರೊಳರಿದೇಂ ವಿಸ್ಮಯಮೇ ॥ ೮೨ ॥

ಮುನ್ನಾಲೋಚಿಸದಾವುದು ।
ಮನ್ನೆಗಲಿಲ್ಲಾಗದೆಂಬುದೇ ದೊರೆತಿದನೆ ॥
ಚ್ಚುನ್ನತ ಯುಶನಾವನದಂ ।
ಮುನ್ನಂ ತಿಳಿದಱಿದು ನೆಗಟಿನೆಗಱ್ವದನೀಗಳ್ ॥ ೮೩ ॥

ವಚನ: ಅದಲ್ಲದೆಯುಂ ಪೂರ್ವಾಪರವಿದೇಹಂಗಳ್ಗೆ ದೇವ ನಿಕಾಯದೊಡನೆ ಜಿನೇಂದ್ರ ವಂದನಾಭಕ್ತಿಯಿಂ ಪೋದಲ್ಲಿ ಭರತಕ್ಷೇತ್ರದೊಳೀ ಯುಗದೊಳ್ ತೀರ್ಥಂಕರರುಂ ಚಕ್ರವರ್ತಿಗಳುಮಪ್ಪರೆಂದು ಸರ್ವಜ್ಞರ್ ಜೆಸಸೆ ಪಲವು ಸೂಟಿಾನೆಲ್ಲಂ ಕೇಳ್ದಱಿದೆವು—

ಸಾಮಾನ್ಯಮಲ್ತು ಶರಮಿದು ।
ಸಾಮಾನ್ಯ ಮನುಷ್ಯನಲ್ಲನಿವನೆಚ್ಚಾತಂ ॥
ನಾಮಾಕ್ಷರಮಾಳಿಕೆಗಳ್ ।
ತಾಮಱಿಪವೆ ಚಕ್ರವರ್ತಿಯೆಂಬುದನಾತಂ ॥ ೮೪ ॥

ಮಾಗಧ ಪೆಱತಂ ಬಗೆಯದಿ ।
ರಾಗದು ಚಕ್ರಿಯೊಳೊಡಂಬಡಂ ನೆಗಟಿಲ್ ನೀ ॥
ನೀಗಳೆ ಪೂಜಿಸು ಶರಮಂ ।
ಬೇಗಂ ಪೋಗೆಱಗು ಚಕ್ರವರ್ತಿಯ ಪದದೊಳ್ ॥ ೮೫ ॥

ಪುರುಪರಮೇಶ್ವರ ಪುತ್ರಂ ।
ಚರಮಾಂಗಂ ಚಕ್ರವರ್ತಿಯೆಂದೊಡೆಪೇಟಿಲ್ ॥

ದೊರೆಪೆಱರಾರ್ ಭರತನೊಳೆನೆ ।
ಕರಗಿದುದಾಗರ್ವ ಪರ್ವತಂ ಮಾಗಧನಾ || ೮೬ ||

ವಚನ: ಅಂತು ನಿಜಶೌರ್ಯಮದಜ್ವರಂ ಮಂತ್ರಿವರ್ಗ ವೈದ್ಯ ವಚನೌಷಧಿಗಳಿಂ ಪತ್ತುವಿಡೆ

ಮುನ್ನ ಪೂಜಿಸಿ ಶರಮುಂ ।
ರನ್ನದ ಪಡಲಗೆಯೊಳಿಟ್ಟು ನಿಜಪರಿವಾರಂ ॥
ತನ್ನುಳ್ಳನಿತುಂ ಬೆರಸು ಭ ।
ಯನ್ನಡುಕಮು ನೀಯೆ ಬಂದು ಕಂಡಂ ದಿವಿಜಂ || ೮೭ ||

ಪ್ಪೊಂಗುಳಿದು ಭರತನೃಪಚರ ।
ಣಂಗಳ್ಗಾಮಾಗಧಾಮರಂ ವಿನಮಿತ ಸ ॥
ರ್ವಾಂಗಭರಂ ಚೆಚ್ಚರು ಭು ।
ಜಂಗನ ಕೊರಲಂತೆ ಬಾಗಿದಂ ಮೂಱಿಡೆಯೊಳ್ || ೮೮ ||

ತಳಮುಳಗುತ್ತೆಱಗುವುದುಂ ।
ವಿಳಸನ್ಮಾಗಧ ಕಿರೀಟರತ್ನಾಂಶುಗಣಂ ॥
ಗಳಯಿಸಿದುದವನ ಗರ್ವಮೆ ।
ಗಳಯಿಸುವಂತಿದೆ ನೃಪೇಂದ್ರಪದಸರಸಿಜದೊಳ್ || ೮೯ ||

ಚಕ್ರಂಪುಟ್ಟಲೊಡಂ ಪರ ।
ಚಕ್ರಭಯಂಕರ ಬರಲ್ಕೆ ವೇೞ್ಪುದನಱಿದೆಂ ॥
ವಿಕ್ರಮಮನುೞಿದೆನೆನತೊಂ ।
ದಕ್ರಮಮುಂ ಸೈರಿಸೊಂದು ಸೂೞ್ ಚಕ್ರಧರಾ || ೯೦ ||

ಇವು ದಿವದೊಳಗಗ್ಗಳಮೆನಿ ।
ಸುವ ರತ್ನವ್ರಾತಮೆಮ್ಮ ಮನೆಯೊಳ್ ಮಿಗಿಲ ।
ಪ್ಪುವು ನಿಧಿಗಧಿವಾಸಿಸಲ ।
ಪ್ಪುವೆಂದು ರತ್ನಂಗಳನಿತುಮಂ ಮುಂದಿಟ್ಟಂ ॥ ೯೧ ॥

ಕ-ಳಶೈಲೋನ್ನತನುಗ್ರರಾತ್ರವ ಶಿರೋಮಾಣಿಕ್ಯ ಮಾಳಾಂಶುಮಾಂ ।
ದಳಿತ ಶ್ರೀಪದಪೀಠರತ್ನ ಕಿರಣಂ ಚಕ್ರೇಶ್ವರಂ ವಾರ್ಧಿಭೂ ॥
ತಳನಾಥಂಗನುರಾಗಮಂ ಬಳೆಯಿಸಲ್ಕರ್ಘ್ಯ ಕ್ರಿಯಾತಂಡುಲಂ ।
ಗಳಿವೆಂಬಾದರದಿಂದೆ ಕೊಂಡವನವಱೊಳ್ ಪತ್ತೆಂಟುರತ್ನಂಗಳಂ ॥ ೯೨ ॥

ವಚನ : ಅಂತು ಮಾಗಧನಂ ಸಂತಸಂಬಡಿಸಿ ಪೋಗಲ್ವೇೞ್ದು ನಿಜ ವಿಜಯಕಟಕಾಭಿಮುಖನಾದನಾಗಳ್ ಸಾರಥಿ ರಥಮಂ ಚೋದಿಸುತ್ತುಂ

ಮಾಗಧನಂ ಗೆಲ್ದೊಸಗೆಗೆ ।
ರಾಗಿಸಿ ಜಳರಾಶಿ ನಿನಗೆ ಸೇಸಿಕ್ಕುವವೋಲ್ ॥
ಈಗಳ್ ಸೊಗಯಿಸಿದುದು ಮು ।
ಕ್ತಾಗಣಮಿಶ್ರಿತ ತರಂಗಹಸ್ತೋತ್ಕರದಿಂ ॥ ೯೩ ॥

ತೆರೆಗಳ ಪೊಯ್ಲಂ ಸ್ಯಂದನ ।
ತುರಗಂಗಳ್ ಮೊಗಮನೆತ್ತಿ ಬಂಚಿಸಿ ಮಟ್ಟಂ ॥
ಪರಿಯೆ ತೆರೆಯಿಲ್ಲದೆಡೆಯೊಳ್ ।
ವರೂಥಮುಮಯ್ವದೆ ತಡಿಯ ನೆಯ್ದಿದುದಾಗಳ್ ॥ ೯೪ ॥

ನೆರೆದಂತಃಪುರ ಕಾಂತೆಯರ್ ಪಲಬರುಂ ಸೇಸಿಕ್ಕೆಯುಂ ವಾರಸೌಂ ।
ದರಿಯರ್ ಚಾಮರಮಿಕ್ಕೆಯುಂ ಮಕುಟಬದ್ಧಾಧೀಶರಾಗಳ್ ವಸುಂ ॥
ಧರೆಯಂ ಪರ್ವಿರೆ ಪೈಯಱಿಸಿಕ್ಕೆಯು ಮುದಾತ್ತೋತ್ಸಾಹದಿಂ ರಾಜಮಂ ।
ದಿರಮಂ ಪೊಕ್ಕನುದಾರಸಾರವಿಭವಂ ಸಂಸಾರಸಾರೋದಯಂ ॥ ೯೫ ॥

ವಚನ: ಅಂತು ಭರತೇಶ್ವರ ಚಕ್ರವರ್ತಿ ದಕ್ಷಿಣದಿಗಂಗನಾಳ
ಕಾರನಾಗಿ ನಡೆದು ದಕ್ಷಿಣಾಂಬುರಾಶಿಯನೆಯ್ದಿ ವೈಜಯಂತೀದ್ವಾರದೊಳ್
ಬೀಡಂ ಬಿಟ್ಟಾಗಳ್ ಆ ವನೋಪಾಂತದೊಳ್ ಮುನ್ನಿನಂತೆ ಶಿಬಿರವ
ನಿಱಿಸಿ ವೈಜಯಂತೀದ್ವಾರದೊಳಗಣಿಂವ ಪೊಂದೇ ರಥದೊಳ್ ಲವಣ
ಜಲಧಿಯಂ ಪೊಕ್ಕು—

ಮಾಗಧನಂ ಗೆಲ್ದಂತವೊ ।
ಲಾಗಡೆ ವರತನುವನೊತ್ತಿಕಪ್ಪಂಗೊಂಡು ॥
ದ್ಯೋಗದ ಕಲಿತನವಂ ಪೊಗ ।
ಲ್ವಾಗಳ ವಾಙ್ಮನಸಗೋಚರಂ ಪೌರವನಾ ॥ ೯೬ ॥

ಜಳಧಿಯ ನೀರನದೊಂದಾಂ ।
ಗೊಳಗಿನ ನೀರೆಂದು ಬಗೆದು ದಾಂಟಿದ ವಸುಧಾ ॥
ತಳಪತಿಗಿತ್ತ ತ್ರಾಸಂ ।
ಗೊಳುತುಂ ಸರ್ವಸ್ವಮಂ ಪ್ರಭಾಸಾಮರನುಂ ॥ ೯೭ ॥

ವಚನ: ಅತ್ಯಂತ ಪ್ರವರ್ಧಮಾನ ವಿಜಯೋದ್ಯೋಗದಿಂ ವಿಜ
ಯಾರ್ಧ ಚಳೋಪಾಂತಮನೊಯ್ಯನೊಯ್ಯನೆಯ್ದುವಾಗಳ್ —

ಗಗನಾಂಭೋಗಮನೆಯ್ದು ಮಣಿಕೂಟಾಟೋಪಮೆಂಬಂತೆವಿ ।
ಟ್ಟಿಗೆ ಮುನ್ನಂ ಬರೆಸಾರೆ ಸಾರೆತನುವಂ ತತ್ಕುಂಜ ಸಂಜಾತ ಭೂ ॥
ಜಗಳತ್ಪುಷ್ಪಪರಾಗ ಸೌರಭವಹನ್ಮಂದಾನಿಲಂ ಸೋಂಕೆ ತೊ ।
ಟ್ಟಗೆ ಕಣ್ಗೊಂಡುದು ಪೌರವಂಗೆ ವಿಜಯಾರ್ಧಾದ್ರೀಂದ್ರ ಶೋಭೋದಯಂ

ವಚನ: ಆ ವಿಜಯಾರ್ಧದ ಕಡೆವಿಡಿದು ಮೇಗೆ ನೆಗೆದ ವನ
ವೇದಿಕಾಪ್ರದೇಶಮನೆಯ್ದಿದಾಗಳ್ —

ಆದಱಿಕೊಳಗೆ ಪುದಿದ ಸಪ್ತ ।
ಚ್ಛದ ಚಂಪಕ ನಾಗಪೂಗಪುನ್ನಾಗವನಂ ॥
ಪುದಿದ ಪೊಸಗಂಪಿನೊಳ್ ಬಳ ।
ಸಿದುದಾಗಳ್ ಪುಗುವ ಭರತನಂತಃಪುರವಂ ॥ ೯೯ ॥

ವಚನ: ಅಂತು ಸೊಗಯಿಸುವ ವನವೇದಿಯ ನಾನಾಮಣಿಮಯೂಖಮಾಲಾ ವಿರಾಜಿತೋತ್ತುಂಗ ತೋರಣದ್ವಾರದಿಂದಂ ನುಗುಳ್ದು ವನವೀಥಿವಿಡಿದು ಬಂದು ವಿಜಯಾರ್ಧ ಮಧ್ಯಮಕೂಟಾಸನ್ನ ಪ್ರದೇಶ ನಿವೇಶಿತ ಶಿಬಿರನಾಗಿ ನಿಯಮದೊಳಿರ್ದ ಭರತೇಶ್ವರ ಚಕ್ರವರ್ತಿಯಿರವನಱಿದು —

ಸಿತಕುಸುಮಶೇಖರಂ ಚ ।
ರ್ಚಿತ ಚಂದನ ನತಿವಿಳಾಸವಿಧೃತದುಕೂಲಂ ॥
ಧೃತರತ್ನಾರ್ಘ್ಯಂ ಬಂದಂ ।
ಪತಿಗಿದಿರಂ ಶಂಖನಿಧಿಯೆ ಬರ್ಪಂತಾಗಳ್ ॥ ೧೦೦ ॥

ಮಣಿಮಕುಟಂ ಶಿಖರಂ ಲಂ ।
ಬಣಿಗೆಯ ಪೊಸಮುತ್ತು ನಿರ್ಝರಂ ಮಣಿತಿಲಕಂ ॥
ಮಣಿಕಟಕಮಾಗೆ ತದ್ಗಿರಿ ।
ಗೆಣೆಯಾದಂ ತನ್ನ ಪೆಸರೊಳಂ ವಿಜಯಾರ್ಧಂ ॥ ೧೦೧ ॥

ಬಂದು ಮಣಿಮಕುಟ ನಸವಸ ।
ದಿಂದಂ ಚಕ್ರಿಯ ಪೊಡಲ್ದ ತೇಜಕ್ಕೆ ಮಸು ।
ಳ್ವಂದೆಱಗಿ ಮುಂದೆ ನಿಲ್ವುದು ।
ಮೊಂದವಯವದಿಂದೆ ಸಾರೆ ಕರೆದು ನೃಪೇಂದ್ರಂ ॥ ೧೦೨ ॥

ವಚನ: ಭದ್ರಾಸನಮನಿಕ್ಕವೇಳೆ ಕುಳ್ಳಿರ್ದು ವಿಜಯಾರ್ಧಕುಮಾರಂ —

ಇದು ವಿಜಯಾರ್ಧಮೆನ್ನ ಪೆಸರುಂ ವಿಜಯಾರ್ಧಮಲಂಘ್ಯಮೆಂದು ಮಿಂ ।
ತಿದು ಪೆಱಗಾರ್ನುಮಿನ್ನೆಗಮಲಂಘ್ಯನೆನಿಂ ನಿನಗಾಳೆನಾಳೆಲೆ ॥
ಕ್ಕದೊಳಿದು ಚಕ್ರವರ್ತಿಗಳ ದಿಗ್ವಿಜಯಾರ್ಧದೊಳೊಂದಿ ನಿಂದುದ ।
ಪ್ಪುದಱಿೊಳೆ ಸಂದುದೀ ಗಿರಿಯುಮಿಾಜಗದೊಳ್ ವಿಜಯಾರ್ಧನಾಮದಿಂ

ಇದಱೊಳ್ ಮಧ್ಯಮಕೂಟದೊಳ್ ವಸಿಯಿಪೆಂ ನಿನ್ನಾಜ್ಞೆಪೂಮಾಲೆಯಂ
ದದೆ ನಿಂದಿರ್ಪುದು ಮತ್ಕಿರೀಟತಟದೊಳ್ ಚಕ್ರೇಶರಾರ್ ಬಂದೊಡಂ ॥
ಮೊದಲೊಳ್ ಮಾಳ್ಪ ನಿಯೋಗಮಿಂತದೆನಗೆಂದಾನಂದದಿಂ ತಾನೇ ಮಾ।
ಡಿದನಾಚಕ್ರಿಗೆ ನಾಡೆಯುಂ ವಿಭವದಿಂ ಪುಣ್ಯೋದಕ ಸ್ನಾನಮಂ ॥

ವಚನ : ಅಂತು ವಿಜಯಾಭಿಷೇಕಂ ಗೆಯ್ದು —

ಸಾರಮಿದು ರತ್ನಮಯ ಭೃಂ ।
ಗಾರಂ ಹರಿಪೀಠಮಿದು ಜಗತ್ರಿತಯಾಳಂ ॥
ಕಾರಮಿದು ದಿವ್ಯಮಾತಪ ।
ವಾರಣಮಮೃತಾಂಶು ಬಿಂಬಧವಳವಿಳಾಸಂ ॥ ೧೦೫ ॥

ಇವು ಚಮರೀಜಾತಂ ದು ।
ಗ್ಧವಾರ್ಧಿಪೇರ್ನೋಪಮಾನಮಿವು ನಿನಗೆಯೆ ತ ॥
ಕ್ಕುವು ನಿನ್ನ ಜಸದ ರೂಪಿನೊ ।
ಳಿವೆ ಮೆಱೆವುವು ಸಕಳ ಚಕ್ರವರ್ತಿಶ್ರೀಯುಂ ॥ ೧೦೬ ॥

ವಚನ: ಎಂದು ವಿಜಯಾರ್ಧಕುಮಾರಂ ಸಾರ ವಸ್ತುಗಳನೋ ಲಗಿಸಿ ತನಗಾಜ್ಞಾವಿಧೇಯನಾಗಿ ಪೋದಂ. ಅನ್ನೆಗಂ ಭರತೇಶ್ವರ ಚಕ್ರವರ್ತಿಯುಮಲ್ಲಿ ಚಕ್ರರತ್ನಮಂ ಪೂಜಿಸಿ —

ವಿಜಯಾರ್ಧ ಜಯಮಿದೆನಗಾ |
ಪಜಯಂ ನೆಗಲ್ದುತ್ತರಾರ್ಧ ಜಯಮೆಜಯಂ ದಿ |
ಗ್ವಿಜಯದೊಳೆಂದೂರ್ಜಿತ ಭುಜ |
ವಿಜಯಂ ದಿಗ್ವಿಜಯ ಚಿಂತೆಯಂ ತೊಡರ್ದಾಗಳ್ || ೧೦೭ ||

ವಚನ: ಅಂತು ತನ್ನ ಮುನ್ನೆ ಬಂದ ವನವೀಥಿಯೊಳಗನೆ ಮಗುಳ್ದು ಪೋಗಿ ವೇದಿಕದ್ವಾರದಿಂ ಪೊಱಮಟ್ಟು ವಿಜಯಾರ್ಧ ವನವೇದಿಕಾಸನ್ನ ವಿಶಾಲಪ್ರದೇಶದೊಳ್.

ನೆಲೆವೀಡಂ ಬೀಡುಮಾಡಲ್ ಕೆಲವು ದಿವಸಮಂ ಮಾಳ್ಪುದಿನ್ನಿಲ್ಲಿ ರೂಪ್ಯಾ |
ಚಲಮಂಪಾಯ್ದುತ್ತರಾರ್ಧಕ್ಕೆಮಗೆ ನಡೆವ ಸಾಮಗ್ರಿಯಂ ಮಂಡಲೀಗಳ್ ||
ನೆಲೆ ಗಂಗಾಸಿಂಧುಮಧ್ಯ ಕ್ಷಿತಿಪತಿಗಳುಮಾತಾಣದೊಳ್ ಬಂದು ಕಾಣ್ಬರ್ |
ಪಲರೆಂದಂತಲ್ಲಿ ಚೆಲ್ವಾಗಿರೆ ಬಿಡಿಸಿದನುರ್ವೀಶ್ವರಂ ತನ್ನ ಬೀಡಂ|| ೧೦೮ ||

ವಚನ: ಅಂತು ಬೀಡಂ ಬಿಟ್ಟಿರ್ಪನ್ನೆಗಂ ಗಂಗಾಸಿಂಧುಗಳೆರಡೆಡೆಯ ಭೂಪಾಳರಿಂದೆ ಮುನ್ನಾ ವೃಷಭನಾಥನ ನಡಪಿದುದಮಂ, ತಮ್ಮಾಳ್ನಣ್ಪಮಂ ಬಗೆದು ಕುರುರಾಜಾಧಿಮೂರ್ಧಾಭಿಷಿಕ್ತ ಪಾರ್ಥಿವಸನ್ನದ್ಧ ಬಲಪರಿಣತರಾಗಿ ಭರತೇಶ್ವರಚಕ್ರವರ್ತಿಯನಾಸ್ಥಾನದೊಳ್ ಬಂದು ಕಂಡು –

ಒಡೆವುದೆ ವಜ್ರಕವಾಟಮು |
ನಡರ್ವುದೆ ವಿಜಯಾರ್ಧಗಿರಿಯ ನಿಂತೀಗಳೆ ಪೂ ||
ಣ್ದೆಡೆಗಿಡುವುದೆ ಸಿಂಧುವಿನಿಂ |
ತಡೆವಂಪಮಿದಾವುದೆಮ್ಮನೆಮ್ಮನೆ ಬೆಸಸಾ || ೧೦೯ ||

ಸಿನಗುತ್ತರಾರ್ಧಮೊಂದ |
ರ್ಧನಿಮೇಷ ಮುಹೂರ್ತಮಾತ್ರದಿಂ ಬಾರದೆ ಕೈ ||

ಗಿನಿತುವರದೇವರ್ ನಡೆ ।
ವನಿತುಂ ಮಾಣ್ಬನಿತುಮಂತದಾವುದು ಗಹನಂ ॥ ೧೧೦ ॥

ಎಂಬನ್ನೆಗಮುಂ ಬರದೊಳ ।
ಳುಂಬಂ ಬೆಳಗೆನಿಸಿ ಮಕುಟಮಣಿಕುಂಡಲ ದಿ ॥
ವ್ಯಾಂಬರ ಭೂಷಿತನಮರ ಕ ।
ದಂಬಕ ವೃತನೊರ್ವನಮರನಾಗಿರಿವರದಿಂ ॥ ೧೧೧ ॥

ಅವತರಿಸಿ ಚಕ್ರಿಯಂ ಕಂ ।
ಡವನತಮಣಿಮಕುಟನುಚಿತಪೀಠ ನಿವಿಷ್ಟಂ ॥
ಭುವನೇಶಂ ಬೆಸಗೊಳೆವಿನ ।
ಯವಚಃ ಪ್ರಸರಂಗಳೆಸೆದೊಡಂಬಡೆ ನುಡಿದಂ ॥ ೧೧೨ ॥

ಭುವನಕ್ಕೆ ಕುಶಲಮಂ ಮಾ ।
ಡುವ ನಿನಗೇನೆಂದು ಕುಶಲಮೇ ಎಂಬೆಂ ವೇಲ್ ॥
ಭುವನನುತಮಾಣದರಿ ನೃಪ ।
ಭುವನಕ್ಕವ್ವಳಿಪ ತೋಳ್ಗೆ ಕುಶಲಮೆ ನಿನ್ನಾ ॥ ೧೧೩ ॥

ಭವದೀಯ ಬಳ ವಿಜೃಂಭಿತ ।
ರವದಿಂತ್ರಸ್ತನೆ ನದೀಶ ಬಂದೆಂ ಕಾಣಲ್ ॥
ಭವದಂಘ್ರಿ ಸರೋಜಮನಾ ।
ನವಧೂತಾರಾತಿನೃಪ ಭವತ್ಕಿಂಕರನೇಂ ॥ ೧೧೪ ॥

ಕೃತಮಾಳಾನೆನೆಂಬೆ ನಿಖಾ ।
ಪ್ರತೀತನೆಂ ಗಿರಿತಟಂಗಳೆನ್ನ ಱಿಯದುವಿ ॥
ಲ್ಲ ತಮಿಸ್ರಗುಹಾಕೂಟ ।
ಸ್ಥಿತನೆಂ ನೀನೆನ್ನವಾಳ್ವದಾಳ್ವಸಗೆಯ್ವೆಂ ॥ ೧೧೫ ॥

ಚಂದೊಂದಱೊಸೀತುಡುಗೆ ಗ ।
ಳೊಂದೊಂದಗ್ಗಳಮಿವೆಂದು ಪದಿನಾಲ್ಕು ಮನೋ ॥
ರೂರಿದನೆ ತೋಱಿ ನಿಜಾದರ ।
ದಿಂದಂ ಭರತೇಶ್ವರಂಗೆ ದಿವಿಜಂ ಕೊಟ್ಟಂ ॥ ೧೧೬ ॥

ವಚನ: ಮನುವಂಶಧ್ವಜಂ ಸೇನಾನಾಯಕನಮೊಗಮಂ ನೋಡಿ ಕೃತಮಾಳಾಮರೋದ್ದಿಷ್ಟೋಪಾಯಮನೆಲ್ಲಮಂ ಪೇೞ್ದು –

ತೆಱಿವ ತೆಱಿನಿಂತುಟೆಂತೀ ।
ತೆಱದಿಂದೆ ತಮಿಸ್ರಗುಹೆಯ ವಜ್ರದಪಡಿಯಂ ॥
ತೆಱಿದದಱ ಬೆಂಕೆಪೋಪಿನ ।
ಮೆಱಗಿಸುನೀಂ ಮ್ಲೇಚ್ಛಖಂಡಮಂ ಪಡುವಣದಂ ॥ ೧೧೭ ॥

ಎನೆ ರಥಿನೀಪತಿ ಚಕ್ರೀ ।
ಶನ ಬೆಸನಂ ಪೂಣ್ದು ರಾಗದಿಂದೇಱಿ ಜಗ ॥
ದ್ವಿನುತಾಶ್ವರತ್ನಮಂ ಪಿರಿ ।
ದುನಚ್ಚಿನೊಳ್ ಪಿಡಿದು ದಂಡರತ್ನಮನಾಗಳ್ ॥ ೧೧೮ ॥

ಕತಿಪಯ ತುರಂಗಬಲ ಪರಿ ।
ವೃತನೊಳಪೊಕ್ಕೊಗೆದ ಸಿಂಧುವನವೇದಿಕೆಯಂ ॥
ಸತತ ಗತಿವೇಗದಿಂದೂ ।
ರ್ಜಿತ ಭುಜಬಳನೆಯ್ದೆ ನಗದವನವೇದಿಕೆಯಂ ॥ ೧೧೯ ॥

ವಚನ: ಆ ವೇದಿಕೆಯ ಮೂಡಣಮಣಿಮಯ ಸೋಪಾನಂಗಳಿಂದಂ ರಜತಾಚಳ ಜಗತೀತಳಮನೇಱಿ ತನ್ನೊಡನೆಯ ಬಲಮೆಲ್ಲಮಂ ಪಡುವಣ ಸೋಪಾನಂಗಳಿಂದಂ ಬೆಂಕೆಭೋಂಕೆನಳುರದಂತು ಬೇಗಂ ಮ್ಲೇಚ್ಛಖಂಡಾಂತರ್ವರ್ತಿಯಾಗೆ ಮುನ್ನಂ ಕಳಿಪಿ ಗುಹೋತ್ಸಂಗಮಂ

ತಾನೊರ್ಬನೆಯ್ದೆ ವಂದು ತುರಗರತ್ನಮನೇಱಿ ಪಶ್ಚಿಮಾಭಿಮುಖನಾಗಿ ನಿಂದು ಭರತೇಶ್ವರಚಕ್ರವರ್ತಿಗೆಲ್ಗೆಂದು ಸಾತಿರೇಕಂ ದ್ವಾದಶಯೋಜನ ವಿಸ್ತಾರಾಷ್ಟಯೋಜನೋತ್ಸೇಧವಜ್ರಕವಾಟಪುಟಂಗಳಂ –

ಭರದಿಂದಂ ದಂಡದೊಳ್ ತಾಟಿಸಿದೊಡೆ ವಿಜಯಾರ್ಧಾಚಳಂ ತೊಟ್ಟನಾಗಳ್
ಗಿರಿದತ್ತೆಂಬಂತುಮಾಪರ್ವತ ಮುಳಱಿದುದೆಂಬಂತುಮಾಕಾಶಾಂ ॥
ತರದಿಂದಂ ಪತ್ತುವಿಟ್ಟೇಧರೆಗೆ ಕೆಡೆದುದೆಂಬಂತುಮಾಶಂಕೆ ಪ್ರೋಣ್ಮ ।
ತ್ತಿರೆ ಪೆರ್ಚಿತ್ತುಗ್ರಘೋಷಂ ಪ್ರಳಯಘನ ಘಟಾಟೋಪ ಗಂಭೀರಘೋಷಂ

ಅರರೀಪುಟಮೆರಡುಂ ಜೀ ।
ರ್ಗರೆದು ಮುರಲ್ದಂದಮೆಂತುಟಾಯ್ತೆನ್ನ ಭಯಂ ॥
ಕರ ದಂಡರತ್ನಹತಿಯಿಂ ।
ಗಿರಿನೊಂದು ನರಳ್ವ ಮಾಱ್ಕೆಯಂತಾಯ್ತಾಗಳ್ ॥ ೧೨ ॥

ತೆಱೆಯಲೊಡಮಲ್ಲಿ ಬೆಂಕೆಯು ।
ಪೊಱಮಡು ವೊಂದಂದಮನಿತು ಕಾಲದೊಳೆಂದುಂ ॥
ಪೊಱಮಡದೆ ಭೋಂಕೆನಾಗಳ್ ।
ಪೊಱಮಟ್ಟವೊಲಾದುದುಷ್ಣದೀರ್ಘೋಚ್ಛ್ವಾಸಂ ॥ ೧೩ ॥

ವಚನ: ಅಂತಭೇದ್ಯ ವಜ್ರಕವಾಟ ಪುಟಂಗಳಾಪರ್ವತವೆರ್ದೆದೆಱೆವಂತೆ ತೆಱೆಯೆ ಭೋಂಕನೆಳರ್ವ ಬೆಂಕಿಯುಂ ಸೋಂಕಲೀಯದೆ

ಕಸೆಯುನಿನಿಸಱಿಪಿ ಕೂಡೆ ಲಂ ।
ಘಿಸಿದುದು ಪನ್ನೆರಡುಯೋಜನಂಬರಮಿನ್ನೇ ॥
ವೆಸಗೊಳ್ವುದೊ ಕಡುವೇಗದಿ ।
ನಸಕಳಿದುದು ಮನೆಮುಮಂ ತುರಂಗಮರತ್ನಂ ॥ ೧೪ ॥

ವಚನ: ಅಂತು ತುರಂಗರತ್ನದ ಜವದೊಳೊಡಂಬಟ್ಟಂತೆ ಸಕಳ ಚಮೂಪತಿಯುಂ ಮನಶ್ವರತ್ನಮುಮಂ ದಂಡರತ್ನಮುಮಂ ಮೆಯ್ಮೆಯ್ಯೊಳೆ ಕಾವದೇವತೆಗಳ್ ವಿಜಯಾರ್ಧತಟವೇದಿಕೆಯಂ ತಗುಳ್ದು ಸಿಂಧುವಿನ ಪಶ್ಚಿಮದಿಗ್ಭಾಗ ವನವೇದಿಕೆಯ ತೋರಣ ದ್ವಾರದಿಂದಂ ಮ್ಲೇಚ್ಛಖಂಡ ದೊಳಗಣ ವಿವಿಧಾಕಾರ ಪುರಗ್ರಾಮಸೀಮಾಭಿರಾಮ ಭೂಮಿಭಾಗಮಂ ಪುಗಿಸಿದಾಗಳ್ ಸೇನಾನಾಯಕಂ ಮ್ಲೇಚ್ಛಖಂಡಮಂ ತ್ರಿಃಪ್ರದಕ್ಷಿಣಂಗೆಯ್ದು ಬಾಯ್ಕೇಳಿಸಿ ಪಲಂಬರ್ ಮ್ಲೇಚ್ಛರಾಜನವರವರ ಜೀವಧನಕುಲ ಧನಂಗಳ್ ವೆರಸು ಮುಂದಿಟ್ಟು ತೋರಣದ್ವಾರದಿಂದಂ ಸಿಂಧುವನವೇದಿಕೆಯೊಳಗನೆ ಬಂದು ಸೋಪಾನಾಂತರದೊಳೀ ವಿಜಯಾರ್ಧ ತಟವೇದಿಕೆಯುಂ ಕಳಿದು ಜಗತೀತಳಮನೇಱಿ ಬರ್ಪನ್ನೆಗಂ —

ಒಳಗಣ ಬೆಂಕೆಯುನಱುದಿಂ ।
ಗಳಂತು ನಗಮುಗುಟ್ದು ಶಾಂತರೂಪದಿನಿರ್ದ ॥
ತ್ತಳುರುತ್ತಮಿರ್ದಕೋಪಾ ।
ನಳನಿಂದು ಪಶಾಂತನಾದ ಭೂಭೃತ್ತತಿವೋಲ್ ॥ ೧೨೪ ॥

ವಚನ: ಆಗಳಾ ಗುಹಾದ್ವಾರಮಂ ಪತಾಕಿನೀ ಪತಿವಡೆಗೆ ನಡೆಯಲಿಂಬಪ್ಪಂತು ಶೋಧಿಸಿ ಕಾಪಂ ಪೇಟ್ದು ನಿಜವಿಜಯ ಶಿಬರಮಂ ಪೊಕ್ಕು ಚಕ್ರವಲ್ಲಭನಾಸ್ಥಾನ ಮಂಟಪದೊಳ್ ದೂರಾವನತ ಮಣಿಮಕುಟನಾಗಿ ಕಂಡು ವಸ್ತುವಾಹನ ಪುರಸ್ಸರಂ ಮ್ಲೋಚ್ಛರಾಜರಂ ಲಲಾಟಸ್ಪೃಷ್ಟ ಭೂತಳಕಂಮಾಡಿ ಕಾಣಿಸಿ

ಹರಿಕರಿ ಕನ್ಯಾರತ್ನಾ ।
ಭರಣಂಗಳ್ ದೇವಕುಲಧನಾದಿಗಳಿವುದೇ ॥
ವರದೊಂದಾಜ್ಞೆಯ ನಾಂಪರ್ ।
ಕಿರೀಟದಿಂದಿವರ್ಗಳಿನಿಬರುಂ ಭೂಪತಿಗಳ್ ॥ ೧೨೫ ॥

ವಚನ: ಎಂದವರ ದೇಶ ನಾಮ ಕುಲಗೋತ್ರಂಗಳಂ ನೆಱೆಯೆ ತಿಳಿಯೆ ಬಿನ್ನಪಂಗೆಯ್ದು ಭೃತ್ಯಭಾವಮಂ ಪೂಣಿಸಿ ಸನ್ಮಾನದಾನಂಗಳೊಳ್ ಸಂತಸಂಬಡಿಸಿ ತಂತಮ್ಮ ನೆವೆಗಳ್ಗೆ ಪೋಗಲ್ವೇೞ್ದು ಶುಭದಿನ ಮುಹೂರ್ತದೊಳ್ ಉತ್ತರ ಭರತವಿಜಯೋದ್ಯೋಗಮಂ ಭರತರಾಜನಱಿಪವೆಂದು ವಿಜಯಭೇರಿಯಂ ಪೊಯ್ಸಿದಾಗಳ್

ದೆಸೆಗಳ ಸಂದಂ ಪಱಿದಾ ।
ಗಸದಿಂದಂ ಪತ್ತುವಿಡಿಸುವಂತೆ ವ್ರೊಲಿಳೆಯಂ ॥
ಮುಸಕದೊಳೆಪೊತ್ತು ನೆಗೆವವೊ ।
ಲೆಸೆದುದು ದಿಗ್ವಿಜಯಭೂರಿಭೇರೀನಿನದಂ ॥ ೧೨೬ ॥

ವಚನ: ಅಂತು ವಿಜಯಾರ್ಧಾಚಳಕಟಕಾಭಿಮುಖೀಕೃತ ನಿಜ ವಿಜಯ.ಕಟಕನಾಗಿ ಬಡಗವೊಗದೆ ನಡೆದು ತಮೋಮಯಮುಮಪ್ಪ ತಮಿಸ್ರಗುಹೆಯನೆಯ್ದಿದಾಗಳ್

ಅದಱೊಳಗೆ ಪುದಿದು ಮುಂದೈ ।
ಸಿದ ಕಲ್ತಲೆಗಗಿದು ಸುಗಿನಪೆರ್ಬಂಡೆಯುಂಕಂ ॥
ಡಿದು ನಡೆಯನೆ ಸೆಕೆದಿಂದಿ ।
ರ್ದುದೆಂದು ಬೆಸಸಿದೊಡೆ ಚಕ್ರಿಸೇನಾಪತಿಯುಂ ॥ ೧೨೭ ॥

ಆತಂ ಪುರೋಹಿತಂ ಬೆರ ।
ಸಾತತತಿಮಿರಪ್ರಭೇದನೋಪಾಯಮಿದೆಂ ॥
ದಾತಮುಮಂ ಕಿಡಿಸಲ್ ಸಂ ।
ಜಾತನಯಂ ಬಗೆದು ತದ್ಗುಹಾಭಿತ್ತಿಗಳೊಳ್ ॥ ೧೨೮ ॥

ಎರಡಱೊಳಂ ಚಂದ್ರಾದಿ ।
ತ್ಯರನಾಗಳ್ ಬರೆದು ಕಾಕಿಣೀರತ್ನದೊಳಂ ॥
ಸ್ಫುರಿತಮಣಿ ರತ್ನದೊಳಮುಂ ।
ತರಿಸುತ್ತುಂ ಯೋಜನಕ್ಕೆ ಬರೆದೊಂದೊಂದಂ ॥ ೧೨೯ ॥

ಬಿಸಲಂ ಬೆಳ್ದಿಂಗಳುಮಂ ।
ಪಸರಿಸೆ ಕಲ್ತಿಲೆತೆರಳ್ದು ತೊಳ್ದೊಡರಾಗಂ ॥
ಪಸರಿಸೆ ನಡೆದತ್ತು ಬಲಂ ।
ಪಸರಿಸಿ ನದ್ಯುಭಯತಟದೊಳೊಡನೊಡನಾಗಳ್ ॥ ೧೩೦ ॥

ವಚನ: ಆ ಪಡೆ ಕಣ್ಬಡೆದಂತೆ ಸೇನಾನಿಯುಮದೊಳ್ ನಡೆದು ಕೆಲವು ಪಯಣಂಗಳಿಂ ಗುಹಾಭಿತ್ತಿಗಳೆರಡುಂ ಕುಂಡಂಗಳೊಳ್ ಪುಟ್ಟಿ ಬಂದೆರಡುಂ ದೆಸೆಯೊಳಂ ಸಿಂಧುವಿನೊಳ್ ಕೂಡಿದ ಗುಹಾಮಧ್ಯದ ನಿಮ್ನ ಗಾತಟದೊಳ್ ಬೀಡಂ ಬಿಡಿಸಿ —

ಒಂದಱ ನೀರ್ಮಳಲೊಂದ ।
ಕೊರ್ಂದಿಸುತುಂ ಮೇಗೆಕೊಂಡು ನೆಗೆವುದಿದೇಂ ಮ ॥
ತ್ತೊಂದಱ ನೀರಡಿಗರ್ದುವು ।
ದೆಂದತಿ ವಿಸ್ಮಯವೆ ನೋಡಿದಂ ಭರತೇಶಂ ॥ ೧೩೧ ॥

ವಚನ: ಅಂತುಭಯ ನದಿಯುವೈಷಮ್ಯಮುಮನಾಶ್ಚರ್ಯಂ ಬಟ್ಟು ನೋಡಿನದ್ಯುತ್ತರಣೋಪಾಯುವಾವುದೆಂದು ಬಗೆದು ಬೇಗಂ ಸ್ಥಪತಿ ರತ್ನಮಂ ಕರೆದು ತೋರಿದೊಡೆ —

ಅಡಿಯಂ ಮೇಗಣ್ಗೆತ್ತುವ ।
ಕಡುಗಾಳಿಯು ಪೊಯ್ಲೊಳಿದಱನೀರೂಱಿದಪು ॥
ರ್ದಡಿಗೆ ಬರೆತೆಗೆವ ಗಾಳಿಯು ।
ನಡಿಗಿಱಿದಪುದಿದಱ ಸೀರಿಂದೊಂದಚ್ಚರಿಯೆ ॥ ೧೩೨ ॥

ವಚನ: ಎಂದು ಬಿನ್ನಪಂ ಗೆಯ್ದು ಮಹಾದ್ರುಮಂಗಳಂ ತರಿಸಿ ನಡಿಸಿ ನಟ್ಟಕಂಬಂಗಳ ಮೇಗೆ ಸಾರದಾರಂಗಳ ನೆಡೆಗಿಱಿದಿರೆ ಪಾಸಿಪಸರಿಸಿ ನಡೆಯಲಪ್ಪಂತೆ ಮಾಡಿದಾಗಳ್ —

ದಳ್ಳಿಸಿಕುಕಿಲುತ್ತಂಬುಧಿ ।
ಯುಳ್ಳಾಳಂ ನೆಗಲ್ಚಿ ಕವಿದು ನರ್ತಿಸಿ ನಡೆದ ॥
ತ್ತಳ್ಳಾಡೆನೆಲಂ ಬಲಮದು ।
ಕೊಳ್ಳೆಂದು ಮಹಾರವಂ ಪೊದಲ್ದಿಸೆವಿನೆಗಂ ॥ ೧೩೩ ॥

ವಚನ: ಅಂತು ಭರತೇಶ್ವರ ಚಕ್ರವರ್ತಿಯು ಮನೇಕಮದಗಜ ಘಟಪರಿವೇಷ್ಟಿತನಾಗಿ ರಾಜಮಾರ್ಗದೊಳ್ ನಡೆವಂತದಱ ಮೇಲೆ ನಡೆದು ಕೆಲವು ಪಯಣಂಗಳಿಂದುತ್ತರ ಗುಹಾದ್ವಾರ—ಮನನಾಯಂಸದೊಳ್ ತೆಱದು ಪೊಱಮಟ್ಟಾಗಳ್

ಸೆಱವನೆಯಿಂದಂ ಭೋಂಕೆನೆ ।
ಪೊಱಮಟ್ಟಾವೊಲಂದು ಗರ್ಭಗೃಹದಿಂದಂ ಮೇ ॥
ಣ್ಪೊಱಮಟ್ಟವೊಲಾಗುಹೆಯಿಂ ।
ಪೊಱಪಟ್ಟುದು ಸೈನ್ಯಮಂಬುಧಿಧ್ವನಿಯಿಂದಂ ॥ ೧೩೪ ॥

ವಚನ: ಅಂತು ವಿಜಯಾರ್ಧಾ ಮಹೀಧರೋಪಕಂಠವನನಿಕಟದೊಳ್ ಬೀಡಂ ಬಿಟ್ಟಾಗಳ್

ಆ ಗುಹೆಯೊಳಗಣ ಶರದದೊ ।
ಳಾಗಳೆ ಬಸವಳಿದ ಬಲಮನಾಱಸುವವೊಲಾ ॥
ಯ್ತಾಗಿರಿಯ ಕೊಳದ ಮರಗಳ ।
ಪೂಗಳ ಕಂಪನೆ ತೆರಳ್ಚಿ ಬೀಸುವ ಪವನಂ ॥ ೧೩೫ ॥

ವಚನ: ಅಂತಲ್ಲಿ ಬೀಡಂ ಬಿಟ್ಟು ನಿಂದಾಗಳ್ ಬಳಾಕಾವರ್ತರೆಂಬಿರ್ವರುಂ ಮ್ಲೇಚ್ಛರಾಜರ್ ತಮ್ಮ ಬಲಮನೊಂದುಮಾಡಿಕೂಡಿಕೊಂಡು

ಜಳದಾಕಾರದೊಳ್ಪೈದೆ ಪರ್ಚಿಸಕಳಾಶಾಚಕ್ರಮಂವ್ಯೋಮಮಂ ।
ಡಳಮಂ ಕರ್ಗಿ ಕಱಂಗಿ ತೋಱಿ ಸಿಡಿಲಿಂಮಿಂಚಿಂ ಘನಧ್ವಾನದಿಂ ॥
ದಿಳಿಕಂಪಂಗೊಳೆ ಸೋನೆಯಿಂ ಸರಿಗಳಿಂ ತಂದಲ್ಗಳಿಂದಂದು ಭೂ ।
ತಳಮೇಕಾರ್ಣವಮಾಗೆ ಚಕ್ರಿಯ ಬಲಕ್ಕಾತಂಕಮಂ ಮಾಡಿದರ್ ॥

ವಚನ: ಅಂತು ವಿಳಯ ಕಾಳಜಳದೋರ್ಣಜಳಮುಮನಿಱಿಸಿ ಜಳಧರ ಜಳಧಿಯ ನಡುವೆ

ಅಡಿಯೊಳ್ ಪಾಸಿದ ಚರ್ಮರತ್ನಪಟಮಂ ತಚ್ಛತ್ರರತ್ನಂ ಬೆಡಂ ।
ಗಿಡಿದೋರಂತಿರೆ ಮುಟ್ಟೆ ಪೋಲ್ದತೆಱದಿಂ ದಿಂಬಾಗೆ ತನ್ಮಧ್ಯದೊಳ್ ॥
ಸೊಡರಿರ್ಪಂತಿರೆ ಚಕ್ರರತ್ನಮದಱೊಳ್ ನಿರ್ಬಾಧಮಿರ್ದತ್ತುಪೆ ।
ರ್ಪಡೆ ವಾರಾಸಿಯೊಳಿರ್ದ ಚೈತ್ರದೊಳಗಂದೆತ್ತಂ ತೆರಳ್ದಿರ್ದವೊಲ್ ॥

ಸಿಡಿಲಂ ಸಿಡಿಲಟ್ಟುವುದೆನೆ ।
ಕುಡುಮಿಂಚಂ ಮಿಂಚುತಳ್ತುದೆನೆ ಗಗನಮನೇ ॥
ನಡದರ್ಪೋ ಜಯನ ಸೇರಂಗಳ್ ।
ಸಿಡಿಲುಂ ಮಿಂಚುಂ ಪಳಂಚಿ ಸಂಚಳಿಸುವಿನಂ ॥ ೧೩೮ ॥

ತಳತಳಿಪ ಮುಗಿಲ್ಗಳ್ಕಳ ।
ಕುಳಮಪ್ಪಿನ ಮಳುರ್ದು ಜಯನ ಶರತತಿಕೊಳೆ ಬ ॥
ಲ್ವಳಿಯ ಮಱಿವೋಕ್ಕವೊಲ್ ಕಳ ।
ಕುಳಮಾದರ್ ನಾಗರಾಜರಪಗತತೇಜರ್ ॥ ೧೩೯ ॥

ವಚನ: ಆಗಳ್ ಜಯನ ಭುಜವಿಜಯ ಸೂಚಕವಾಗಿ ಮೇಘನಾದ ಸಮಾನವಾದ ಸಿಂಹನಾದಕ್ಕೆ ಚಕ್ರವರ್ತಿ ಮೆಚ್ಚಿ ಮೇಘೇಶ್ವರ ನಾಮಮಂ ದಯೆಗೆಯ್ದು ಬಳಾಕಾವರ್ತರ ಕುಲಧನಮುಮಂ ಯಶೋಧನ

ಮುಮಂ ಕೈಕೊಂಡು ಅವರಂ ವಶವಿಧೇಯರ್ ಮಾಡಿ ಸಿಂಧುನದೀತೀರಂ ಪಿಡಿದು ಪೋಗಿ ಹಿಮವತ್ಪರ್ವತಮಂ ನೋಡಿ ತದ್ಗಿರೀಂದ್ರ ಮಧ್ಯಮ ಕೂಟದಿಂದಂ ಸಯ್ತು ತೆಂಕವಾಗದೆ ಬಂದು ವೃಷಭಾಚಲಮಂ ಕಂಡು

ಆ ವೃಷಭಾದ್ರಿಯ ಮೇಖಳಾಭಿತ್ತಿಯೊಳ್ ಆತ್ಮೀಯ ವಿಶ್ವಂಭರಾ ವಿಜಯಪ್ರಶಸ್ತಿಯ ನಟ್ಟಿಯೊಳ್ ಒರೆಯಿಸುವೆನೆಂದು ಪೋಗಿ ನೋಡು ವನ್ನೆಗಂ

ಅದಱೊಳನೇಕ ಕಲ್ಪಶತಕೋಟಿಗಳೊಳ್ ಸವೆಸಂದ ಚಕ್ರಿವೃಂ ।
ದದಚಲದಾಯುದಾಯತಿಯ ಚಾರದ ಬೀಗದ ಮಾತುಗಳ್ಪೊದ ॥
ಱ್ದಿದವಿರೆ ತತ್ಪ್ರಶಸ್ತಿಗಳೊಳಂತವನೊಯ್ಯನೆ ನೋಡಿನೋಡಿಸೊ ।
ರ್ದುದು ಕೊಳಗೊಂಡ ಗರ್ವರಸಮಾ ಭರತೇಶ್ವರ ಚಕ್ರವರ್ತಿಯಂ ॥

ವಚನ: ಅಂತು ಗಳಿತಗರ್ವನಾಗಿ ಸಿಗ್ಗಾಗಿ ಪೂರ್ವಾವನಿಪಾಳ ಪ್ರಶಸ್ತಿಯೊಳೊಂದೊಂದಂ ದಂಡರತ್ನದಿಂ ಸೀಂಟಿಕಳೆದು ನಿಜಪ್ರಶಸ್ತಿ ಗೆಡೆಮಾಡಿ

ಸ್ವಸ್ತಿ ಸಮಸ್ತನರೇಶ್ವರ ।
ಮಸ್ತಕ ವಿನ್ಯಸ್ತಶಾಸನಂ ಸಕಲಜಗ ॥
ದ್ವಿಸ್ತಾರಿತ ಯಶನನ್ವಯ ।
ವಿಸ್ತಾರಕನಾದಿ ದೇವನಗ್ರತನೂಜಂ ॥ ೧೪೧ ॥

ದೇವಾಂಗನೆಯರ್ ಪಾಡುವ ।
ರಾವನ ಜಸಮಂ ಕುಳಾಚಳಾವಳಿಯೊಳ್ ಶೌ ॥
ರ್ಯಾವಷ್ಟಂಭದಿನಾಳ್ದವ ।
ನಾವಂ ಷಟ್ಖಂಡಮಂಡಿತಕ್ಷಿತಿತಳಮಂ ॥ ೧೪೨ ॥

ಆತಂ ಭರತೇಶ್ವರ ನಿಂ ।
ತೀತೆಱದಿಂ ನೆಗಳ್ದ ತನ್ನ ಕೀರ್ತಿಯ ನೀವಿ ॥
ಖ್ಯಾತ ವೃಷಭಾದ್ರಿಯೊಳ್ ಸುರ ।
ಗೀತಯಶಂ ನಿಱಿಸಿದಂ ನೆಲಂ ನಿಲ್ವಿನೆಗಂ ॥ ೧೪೩ ॥

ವಚನ: ಅಂತಾತ್ಮೀಯ ವಿಜಯ ಪ್ರಶಸ್ತಿಯನಾ ವೃಷಭ ಗಿರಿಯೊಳಾ ವೃಷಭೇಶ್ವರ ನಂದನಂ ಕಾಕಿಣೀರತ್ನದಿಂ ಬರೆಯಿಸಿ ಬಳಿಕ್ಕದರ್ಕೀಶಾನದೊಳಿರ್ದ ಗಂಗಾಕೂಟಕ್ಕಭಿಮುಖನಾಗಿ ತತ್ಸಮೀಪದೊಳ್ ಆತ್ಮೀಯಮಂಗಳ ಜಳಂಗಳಿಂದ ಅಭಿಷೇಕಂಗೆಯ್ದು ಅನೇಕಾಶೀರ್ವಾದ ಪುರಸ್ಸರಂ ಸಿಂಹಾಸನಮಂ ಕೊಟ್ಟ ಗಂಗಾದೇವಿಯಂ ವಿಸರ್ಜಿಸಿ ದಕ್ಷಿಣಾಭಿಮುಖನಾಗಿ ಬಂದು ವಿಜಯಾರ್ಧಾಚಳಕಾಂಡಕ ಪ್ರವಾತ ಗುಹಾಸಮೀಪದೊಳ್ ಬೀಡಂ ಬಿಟ್ಟು ಮಲಂದಿನ ಮಾೞ್ಕೆಯೊಳೆವರೂಥಿನೀಪತಿಯಂ ಬೆಸಸಿದೊಡೆ ಆತನಾ ಗುಹಾದ್ವಾರಮಂ ತೆಱಿದಾದಱ ಬೆಂಕೆಯಾಱುವನ್ನೆಗಂ ಮ್ಲೇಚ್ಛಖಂಡಮುಮಂ ಬಾಯ್ಕೇಳಿಸಲ್ಪೋಗೆ ದಕ್ಷಿಣೋತ್ತರ ಶ್ರೇಣಿಗಳ ವಿದ್ಯಾಧರ ರಾಜಾಧಿರಾಜರ್ ನಮಿವಿನಮಿಗಳಂ ಮುಂದಿಟ್ಟು ಬಂದು

ಭರತೇಶ್ವರಪದ ನಖಮಣಿ ।
ಮರೀಚಿಗಳ್ ತಮ್ಮ ಮಕುಟ ಮಣಿದೀಧಿತಿಯೊಳ್ ॥
ಬೆರಸಿರೆ ತದಾಜ್ಞೆಯಂ ನಿಜ ।
ಕಿರೀಟದಿಂ ತಾಳ್ದಿದಂದದಿಂ ಸೊಗಯಿಸಿದರ್ ॥ ೧೪೪ ॥

ನಮಿವಿನಮಿಗಳಂತಾಕ ।
ಚ್ಛಮಹಾಕಚ್ಛರ್ಕಳಿಂದವೊದವಿದನಣ್ಪಂ ॥
ತಮರ್ದಿರೆ ತವ್ಮೊಡವುಟ್ಟಿದ ।
ಕಮಳಾನನೆಯಂ ಸುಭದ್ರೆಯಂತಂದಿತ್ತರ್ ॥ ೧೪೫ ॥

ವಚನ: ಭರತೇಶ್ವರ ಚಕ್ರವರ್ತಿ ಸಿದ್ಧದಿಗ್ವಿಜಯನಾಗಿ ವಿಜಯ
ಪರ್ವತ ಗಜಮನೇಱಿ ಗಂಗಾತಟಂ ಬಿಡಿದು ಪಯಣಂ ಬಂದು ಕೈಲಾಸಾ
ಚಳ ನಿಕಟದೊಳ್ ಕಟಕಮಂ ನಿಲಿಸಿ ಪರಿಮಿತ ಪರಿಜನಂಬೆರಸು ತದ್ಗಿ
ರೀಂದ್ರಮನೆಯ್ದೆ ವಂದು

ಶರಭಂಗಳ್ಗೆಡೆ ಸಿಂಹದುರ್ವನಗಂಧೇ ಭೋತ್ಕರಕ್ಕಂದುಮಾ ।
ಗರಮಿಾ ಭೂಧರವಿಾ ಮಹೋಗ್ರ ಮೃಗಸಂಘಾತಂಗಳೊಂದೊಂದ ನಿ
ತಿರೆ ಕಂಡೋಡುವುವಲ್ಲ ನಿಂತಿ ವೊಡಗೂಡಿರ್ಪವ್ವವಿಂತೀ ಜಗ ।
ದ್ಗುರು ಬಂದಿರ್ದುದ ಱಿಂದೆ ಶಾಂತರಸಮಂ ಕೈಕೊಂಡುದೀ ಪರ್ವತಂ ।

ವಚನ: ಎಂದು ಕೈಲಾಸಾಚಲಮನೇಱಿ ಧೂಳೀಶಾಲದಿ
ತಗುಳ್ದು ಪೂರ್ವೋಕ್ತವರ್ಣನೋಪೇತಮಪ್ಪ ವೃಷಭನಾಥನಾಸ್ಥಾ
ಮಂಟಪಮಂ ನೋಡುತ್ತುಂ ಬಂದು ಸಕಳ ಸುರಾಸುರೇಂದ್ರ ರುಂದ್ರ
ಸಭೆಯ ನಡುವೆ ಸಿಂಹಾಸನಮಸ್ತಕದೊಳಿರ್ದ ಜಗತ್ರಯ—ತಿಳಕನ ಪಾ
ಪದ್ಮಂಗಳ್ಗೆ ಭರತೇಶ್ವರ ಚಕ್ರವರ್ತಿ ಮಹೀತಳ ನಿಹಿತಮಣಿಕಿರೀಟರ
ಸಂದೋಹಸಾಂದ್ರ ಕುಂಕುಮಪಂಕದಿಂ ವಿಹಿತೋಪಹಾರನಾಗಿ

ಅನೇಕ ಭುಜನೇತ್ರ ಪಜ್ಞ್ರರಸನಾದಿಗಳ್ ದೇವ ನಿ ।
ನ್ನನರ್ಚಿಸುವ ನೋಲ್ಪುಬಣ್ಣಿಸುವ ಪೊತ್ತನೇಕಾಂಗದಿಂ ॥
ದ್ರನಂತೆನಗೆ ಸಾಲವಿನ್ನೆರಡೆಕೈಯ್ಯೆರಲ್ಕಣ್ಗಳೊಂ ।
ದೆ ನಾಲಗೆಯುಮೊಂದೆ ಚಿಂತಿಸುವೆ ನಾದಿಭಟ್ಟಾರಕಾ ॥ ೧೪೭

ಫಣಿಪ್ರಭುಗುಮೆತ್ತಮತ್ತಳಗ ಮತ್ತಿರೂಪಸ್ತವಂ ।
ಗುಣಸ್ತವಮುದಾತ್ತನೃತ್ತಭವದೀಯವಸ್ತುಸ್ತವಂ ॥
ಗುಣಾಗುಣ ವಿವೇಕ ಮೂಕರತಿಮೂರ್ಖರೆಮ್ಮಂದಿಗಗ್ ।
ಪ್ರಸಾದಮೊಳೆ ಪುಣ್ಯಮಂ ಪಡೆವಮಾದಿತೀರ್ಥೇಶ್ವರಾ ॥ ೧೪೮

ವಚನ: ಎಂದನೇಕ ಸ್ತವನಂಗಳಿಂ ಸ್ತುತಿಸಿ

ಸುರಗೀತಂ ಸುರದುಂದುಭಿಧ್ವನಿ ಸುರಸ್ತ್ರೀರಮ್ಯಸಂಗೀತಕಂ ।
ಸುರಪುಷ್ಪೋತ್ಕರ ಸೌರಭಂ ಸುರಜಯಸ್ತೋತ್ರಂ ಸುರಾಶೀಸ್ತವಂ ॥
ಸುರರಾಜೇಂದ್ರ ಮಹಾವಿಭೂತಿಕರೆ ಚಿತ್ತೋತ್ಸಾಹಮಂತಾಳ್ದಿದಂ ।
ಪರಮಾನಂದ ಮಹಾದಿದೇವಸಭೆಯೊಳ್ ಸಂಸಾರಸಾರೋದಯಂ ॥೧೪೯॥

೫ ಚಕ್ರರತ್ನಸ್ಖಲನ

ವಚನ: ಅಂತು ಸಮವಸರಣಮಂಡಳದಿಂ ಪೊಱಮಟ್ಟು ಲೀಲಾಪ್ರಸಾದಿತ ಸಕಳ ದಿಙ್ಮಂಡಳಂ ಕೈಲಾಸಶೈಲ ಕಟಕನಿಕಟವರ್ತಿ ಯಾಗಿದ್ದ ನಿಜವಿಜಯ ಕಟಕಕ್ಕೆ ವಂದು

ಅಱುವತ್ತು ಸಾಸಿರಂಗಳ್ ।
ನೆಱೆದವು ಬರಿಸಂಗಳೆಂದು ದಿಗ್ವಿಜಯದೊಳ ॥
ಲ್ಕಱಿನೊಳಯೋಧ್ಯೆಗೆ ಮೊಗಸಿದ ।
ನಱಿಕೆಯ ಪಱೆಪಲವು ಮಸೆಯೆ ಭರತಮಹೀಶಂ ॥ ೧ ॥

ವಚನ: ಅಂತು ಕೆಲವು ಪಯಣಂಗಳಿಂದಂ ನಿಜಾನ್ವಯರಾಜಧಾ ನಿಯನಯೋಧ್ಯಾಪುರಮನೆಯ್ದಿದಾಗಳ್

ಹತವೈರಿಕ್ಷತ್ರಚಕ್ರಂ ಭಯಚಕಿತಜಗದ್ವೀರಚಕ್ರಂ ವಿನಮ್ರ ।
ಕ್ಷಿತಿಚಕ್ರಂ ದೀಪದೀಪ್ತಿಪ್ರತಿಹತದಿನ ಕೃಚ್ಚಕ್ರತೀವ್ರಾಂಶುಚಕ್ರಂ ॥
ಜಿತದಿಕ್ಚಕ್ರಂ ಪ್ರಭಾಪ್ರಜ್ವಳಿತ ದಶದಿಶಾ ಚಕ್ರಮುಗ್ರಪ್ರತಾಪೋ ।
ರ್ಜಿತತೇಜಶ್ಚಕ್ರಮಿರ್ದತ್ತೊಳ ಪುಗದೆ ಪುರೋಪಾಂತದೊಳ್ ಚಕ್ರಿಚಕ್ರಂ [illegible]

ವಚನ: ಅಂತು ಚಕ್ರರತ್ನಮಯೋಧ್ಯಾಪುರಮಂ ಪುಗ[illegible] ತುಱುಂಬಿ ನಿಂದುದಂ ಕಂಡುಮಂ ರಕ್ಷಿಸುವ ಯಕ್ಷ ಸಹಸ್ರಂಬೆರಸ[illegible] ಗಣಬದ್ಧದೇವರೆಲ್ಲಂ ನೆರೆದು

ಪುರಗೋಪುರದೊಳಗಂ ಚ ।
ಕ್ರರತ್ನಮಿಂತೇಕೆ ಪುಗದೆ ಮಾಣ್ದಿರ್ದುದೊ ಮ ॥
ಚ್ಚರಿಪಥಟನಿನ್ನನಾವನೊ ।
ಭರತೇಶ್ವರ ಚಕ್ರವರ್ತಿಗಿನ್ನಂ ಜಗದೊಳ್ ॥ ೨

ಆವಂಗೆ ಕಾಲಚಕ್ರಮು ।
ಸೋವದೆ ಮಾಡಲ್ಕೆ ಚಕ್ರಮಿದು ಬಗೆದುದೊ ಶಾ ॥
ರ್ಯಾ ವಿಭೂರ್ಜಿತ ದವಾನಳ ।
ನಾವನ ಚತುರಂಗಬಲಮನಿಂ ಸುಟ್ಟಪುದೋ ॥ ೪ ॥

ಆತಂಗೆ ಚಕ್ರಿವೇೞ್ಕುಮೆ ।
ಪೋತಲ್ತೆ ಱಿದಾವಂಗೆಲ್ವಮೆಂದನಿಬರುಮು ॥
ತ್ಪಾತಮರುದಾಭಿಘಾತೋ ।
ದ್ಭೂತಪಯೋನಿಧಿಗಳಂತೆ ಮಸಗಿದರಾಗಳ್ ॥ ೫ ॥

ವಚನ: ಆ ಪ್ರಸ್ತಾವದೊಳ್ ಚಕ್ರೇಶ್ವರಂಗೆ ಚಕ್ರರತ್ನಸ್ಖಲನಮಂ ಪತಾಕಿನೀಚಕ್ರಪ್ರಧಾನ ಪ್ರಭುಗಳಱಿಯೆ ಬಿನ್ನಪಂ ಗೈದೊಡಸ್ಖಲಿತಗತಿಯಪ್ಪ ಚಕ್ರರತ್ನ ಸ್ಖಲನಕ್ಕೆ ನಾಡೆಯುಂ ಚಕ್ರಿಮನಸ್ಖಲನಮಾಗೆ ವಿಸ್ಮಯಂ ಬಟ್ಟು ಪುರೋಹಿತರತ್ನಮಂ ಬರಿಸಿ

ಪದಿನಾಲ್ಕುಂ ರತ್ನಕ್ಕಂ ।
ಮೊದಲೆನಗೀ ಚಕ್ರರತ್ನಮಿದಱಿಂ ಮೇಲಾ ॥
ವುದು ದೈವಮೆನಗಯೋಧ್ಯೆಯ ।
ನಿದು ಪೊಗದೆ ತುಱುಂಬಿನಿಂದ ಕಾರಣಮೇನೋ ॥ ೬ ॥

ಆ ಪೂರ್ವದಕ್ಷಿಣಾಪರ ।
ಕೂಪಾರದ ರಜತಗಿರಿ ಗುಹಾದ್ವಯದೆಡೆಯೊಳ್ ॥
ಪೋಪಂದು ಮಣಮೆತೊಡಂದು ।
ದೀಪುರಗೋಪುರದೊಳೇಕೆ ತೊಡರ್ದುದೊ ಚಕ್ರಂ ॥ ೭ ॥

ಎನಗಮರಾತಿಗಳೊಳಱಿಂ ।
ಬನಿತು ಪರಾಭವ ಮನೀಗಳೀ ಚಕ್ರಂ ಸೂ ॥

ಚನೆಗೈದು ದಿನ್ನನಾವಂ ।
ತನಗಿರಹೆಡೆ ಮಾಡಿದಪ್ಪನಂತಕ ಮುಖಮಂ ॥ ೮ ॥

ವಚನ: ಎಂದು ವೀರ ರಸೋದಾರ ಗಂಭೀರ ವಚನ ರಚನೆಗಳಿನನಿತನೆ ಬೆಸಸಿಮಾಣ್ದ ಚಕ್ರವಲ್ಲಭಂಗೆ ಪುರೋಹಿತನಭಿಮುಖನಾಗಿ

ನಿನ್ನಯ ಮಾಡಿದ ಗೌರವ ।
ದುನ್ನತಿ ನುಡಿಯಿಸುವುದೆನ್ನನದಱಿಂ ಕಿಱಿದಂ ॥
ಬಿನ್ನವಿಸಿದಪೆಂ ಜೈತ್ರಾ ।
ಸ್ತ್ರ ನ್ನಿನಗೀ ಚಕ್ರರತ್ನದಿಂ ಪೆಱತುಂಟೇ ॥ ೯ ॥

ಇದು ಪಗೆವರುಳ್ಳುದಂ ತೋ ।
ಱದಪುದು ನಿನಗರಿನೃಪರ್ಕಳಿಲ್ಲದಿದಿಂತಿರ್ಪು ॥
ದೆ ದುರ್ನಿರೀಕ್ಷ್ಯಮಿನಬಿಂ ।
ಬದಂತೆ ಪಜ್ಜಳಿಸಿ ಬಾಗಿಲೊಳ್ ಪುರವರದಾ ॥ ೧೦ ॥

ನಿನಗರಸ ಬಹಿರ್ಮಂಡಳ ।
ಮನೆ ಸಮಱಲ್ಕಿನಿತು ಬರಿಸಮುಂ ಪೋದುವುಕೇ ॥
ಳನಿಸಂತರ್ಮಂಡಲ ಸಾ ।
ಧನಮುಂಟೆಂದಱಿಸಿದುದು ಮನಿನ್ನಱಿಪುವೆನೇ ॥ ೧೧ ॥

ನಿನ್ನನುಜರನಿಬರುಂ ಮಾ ।
ನೋನ್ನತರಣಮೆಱಗರವರೊಳಗ್ಗದವಟಂ ॥
ತನ್ನಭಿಮಾನದ ಭುಜಬಲ ।
ದುನ್ನತಿಯನೆ ಮೆಱೆವ ಬಾಹುಬಲಿ ಮುನ್ನೆರಗಂ ॥ ೧೨ ॥

ಆದಿಬ್ರಹ್ಮರ ಕೊಟ್ಟೀ ।
ಮೇದಿನಿಗಾನೊಡೆಯನಾತನರಸಿನಿವಿರಿದಿಂ ॥
ದಾದೊಡಮೇನೆನಗೆಂಬ ಮ ।
ದೋದಯದೊಳ್ದೇವ ಬಾಹುಬಲಿ ಬಲ್ದಿರ್ದಂ ॥ ೧೩ ॥

ಭರತೇಶ್ವರ ನಿನ್ನ ಪದಾಂ ।
ಬರುಹಕ್ಕವರೆಱಗಿ ಸುಖಮನನುಭವಿಸುಗೆ ಮೇಣ್ ॥
ಪುರುಪರಮೇಶ್ವರ ಪದಾಂ ।
ಬುರುಹಕ್ಕವರೆಱಗಿ ತಪಮನನುಭವಿಸುಗೆ ಮೇಣ್ ॥ ೧೪ ॥

ಬಗೆಯೊಳಗೆ ಬಳೆದ ಭೀತಿಯೆ ।
ಮಿಗೆ ಭವದಾಸ್ಥಾನ ಭೂಮಿಯಂ ಪುಗುಗೆವನಂ ॥
ಬುಗುಗಲ್ಲದಂದು ಪೆಱತೆಡೆ ।
ಪುಗುವೆಡೆಯಿಲ್ಲವರ್ಗೆಬೆಸಸು ಶಾಸನಹರರಂ ॥ ೧೫ ॥

ಎನೆ ಬಳೆದ ಮುನಿಸಿನೊಳ್ ಕೆ ।
ಚ್ಚನಾದ ಕಣ್ದೆಸೆಗೆ ಕೆಂಪನೊದವಿಸಿದುದು ದಿ ॥
ಗ್ವನಿತೆಯರ್ಗೆ ರಕ್ತಬಲಿಯಂ ।
ಮನಕ್ಕೆವರೆ ಬಳೆದಮುನಿಸೆ ಕಡುವಂತಾಗಳ್ ॥ ೧೬ ॥

ಏನೇನೋ ಮದನುಜರೆನ ।
ಗಾನತರಣಮಾಗದಿರ್ದರಾಮದಮವರ್ಗೇ ॥
ನೇನೇತಱೊಳಾದುದ ನಿನಿ ।
ಸಾನುಂ ಬೇಗದೊಳೆ ಕಳೆದು ತೋಱನೆ ರಣದೊಳ್ ॥ ೧೭ ॥

ಎನಿಬರರಸುಗಳುಮೆಱಗಿದೊ ।
ಡೆನಗೇ ವಂದಪುದೊ ಬಾಹುಬಲಿ ಪೊಱಗೆನೆಪೇ ॥
ಱನಿತುಂ ಪುರಮೇವುದೊ ಪಾ ।
ದನ ಪುಲವೆನ್ನಾಳ್ಕೆಗಿಂತು ಪೊಱಗೆನಿಪಾಗಳ್ ॥ ೧೮

ಎಂದೊಡೆ ಪುರೋಹಿತಂ ನಿನ ।
ತೊಂದೋಲಗೆ ತೀರ್ವುದೆಂದು ಮನೆವಾರ್ತೆಗಿದೇ ॥
ನೆಂದರಸ ಬಳಿಯೆನುಡಿದಪೆ ।
ಯಂದಟ್ಟಲೆ ವೇಳ್ದನವರ್ಗೆ ಶಾಸನಹರರಂ ॥ ೧೯

ವಚನ: ಆಗಳ್ ಭರತೇಶ್ವರಚಕ್ರವರ್ತಿಯಟ್ಟಿದ ದೂತರ್ ಪು
ಪರಮೇಶ್ವರತನೂಜರಲ್ಲಿಗೆ ಪೋಗಿ —

ಎನಗೊರ್ವಂಗುಪಭೋಗ್ಯಮಲ್ತು ವಸುಧಾಸಾಮ್ರಾಜ್ಯಮೋರಂತೆ ನಿ ।
ಮ್ಮ ನಿಬರ್ಗಂ ಪಿರಿಯಣ್ಣನೆಂ ಜನಕನೇನೆಂಬೊಂದು ಕೊಂಡಾಟದಿಂ ॥
ವಿನಯಂ ಸಲ್ವುದುತಾಮುಮಾಮುಮೊಡನಿರ್ಪಂ ಬರ್ಪುದೆಂಬೀ ಶಶಾ ।
ಸನಮಂ ನೆತ್ತಿಯೊಳಾಂತು ಬನ್ನಿ ಮೆಱಗಿಂ ಚಕ್ರೇಶಪದಾಬ್ಜದೊಳ್ ॥ ೨೦

ವಚನ: ಎಂದು ನುಡಿದ ದೂತನ ನುಡಿಯುಮಂ ರಾಜಾದೇಶವ
ಮನವಧಾರಿಸಿಬಂದ ದೂತನಂ ಮನ್ನಿಸಿ ಸಂತೋಷಂಬಡಿಸಿ ಪೋಗಲ್ವೇಳ

ಪಿರಿಯಣ್ಣಂ ಗುರುತಂದೆಯೆಂದೆಱಗುವಂ ಮುನ್ನೆಲ್ಲಮಿಂತೀಗಳಾ ।
ಸರಸೆಂಬೊಂದು ವಿಭೇದಮಾದೊಡೆಱಕಂಚಿಃ ಕಷ್ಟಮಲ್ತೆ ವಸುಂ ॥
ಧರೆಗಯ್ಯಂ ದಯೆಗೆಯ್ಯೆಮುಂ ಪಡೆದುದರ್ಕಿಂತೀತನೋಳ್ ತೊಟ್ಟಕಿಂ
ಕರಭಾವಂ ನಮಗಕ್ಕೆಕೊಟ್ಟು ಮಡುಗೂಱುಣ್ಬಂದದಮಂ ಪೋಲವೇ ॥

ವಚನ: ಎಂದು ತಮ್ಮೊಳನಿಬರುಂ ಪರಿಚ್ಛೇದಿಸಿ —

ಕುಳಿಶಾಸ್ತ್ರೋತ್ತಂಸಿತ ಪದ ।
ನಳಿನಂಗೆ ತನೂಜರಾಗಿ ಪುರುಷಾರ್ಥಮನು ॥
ಜ್ವಳಿಸದೆ ಮಾಣ್ಬಮೆಸಗಿದು ।
ಪಳಾಳ ಭಾರಂಬೋಲೀ ಮಹೀತಳಭಾರಂ ॥ ೨೨ ॥

ವಚನ: ಎಂದು ಪರಿತ್ಯಕ್ತ ನಿಜರಾಜ್ಯ ಪರಿಚ್ಛೇದರಾಗಿ –

ತಳರ್ದಪುವು ರತ್ನಶಿಖರಾ ।
ವಳಿವಿಳಸಿತ ಕನಕಗಿರಿಗಳೆನೆ ತನುರುಚಿಗಳ್ ॥
ಬೆಳಗೆ ಕುಮಾರರ್ ನೂರ್ವರು ।
ಮೊಳಪೊಕ್ಕರ್ ಸಮವಸರಣ ಭೂಮಂಡಲಮಂ ॥ ೨೩ ॥

ಪೊಡೆವಟ್ಟು ದೇವ ನೀಂ ಕುಡೆ ।
ಪಡೆದೆವಿಳಾತಳಮನೊಡನೆ ಪುಟ್ಟಿದ ವೋಳ ।
ಕ್ಕಡಿಗೆಱಗಿಮೆಂದು ಭರತಂ ।
ಜಡಿವಂ ನಿನಗೆಱಗಿ ಪರಮಪೆಱರ್ಗೆಱಗುವೆವೇ ॥ ೨೪ ॥

ಭವದಂಘ್ರಿ ಕಮಳರಜದಿಂ ।
ಪವಿತ್ರಮಾದೆಮ್ಮ ಮಕುಟಮೆಱಗದು ಪೆಱರ್ಗಂ ॥
ಭವಭಯಹರ ಭರತನನೆಮ ।
ಗವಸುವಡೆಱಗಿಸುವ ತಪಮನೀಗಳೆ ದಯೆಗೈ ॥ ೨೫ ॥

ವಚನ: ಎಂದು ಪರಮನಿರ್ವೇಗ ಪರಾಯಣರಾಗಿ —

ಭರಂತಂಗೆಱಗುವರೆಂಬಿದೆ ।
ಪರಿಭವಮೆಮಗಿಂತು ಮಾನಭಂಗಂ ಬರೆ ಬ ।
ರ್ಪರ ಸೇವುದೆಂದು ಪೂಣ್ದರ್ ।
ಪರಮ ತಪೋಭರಮನಸಿಬರುಂ ಪುರತನಯರ್ ॥ ೨೬ ॥

ವಚನ: ಅಂತಾಕುಮಾರರನಿಬರು ಮಾದಿ ತೀರ್ಥಂಕರ ಸಮವಸರಣ ಸರೋವರರಾಜಹಂಸವ್ಯತಿಕರಮಂ ಭರತೇಶ್ವರಂ ಕೇಳ್ದು ವಿಸ್ಮಿತಾಂತಃಕರಣನಾಗಿ ಮನದೊಳೆ ಮೆಚ್ಚಿ —

ಎನಗನುಜರಾಗಿಯುಂ ಚಲ ।
ದೆನಗೆಱಗದೆ ಪೋಗಿ ಭುವನಗುರುಗೆಱಗಿದರಂ ॥
ತನಿಬರುಮವರಿಂದಗ್ಗಳ ।
ಮೆನೆ ನೆಗಲ್ದಾಬಾಹುಬಲಿಯುನೆಂತೆಱಗಿಸುವೆಂ ॥ ೨೬ ॥

ಆದಱಿಂದ ಮಾತನಂ ಸಾ ।
ಮದಿಂದಮುಲಿವಡಿಸಿ ನೋಡುವೆಂ ಸಾಮುದೊಳಂ ॥
ಪದವಡದೊಡೆ ಬೞಿಕಿರ್ದ ।
ಪ್ಪುವಲ್ತೆ ಪದವಡಿಸಲೆನ್ನ ಬಯಕೆಯ ದಂಡಂ ॥ ೨೮ ॥

ಸಂಘದ ಕಡೆಯಿಂದ

❀ ಪಂಚಾಸ್ತಿಕಾಯ

ಎಂಬ ಗ್ರಂಥವು ಪ್ರಕಟಿಸಲಿದೆ

❀ ಅಭಿನವ ವಾಗ್ದೇವಿ ಕಂತಿ

ಎಂಬ ಗ್ರಂಥವು ಪ್ರಕಟಿಸಲಿದೆ

ಜೈ. ಸಾ. ಸಂ.

೬ ರಾಯಭಾರ

ವಚನ : ಮಂತ್ರಿವರ್ಗದೊಡನೆ ನಿರಾಕುಳಿತ ಕಾರ್ಯಪರ್ಯವಸಾನನಾಗಿ ಬಾಹುಬಲಿ ಕುಮಾರಂಗೆ ಲೇಖಮನುನ್ಮಯೂಖರತ್ನಾಭರಣ ಪ್ರಭೂತ ಸಮೇತಮನಟ್ಟುವಂತು ಮಹಾಸಂಧಿವಿಗ್ರಹಿಗೆ ಬೆಸಸಿದೊಡಾತಂ ಪ್ರತ್ಯುತ್ಪನ್ನ ಪ್ರತಿಭನುಂ ವಕ್ರೋಕ್ತೀ ನಿಪುಣನು ಮಾಧೇಯವಚನನುಮನುದ್ಧತವೇಷನುಂ ಪರಿಚಿತಾಶೇಷದೇಶಭಾಷನುಂ ವಯೋವೃದ್ಧನುಂ ಪ್ರಸಿದ್ಧನುಮಪ್ಪ ಮಹತ್ತರನ ಕೈಯೊಳ್ ಸನ್ಮಾನದಾನಪುರಸ್ಸರಮಾಗೆ ಕೊಟ್ಟು ವಿಜಯಕಾರ್ಯಸಿದ್ಧಿಯಕ್ಕೆಂದು ಪೋಗಲ್ವೇಳ್ದು ಮಾತನುಂ ಕತಿಪಯ ಪ್ರಯಾಣಂಗಳಿಂದಂ ಪೌದನ ಪುರಮನೆಯ್ದಿ, ರಾಜಮಂದಿರಮನೆಯ್ದಿ ಆಸ್ಥಾನಮಂಟಪಮಂ ಪೊಕ್ಕು ಲಲಾಟತಟಸಂಘಟ್ಟಿತ ಸಭಾಕುಟ್ಟಿಮನಾಗಿ

ಮರಕತನಗಂದಿವ್ಯಂ ಮರ್ತ್ಯೋತ್ತಮಾಕೃತಿಯೆಂಬಿನಂ ।
ವಿರಚಿಸಿದ ನಿಂತಾದಿಬ್ರಹ್ಮಂ ಹರಿನ್ಮಣಿವರ್ಣನಂ ॥
ನೆರೆದುದಿದು ಮೇಣ್ ಕ್ಷಾತ್ರಂ ತೇಜಂ ಧರಾಧಿಪರೂಪದಿಂ ।
ಧರೆಗೆನುತುಮಾದೂತಂ ಕಣ್ಣುಳ್ಕೆ ನೋಡಿ ಕುಮಾರನಂ ॥ ೧ ॥

ವಚನ : ವಿಸ್ಮಯಂಬಟ್ಟು ಭರತನಾಥ ದೂತನಾತ್ಮಪಾರ್ಶ್ವಚರಕರತಳದಿನುಪಾಯನ ರತ್ನ ಕರಂಡಕಮಂ ಕೊಂಡು ದೇವಭವದೀಯಾಗ್ರಜಂ ರಾಜಾಧಿರಾಜಂ ನಿಮಗಟ್ಟಿದ ಮಹಾಪ್ರಸಾದಂ ಬಿನ್ನಪಮೆಂದು ಮುಂದಿಟ್ಟು ಮಹತ್ತರಂ ಮಹತ್ತರಯೋಗ್ಯಮಹೀ ನಿಹಿತಾಸನದೊಳಿರ್ಪುದುಂ; ಅದಂ ಮಹಾಸಂಧಿವಿಗ್ರಹಿ ಕೊಂಡು ಅಪನೀತಮುದ್ರೆಯಂ ಮಾಡಿ ತದಂತಸ್ಥಿತಂಗಳಪ್ಪ ರತ್ನಾಭರಣಂಗಳಂ ತೋಱಿ ಕೋಶಾಧ್ಯಕ್ಷ ಹಸ್ತನ್ಯಸ್ತಂಗಳ್ಮಾಡಿ ದೇವಲೇಖಮಿದೆಂದು —

ಭೂವಲ್ಲಭಸೋತ್ಕ್ಷೇಪ ।
ಭೂವಿಲಸಿತದತ್ತವಾಚನಾದೇಶಮಿದಂ ॥
ಭಾವಿಸಿಮೆಂದತಿ ಮಧುರೋ ।
ದ್ಭಾವಿತ ಗಂಭೀರನಾದದಿಂ ಬಾಜಿಸಿದಂ ॥ ೨ ॥

ವಚನ: ಸ್ವಸ್ತಿ ಸಮಸ್ತವಿಸ್ವಪಾಧೀಶ್ವರ ಪುರಪರಮೇಶ್ವರ ಚರಣ ಸರಸಿರಜೋರಂಜಿತ ಮಣಿಕಿರೀಟ ಮಕರಿಕಾಚಕ್ರಂ ಚಕ್ರರತ್ನ ಪ್ರಭಾಸಾಧಿತ ನಿಖಿಲದಿಕ್ಚಕ್ರಂ ಭರತೇಶ್ವರಚಕ್ರವರ್ತಿ ನಿಜಪ್ರಿಯಾನುಜಬಾಹುಬಲಿ ಕುಮಾರನಂ ಪರಮಾಶೀರ್ವಾದದಿಂ ಪರಸಿಕನಕ ಪತ್ರಾಂಕಿತ ಕಾರ್ಮುಕ ಲತಾಲಂಬನಂಗಳುಂ ವಿಜಯೋತ್ಸವ ತೋರಣ ಸ್ತಂಭಂಗಳುಂ ವೀರಶ್ರೀ ಭುಜಂಗೀ ಸಮಾಶ್ರಯ ಶ್ರೀಖಂಡ ಕಾಂಡಂಗಳು ಮಪ್ಪದೋರ್ದಂಡಂ ಗಳಿಂದ ಮತಿನಿಬಿಡಾಲಿಂಗನಂ ಗೆಯ್ದು ಕಾರ್ಯಮಂ ಬೆಸಸಿರ್ಕುಂ

ಮತ್ತಪ್ಪುದೆನಲೊಡಂ ಮಾಣ್ ।
ಮತ್ತತ್ತಣ ಕಾರ್ಯಮಱಿಯಲಾದುದು ಪೇೞ್ ಭೂ ॥
ಪೋತ್ತಮನಿರ್ದನೆ ಸುಖದಿನು ।
ದಾತ್ತಯಶಂ ನೆಗಱೆ ನೆಗೞ್ದಯೋಧ್ಯಾಪುರದೊಳ್ ॥ ೩ ॥

ಎಂತಾನುಂ ನೆನೆದಂ ಬಹು ।
ಚೀತಂ ಚಕ್ರೇಶ ನೆಮ್ಮದಿಗ್ವಿಜಯಮುಮಾ ॥
ದಂತೆಡಱದೆಯ್ದೆ ನಡೆದುದೆ ।
ಸಂತಮೆ ದಕ್ಷಿಣಭುಜಕ್ಕೆ ಭೂವಲ್ಲಭನಾ ॥ ೪ ॥

ಅರಸುಗಳೆಲ್ಲಂ ಬಾಯ್ಕೆ ।
ಳ್ದರೆಂದು ಮಾಶಾಂತರಂಗಳಳ್ಕಿದುವೆಂದುಂ ॥
ಧರಣಿತಳಂ ಕೀರ್ತಿಸೆ ಕೇ ।
ಳ್ದರಾಗಿಸುತಿರ್ಪೆ ನಿನ್ನುಮೇಂ ತೊದಳುಂಟೇ ॥ ೫ ॥

ಇಲ್ಲಿಯೊ ಪೇಟಿಂದು ಮಹೀ ।
ವಲ್ಲಭದೂತಂಗೆ ನುಡಿದು ದಶನಾಂಶುಗಳಂ ॥
ಮೆಲ್ಲನೆ ದಶನಚ್ಛದ ಮೃದು ।
ಪಲ್ಲವದಿಂ ಮರಸಿ ಮಾಣೆದೂತಂ ನುಡಿದಂ ॥ ೬ ॥

ಭವದಗ್ರಜ ದಿಗ್ವಿಜಯೋ ।
ತ್ಸವಮಧಿಕಮಹೋತ್ಸವಂ ವಲಂ ನಿನಗಾದಂ ॥
ಶ್ರವಣಸುಖಮೆಂದೆ ದಿಙ್ಮಾ ।
ತ್ರವರ್ಣನಂಗೆಯ್ವೆನುಂತದೇನೆನ್ನಳವೇ ॥ ೭ ॥

ಭರತನ ದಿಗ್ವಿಜಯವನ್ನು ದೂತನು ಬಾಹುಬಲಿಗೆ ವಿವರವಾಗಿ ವರ್ಣಿಸುವನು.

ನೃಸುರಾಸುರ ಖೇಚರರಂ ।
ಬೆಸಕೆಯ್ಸಿದ ನೆಡಱುವಹಿತರಂ ಚಕ್ರಮೆ ಸಾ ॥
ಧಿಸಿದವ್ಪುದು ನವನಿಧಿಗಳ್ ।
ಪೊಸಯಿಸಿದವ್ಪುವು ವಿಭೂತಿಯಂ ಪುರಸುತನಾ ॥ ೮ ॥

ಎನ್ನಣಾಗದವ್ಮ ನಿಲ್ಲದೆ ।
ಬಿನ್ನನೆ ಸಾಮ್ರಾಜ್ಯಮಿನಿತುಮಾದೆ ಅಕಮುಮ ॥
ತ್ಯುನ್ನತಿಯಲ್ತೆನಗಾತಂ ।
ಮುನ್ನೆಱಗದೊಡೆಂದು ಬೆಸಸಿಯಟ್ಟಿದನೆನ್ನಂ ॥ ೯ ॥

ವಚನ: ಎಂಬುದುಂ ಬಾಹುಬಲಿಕುಮಾರಂ ದೂತವಚನಾಕರ್ಣನೋದೀರ್ಣಪ್ರೋಥೋದ್ಗಚ್ಛದ ಚ್ಛೇದ ಜಳಧಾರಾಸಾರ ಭೀಕರಾಮೋಹಿತ ಕಪೋಳತಳಮುಮುದ್ದೀಪನ ಪಿಂಡಪ್ರದೀಪ್ತ ಕಪೋಲೋಚ್ಚಳದ ತುಚ್ಛಮದಜಳಚ್ಛತಾಟೋಪ ಭೀಷಣಾರುಣ ಗಂಡಸ್ಥಳಮುಮಪ್ಪ ಗಂಧಸಿಂಧುರೇಂದ್ರ ಮನನುಕರಿಸಿ ಕೋಪಗರ್ಭಸ್ಮಿತಂ ಬೆರಸು

ಮುನ್ನಂ ಸಾಮಮನೆಮ್ಮಮ ।
[ನಂ] ನೋಡಲ್ ನುಡಿದು ಭೇದಮುಮಂ ದಂಡಮುಮಂ ॥
ನಿನ್ನಱಿವನಿತಂ ನುಡಿದೆಯಿ ।
ದೇನ್ನುಡಿಗಳೊ ಸಮಱಿಕೊಂಡಗುಡಿಗಳ್ ನಿನ್ನಾ ॥ ೧೦ ॥

ನೀನ್ನಿನ್ನ ನೃಪನದಿಗ್ವಿಜ ।
ಯೋನ್ನತಿಯಂ ಪೊಗಲ್ದು ಮೂರ್ಛೆವೋಪೈಪೊಗಲ್ದುದುಂ ॥
ನೀನ್ನಿನ್ನ ಮನದೊಳಿಂತಿದು ।
ಬನ್ನಮನೆತ್ತುವವೊಲಾಯ್ತು ನಿನ್ನವನಿಪನಾ ॥ ೧೧ ॥

ಮುಂದಿಟ್ಟಚಕ್ರಮಂ ತಿರಿ ।
ತಂದುದುಮಂ ಪೊಲಿದಿರ್ದುಬೆಯ್ತಂಗೊಳ್ವಿಂ ॥
ದಂದದೆ ಕೊಂಡುದು ಮನದೇ ।
ನೆಂದುನ್ನತಿಮಾಡಿಪೊಗಲ್ವಿಯೊಳಗಱಿಯದುದೇ ॥ ೧೨ ॥

ಪಸಿದುಣ್ಣಸಟ್ಟುಬಿರ್ದಿ ।
ರ್ದು ಸಮುದ್ರದ ಪಡಿಯೊಳುದಕ ಮಂತ್ರದಬಲದಿಂ ॥
ನುಸುಳ್ದೊಡೆ ಜಳನಿಧಿಯಂಕರು ।
ಣಿಸಿಕೊಟ್ಟರ್ ಧನಮುಂಜಿಕೊಟ್ಟರೆದಿವಿಜರ್ ॥ ೧೩ ॥

ಧರೆಯೊಳ್ ಕುಲಾಲಚಕ್ರಂ ।
ತಿರಿವಂತಿರೆ ತಿರಿಯೆ ಚಕ್ರಮುದ [ಱ] ಯೆ ಬಳಿಯಿಂ ॥
ತಿರಿತಿರಿದು ಮಾಡಿದಂ ಕುಲ ।
ಧರಕುಲದೊಳ್ ಪಿಱಿದು ಮಹಿಮೆಯುಂ ನಿಮ್ಮರಸಂ ॥ ೧೪ ॥

ಬೇಡವಡೆ ಮುಸುಱಿಕೊಂಡೇ ।
ಸಾಡೆ ಸುರುಳ್ದಗಿದು ಕೊಡೆಯುಚರ್ಮದ ಮಱಿಯೊಳ್ ॥
ಗೂಡುಗೊಳುತಿರ್ದ ಶೌರ್ಯ ।
ಕ್ರೀಡೆಯ ದಿಗ್ವಿಜಯಮೆಸೆದುದೆಮ್ಮಗ್ರಜನಾ ॥ ೧೫ ॥

ಬರೆಯಿಸಿದಂ ಪೂರ್ವಮಹೀ ।
ಶ್ವರನಾಮಮನೆಯ್ದೆ ಕಳೆದುವೃಷಭಾಚಲದೊಳ್ ॥
ಭರತಂ ನಿಜನಾಮಮನೆನೆ ।
ಪರಿಹಸಿತಂ ಬುಧಜನಕ್ಕದಲ್ಲದೆಪೆರತೇಂ ॥ ೧೬ ॥

ಧನಮೆಂಬುದು ವಿಭುಗೆ ಯಶೋ ।
ಧನಮನಿಂತಱಿಪಿ ಕಱಿಪಿಕಿಡೆಮಾಡಿದರ್ ॥
ತನ ಪಡೆದ ಧನಮದೇತಱಿ ।
ಧನಮದಱಿಂ ನಿಧನಮೆಯ್ದಿದರ್ ಪಲರರಸರ್ ॥ ೧೭ ॥

ಪಿರಿಯಣ್ಣಂಗೆಱಗುವುದೇಂ ।
ಪರಿಭವವೇಕೇಱಿನೆತ್ತಿಯೊಳ್ಬಾಳಂ ನಿ ॥
ರ್ನೆರವಱಿ ಚಲದಿನೆಱ ಸ ।
ಲಿರೆ ಭರತಂಗೆಱಗುವೆಱಕಮಂಜಮೆಯಲ್ತೇ ॥ ೧೮ ॥

ಧರೆಯುಂ ಕುಡುವಂದೆನಗಂ ।
ಗುರುತನಗಂ ರಾಜನಾಮಮಂ ಕೊಟ್ಟಡೆ ನೋ ॥
ಡಿರೆ ತನಗೀಗಳ್ ರಾಜಾ ।
ಧಿರಾಜನೆಂದಿಟ್ಟುಕೊಂಡನಡಕಿಲ್ಪೆಸರಂ ॥ ೧೯ ॥

ಚಕ್ರಂ ಪುಟ್ಟಿದೊಡೀಗಳ್ ।
ಚಕ್ರೇಶ್ವರನೆಂಬ ಪೆಸರು ಮಾಯ್ತುಕ್ಕವು ತಾಂ ॥
ಚಕ್ರೇಶನಾದೊಡಂ ತ ।
ನ್ನಾಕ್ರಮಣಮನೆನ್ನೊಳೇಕೆ ಕೆಮ್ಮನೆತೋರ್ಪಂ ॥ ೨೦ ॥

ಪುರುತನಯರ್ ಭುಜಬಲಿಯುಂ ।
ಭರತನುಮೆನೆದೊರೆಗೆ ವಂದೊಡಾರಳವುಮನೀ ॥
ಧರಯುಱಿಯಲೊಡಂ ತೂಗಲ್ ।
ಧರೆಗೆ ತುಲಾದಂಡಮಲ್ತೆ ಮದ್ಭುಜದಂಡಂ ॥ ೨೧ ॥

ನೆಗಱ್ದೀಷಟ್ಖಂಡ ಭೂಮಂಡಲ ಮನನಿತುಮಂಗೆಲ್ದ ಖಂಡಪ್ರತಾಪಂ ।
ನೆಗಱ್ದಿಂತಾಱುಂ ಬಲಂಗಳ್ವಿರಸೊದವಿದ ಸಂಗ್ರಾಮಸಂರಂಭದಿಂದಂ ॥
ಬಗೆಯಂ ಪ್ರಾಣಪ್ರಿಯಸ್ತ್ರೀಜನ ತನಯಧನವ್ರಾತದೊಳ್ಮಾಡದಾರ್ತ ।
ಜಿಗೆ ಬಂದೊಡಲ್ಕೆ ಪೇಱ್ಸಂಗರ ನಿಕಷದೊಳೆಮ್ಮಂದಮಂ ನೀನೆಕಾಣ್ಬೈ ॥

ವಚನ: ಚಕ್ರವರ್ತಿಯ ದೂತಂ ಸಾಕೇತಪುರಮನೆಯ್ದಿ ವಾದಾ
ಸ್ಥಾನಮಂಟಪದೊಳ್ ಇರ್ದ ಚಕ್ರವರ್ತಿಯಂ ಕಂಡು ಪೊಡಮಟ್ಟು

ನಿನಗೀಷಟ್ಖಂಡ ಭೂಮಂಡಲಮೆಱಗಿದುದೇಂ ಸಾಲದೇ ಬೇಡದುದ್ವೃ ।
ತ್ತನೊಳಿನ್ನೇನೆಂದು ದೇವರ್ಕಡೆಗಣಿಸಿರೆ ಸೌಂದರ್ಯಮಂ ಕಾದಪೆಂಪೀ ॥
ವನಧಿದ್ವೀಪಾಂತರಾಳಕ್ಷಿತಿಯೊಳೆಸಗುವಾಕ್ಷೇಪಮಂ ಮಾಣನೀಂಕ್ರೋ ।
ಧನನಾಗಲ್ ನಿನ್ನತಮ್ಮಂ ನಿನಗೆಱಗನಿದಂ ನಂಬುರಾಜಾಧಿರಾಜಾ ॥ ೨೨ ॥

ತುದಿಯೆಯ್ದಿತ್ತೆಮ್ಮ ವಿಶ್ವಕ್ಷಿತಿತಳಜಯಮಿಂತೆಮ್ಮದಾಯಾದನುಂ ಕೋ ।
ಪದಿನೆನ್ನೊಳ್ ಕಾದವೆಂದುಬ್ಬರಿಸಿದ ಸಮರಾಟೋಪದಿಂ ನಿಂದೊಡಂ ಮಾ
ಣ್ಬುದು ಸೊಱಲ್ತೆಮ್ಮಸಾಪತ್ನನ ಭುಜಬಲಮಂ ನೋಱ್ಪಮಂದಾಗಳಾಸ್ಥಾ ।
ನದಿನೆರ್ದಂ ಚಕ್ರಿರಾಜನ್ಯಕ ಮಕುಟಮಣಿಪ್ರೋಜ್ಜ್ವಳದ್ವ್ಯೋಮಚಕ್ರಂ ॥

ಗಿರಿರಾಜೋದಗ್ರ ಸಿಂಧೂರಿತ ಕರಟಘಟಾಟೋಪಮಂ ಕುಂಕುಮಾಂಭ ।
ಶ್ಛುರಿತಾಂಗೋತ್ತುಂಗವಲ್ಗತ್ತುರಗಬಲಮದೋದ್ದಾಮಮಂ ಚಿತ್ರನೇತ್ರಾಂ
ಬರನಾನಾಹೇತಿಹಸ್ತೋದ್ಭಟಭಟಪೃತನಾಜಾಳಮಂ ಚಿತ್ತದೊಳ್ ವೀ ।
ರರಸಂ ಕೈಗಣ್ಮಿಪೊಣ್ಮುತ್ತಿರೆ ನಿಜಬಲಮಂ ನೋಡಿದಂ ಸಾರ್ವಭೌಮಂ ॥

ವಚನ: ಅಂತು ನೋಡಿ ಪೌದನ ಪುರಾಭಿಮುಖನಾಗಿ ನಡೆವಲ್ಲಿ

ರಜಮುಂದಿಗ್ಧೂಮಮುಂ ಸಂದಣಿಸಿ ಪರುಷವಾತಾಹತಿಪ್ರೋಚ್ಚಳತ್ಸಾ ।
ಮಜಸೇನಾಕಂಭ ಸಿಂದೂರಮು ಮೊದವಿದ ದಿಗ್ದಾಹಮುಂ ಕೂಡೆ ಭೂರಿ॥
ಧ್ವಜಿನೀಸಂಕ್ಷೋಭಮಾಕಂಪಮುಮಶುಭಮಹೀಕಂಪಮುಂತನ್ನೊಳೊಂದಾ
ಗೆ ಜಗಕ್ಕೇನಿಲ್ಲಿಪೇ ವಿಾದಪುದೆನೆದೆಸೆಬರ್ಪಂತೆ ಬಂದೊಡ್ಡಿನಿಂದಂ ॥

ವಚನ: ಅನ್ನೆಗಮಿತ್ತ ಬಾಹುಬಲಿ ಕುಮಾರನ ವಿಜಯ ಸೈನ್ಯದೊಳ್

ಮಸೆಯಿಪ ಶಸ್ತ್ರಕೋಟಿ ಸಮಕಟ್ಟುವ ಸನ್ನಣಮಟ್ಟಿಯಿಂದವು ।
ರ್ಚಿಸುವ ತುರಂಗದಂತಿ ರಥಸಂಕುಳಮೇಱುಪದರ್ಭಶಯ್ಯೆ ಪೂ ॥
ಜಿಸುವ ಜಿನೇಂದ್ರಬಿಂಬಮೆಸೆವುಗ್ರ ರಣಾನಕರೌದ್ರಘೋಷಮೆ ।
ರ್ಪಿಸಕಮಸುಂಟುಮಾಡಿದುದು ಪಂದೆಗಮುಂದಿನ ವೀರಗೋಷ್ಠಿಯೊಳ್ ॥

ವಚನ: ಅಂತುಭಯಬಲದ ಸೆಱಿಗೋಲ್ಗಳೊಂದೊಂದಂ ಮುಟ್ಟು ವಿನ ಮತ್ತ ರಾಜಾಧಿರಾಜನು ಮಿತ್ತಯುವರಾಜನುಂ ನಿಂದಾಗಳ್

---

೭ ಧರ್ಮಯುದ್ಧ – ಬಾಹುಬಲಿಯ ವೈರಾಗ್ಯ

ವಚನ: ಆಗಳುಭಯ ಬಲಮಂತ್ರಿ ಮುಖ್ಯರಿವರ್ಬರರಸುಗಳ ಪ್ಪೊಡೆ ಚರಮದೇಹಧಾರಿಗಳಿವರ ಯುದ್ಧಮೆಂಬುದತಿ ಕ್ರೂರಗ್ರಹ ಯುದ್ಧದಂತೆ ಸಕಳ ಪ್ರಜಾವಿನಾಶಕರಮಲ್ಲದೆಪೆಱತಲ್ತು, ಚತುರಂಗಬಲ ಯುದ್ಧದೊಳಲ್ಲದೆ ಗೆಲ್ಲ ಸೋಲಮೆಂಬುದಿಲ್ಲ, ಸಮಸ್ತಜನ ಸಂಹರಣಕಾರ ಣಮಪ್ಪ ರಣದೊಳೇವಂದಪುದೆಂದು ಧರ್ಮಯುದ್ಧಮನೆ ತಮ್ಮರ್ ಸಮ ಕಟ್ಟೆ ಮುನ್ನಂ ಭರತೇಶ್ವರ ಚಕ್ರವರ್ತಿಯಲ್ಲಿಗೆ ವಂದು

ಜಯಮಂ ಕೈಕೊಳ್ವುದು ದೃ ।
ಷ್ಟಿಯುದ್ಧ ಜಳಯುದ್ಧ ಮಲ್ಲಯುದ್ಧದೊಳ್ ಜನ ॥
ಕ್ಷಯಕರಣದೊಳೇಂ ಪಾಪಮು ।
ಮಯಶಮುಮಪ್ಪನಿತೆ ದೇವಕಡೆಗಣೆಪುದಿದಂ ॥ ೧ ॥

ಉಱುವುದು ಭುಜಬಲದಳವಂ ।
ಘಱಿಲನೆ ಕೊಳ್ ಹೀನ ಬಲನಧಿಕಬಲಂ ತೊ ॥
ತ್ತುಱುದುಳಿದನೆಂಬ ಲೋಕದ ।
ಪಱುಪೊರ್ದದೆ ಮಾಣೆಧರ್ಮಯುದ್ಧದೊಳೆಸಗಿಂ ॥ ೨ ॥

ವಚನ: ಎನೆ ಭರತೇಶ್ವರಚಕ್ರವರ್ತಿ ಯಿಂತಾದೊಡೆಮಗೆ ಬಾಹುಬಲಿಯ ಸಮರ ಸಂಘಟದೋಹಳಮಿದು ದರಿದ್ರಂಗೆ ಹೀನಗರ್ಭ ದೋಹಳದಂತಾದುದೆಂದು ರಾಜ್ಯಲಕ್ಷ್ಮೀ ಲೀಲಾಲಂಬನಮೆನಿಸಿದ ಬಿಸು ಗೆಯ ಮತ್ತಾಲಂಬನ ಮನವಳಂಬಿಸಿ ಸಿಂಧುರಸ್ಕಂಧ ಪೀಠದೊಳ್ ಸುಖಾ ಸೀನನಾಗಿರ್ದಾಗಳ್, ಬಾಹುಬಲಿಕುಮಾರನಲ್ಲಿಗೆ ಮಂತ್ರಿಗಳ್ ಬಂದು ಪ್ರೊರ್ವೋಕ್ತಕ್ರಮದೊಳ್ ಧರ್ಮಯುದ್ಧವ್ಯತಿಕರಮಂ ಬಿನ್ನಪಂಗೆಯ್ವಾಗಳ್

ಎನ್ನ ಚತುರಂಗಬಲವುನಿ ।
ದನ್ನರಯಾಂಪನ್ನರೆಂಬ ನಿಮ್ಮರಸನ ಗ ॥
ರ್ವೋನ್ನತಿಲಿದೆನಿಕುವುನಿನಿಸಾ ।
ನುನ್ನೋಡಿಂ ಧರ್ಮಯುದ್ಧಮಕ್ಕೆಮಬಲಿಯುಂ ॥ ೩ ॥

ವಚನ: ಈಷದ್ವಿಷಣ್ಣವದನನಾಗಿರ್ದ ಬಾಹುಬಲಿ ಕುಮಾರನಂ ಮಂತ್ರಿಪುಂಗವರ್ ನೋಡಿ

ಬಿಸುಡುವುದಸದಾಗ್ರಹಮಂ ।
ಪ್ರಸನ್ನಗಂಭೀರ ಚಿತ್ತದಿಂದಿದನವಧಾ ॥
ರಿಸುವುದು ಯುವರಾಜಮನಂ ।
ಬಸದೊರ್ಮೆಗೆ ಸಲಿಪುದೆಮ್ಮಮುದುಗಣ್ತನಮಂ ॥ ೪ ॥

ವಚನ: ಎಂದು ನುಡಿದೊಡಂಬಡಿಸಿ ಧರ್ಮಯುದ್ಧ ಮನುಭಯಬಲಂಗಳೊಳವಾನಂದ ಭೇರಿಯಂ ಪೊಯ್ಸಿಘೋಷಿಸಲ್ವೊಲ್ದು ಬಾಹುಬಲಿಕುಮಾರನ ಭರತೇಶ್ವರನ ಪಕ್ಷದ ರಾಜಲೋಕ ಮನೆರಡುಂ ದೆಸೆಯಾಳಂ ಮಧ್ಯಸ್ಥರಾಗಿ ಮಿಡುಕದೆ ನೋಡುತ್ತಿರ್ಪಂತೆ ನಿಯಮಿಸಿದಾಗಳಿರ್ವರುಂ ನೀಲ ನಿಷಧಗಿರಿಗಳೊಂದೊಂದಱೊಳ್ ಬಂದು ಪೊಣರ್ದು ನಿಲ್ವಂತೆ ನಿಂದೊರ್ವರೊರ್ವ ರೆಮೆಯಿಕ್ಕದೆ ನೋಡುವಲ್ಲಿ

ಲಲಿತಮುಖ ಸರಸಿಜಂ ನಿ ।
ಶ್ಚಳ ಪಕ್ಷ್ಮಂ ಸ್ತಿಮಿತ ತಾರಕಂ ಭುಜಬಲಿಕ ॥
ಣ್ಣೊಳಿತವೆ ಪೀರ್ವವೊಲೇ ನಿ ।
ಶ್ಚಳತನು ನಡೆನೋಡೆ ಭರತರಾಜಂ ಸೋಲ್ತಂ ॥ ೫ ॥

ವಚನ: ಅಂತು ಬಾಹುಬಲಿ ತೇಜಃಪುಂಜಮೆ ಕಣ್ಣೊಳುಳ್ಕುವಂತೆ ಸೈರಿಸದೆ ಮೆಯ್ಯಿಕ್ಕಿ ದೃಷ್ಟಿಯುದ್ಧದೊಳ್ ಸೆಲೆ ಮತ್ತೆಮಿರ್ವರುಂ ಬಂದು

ಕರಿಯೂಥಪತಿಗಳೆರಡುಂ ।
ಸರಸೀಜಳವಂ ವಿಳಾಸದಿಂ ಪುಗುವವೊಲಾ ॥
ದರದಿಂದೆ ಪೊಕ್ಕು ತುಳುಕಿದ ।
ರರವಿಂದ ರಜಃಪಿಶಂಗಿತಾಭ್ಯೋದಕಮಂ ॥ ೬ ॥

ಭರತನ ಮುಖದೊಳ್ ಪರ್ವಿದ ।
ಖರಕೋಪಾನಳನನೆಯ್ದೆ ನಂದಿಸುವವೊಲಾ ॥
ಮರಕತವರ್ಣಂ ಕರಿಕರ ।
ಪರಿಘದಿನೊಡನೊಡನೆ ತುಳುಕಿದಂ ತಿಳಿನೀರಂ ॥ ೭ ॥

ವಚನ: ಭರತೇಶ್ವರಂ ಪಂಚಶತ ಶರಾಸನೋತ್ಸೇಧನಪ್ಪುದಱಿಂ ಪಂಚವಿಂಶತ್ಯುತ್ತರ ಪಂಚಶತಶರಾಸನೋತ್ಸೇಧನಪ್ಪ ಬಾಹುಬಲಿ ಕುಮಾರನಮೇಗೆ

ಭರದಿಂದಂ ತುಳುಕಿದ ನೀ ।
ರುರದೊಳ್ ಹಾರಾಂಶು ರುಚಿಯ ನಿರ್ಕುಱಿಗೊಳಿದು ॥
ರ್ಧರಜಳಯುದ್ಧವುಮೂದವೆ ।
ಪರಿಭವವಂ ಚಕ್ರವರ್ತಿಗಿತ್ತತ್ತಾಗಳ್ ॥ ೮ ॥

ವಚನ: ಅಂತು ಬಾಹುಬಲಿಯ ಸುರಕರಿಕರಾನುಕಾರಿಯಪ್ಪ ಬಾಹುಗಳಿಂದಂ ತ್ನಳಿದಸೀರ್ಗೆ ವೊಗವನೊಡ್ಡಿ ಮೊಗಂ ಸೊಲ್ವುದುಂ. ಕುಮಾರಂಗೆ ಘೋಷಿಸುವ ಜಯಘೋಷಣೆಯಂ ಕೇಳಲಾಱದೆ ಮಣಿಮಯ ಕಿರೀಟೋದಗ್ರವಿಸ್ಫುರಿತ ಸಂಚೂಳಿಕಾಕನಕಾ ಚಳಮನೆ ಪೋಲ್ತು ಮಲ್ಲಯುದ್ಧದೊಳ್ ಬಂದು ಪೊಣರ್ದು

ಮರಕತಮಣಿಶೈಲಮನನು ।
ಕರಿಸುವ ಭುಜಬಲಿಯೊಳಿರದೆ ಪೊಣರ್ವುದುಮಾಗಳ್ ॥
ಸುರವಿದ್ಯಾಧರನರಬಲ ।
ಮೆರಡುಂ ದೆಸೆಯೊಳ್ ತೆರಳ್ದು ನೋಡಿತ್ತಿತ್ತಂ ॥ ೯ ॥

ಕರಣಂಗಳ ಗಾಯಂಗಳ ।
ಪರಿಣತಿಯಂ ಮೆಱೆವು ಪೊಣರ್ದರ್ ಸಂದೊಂದೆಡೆಯೊಳ್ ॥
ಭರತನನವಯವದೊಳ್ ಮಣಿ ।
ಕಿರೀಟರುಚಿಬೆಳಗೆ ದೆಸೆಗೆ ಬೀಸಿದನಾಗಳ್ ॥ ೧೦ ॥

ಕನಕಾಚಳಮಂ ಪೊತ್ತುದು ।
ಘನಮರಕತಶೈಲಮೆನಿಸಿ ಭುಜಬಲಿಸಕಳಾ ॥
ವನಿತಳವಲ್ಲಭನಂ ಭೋಂ ।
ಕೆನೆತ್ತಿ ಪೊತ್ತಿರ್ದನಿಕ್ಕಲೊಲ್ಲದೆ ನೆಲದೊಳ್ ॥ ೧೧ ॥

ಭರತಾವನೀಶ್ವರಂ ಗುರು ।
ಪಿರಿಯಣ್ಣಂ ಚಕ್ರವರ್ತಿಮಹಿಮಾಕರನೀ ॥
ದೊರೆಯನು ಮಳವಱಿಯೆ ವಸುಂ ।
ಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ ॥ ೧೨ ॥

ಎಂದೊಯ್ಯನಿೞಪೆ ನೆಲದೊಳ್ ।
ದುಂದುಭಿರವದೊಡನೆ ವಿಜಯಘೋಷಣೆನೆಗಲ್ದು ॥
ತ್ತಂದು ಭುಜಬಲಿಯ ಬಲದೊಳ್ ।
ಕುಂದುಕರಂ ಪಿಱಿದುಮಾಯ್ತು ಭರತನ ಬಲದೊಳ್ ॥ ೧೩ ॥

ಚರಮತನು ಸಾರ್ವಭೌಮಂ ।
ಪುರುಪರಮೇಶ್ವರ ತನೂಜನಂತತಿಭಂಗಂ ॥
ದೊರೆಕೊಂಡುದಿಂದು ಭರತೇ ।
ಶ್ವರಂಗೆ ಹುಂಡಾವಸರ್ಪಿಣೀ ವಿಳಸನದಿಂ ॥ ೧೪ ॥

ನೆರೆದೆರಡುಂ ಬಲದರಸುಗ ।
ಳಿರೆ ಪರಿಭವಮಂತು ತನಗೆ ಬರೆಮುಳಿಸಿನದ ॥
ಳ್ಕುರಿಗಳನುಗುಲುತ್ತುಂ ಚ ।
ಕ್ರರತ್ನಮಂ ಬಗೆದು ಬೆಸಸಿದಂ ಭರತೇಶಂ ॥ ೧೫ ।

ವಚನ: ಆಗಳಾ ಪುರುಪರಮೇಶ್ವರ ತನೂಭವರ ಯುದ್ಧಾಡಂ
ರೋಪಸರ್ಗದೊಳಮಾಕುಳ ವ್ಯಾಕುಳರಾಗಿ ತತ್ಪ್ರಶಮನ ಪ್ರತೀಕಾರಮಾ
ನಾಕಲೋಕ ಸೌಂದರಿಯರೊಡನೆ

ಅನಿಮೇಷರ್ ನೂತನ ಪ್ರಸ್ತುತ ಸುರಭಿ ಸುಧಾಕ್ಷೀರಧಾರಾಭಿಷೇಕಾ
ರ್ಚನೆಯಂ ಸದ್ಯಸ್ತನಾಖಂಡಳ ವನಸುಮನೋಮಾಲಿಕಾಲಂಬಲೀಲಾ
ರ್ಚನೆಯಂ ಪ್ರತ್ಯಗ್ರಚಿಂತಾಮಣಿಮಯರಚನಾ ಶ್ಚರ್ಯನಿಶ್ಶೇಷಭೂಷಾ
ರ್ಚನೆಯಂ ಸರ್ವಜ್ಞಬಿಂಬಾವಳಿಗೆ ಪರಸಿದರ್ ಮಸ್ತ ಕನ್ಯಸ್ತಹಸ್ತರ್

ವಚನ: ಆ ಪ್ರಸ್ತಾವದೊಳ್

ಬೆಸಸಿದೊಡದು ಮಾರ್ಕೊಳ್ಳದೆ ।
ಬೆಸನಂ ಬಲವಂದು ಬಾಹುಬಲಿಯನಣಂ ಭೇ ॥
ದಿಸಲಾಱದುವಜ್ರನಿರ್ದುದು ।
ಮಸುಳ್ದಿಸಕಂಗೆಟ್ಟು ಬಲದಮುಯ್ಪಿನ ಕೆಲದೊಳ್ ॥ ೧೬

ಧರೆಯಂ ಪರ್ಬಿರ್ದುದೀಬಾಹುಬಲಿನೃಪಯಶೋದುಂದುಭಿಧ್ವಾನಮೆಂಬ
ತಿರೆದೇವಾನೀಕಿನೀದುಂದುಭಿರವಮು ಮುರೀವೃಂದಮಾಂಗಲ್ಯಗೇಯ ॥
ಸ್ವರದೊಳ್ ಕೈಗೂಡಿಪೊಣ್ಮುತ್ತಿರೆ ಮುದಿತಸುರಾನಂದ ಭಾಷ್ಪೋದಬಿಂ
ತ್ಸರಮೆಂಬಂತಾಗೆ ತಂಪತ್ತುರಲಮುಗಿಗಳಂ ಪುಷ್ಪಮೇಘಪ್ರತಾನಂ ॥

ತನಗಲ್ಲದುದಂ ಮಾಡಿದ ।
ನಿನಸಂ ಚಕ್ರೇಶನೆಂಬ ಕುಲವೃದ್ಧರ ಭೂ ॥

ವನಿತಾಧೀಶರ ಮುಡಿಗ ।
ಳ್ಗೆನಾಣ್ಚಿದಂ ಭರತರಾಜನವನತ ಮಕುಟಂ ॥ ೧೯ ॥

ಬಾಹುಬಲಿ ತನ್ನದಕ್ಷಿಣ ।
ಬಾಹುವ ಕೆಲದಲ್ಲಿ ನಿಂದ ಚಕ್ರಮನಾಗಳ್ ॥
ಸಾಹಸರಸಿಕಂ ಕಂಡೀ ।
ಸಾಹಸಮಂ ನೆಗೞ್ದಿನೆನ್ನೆಳಂ ಭರತೇಶಂ ॥ ೨೦ ॥

ಕಳೆದಿಡುವುದೆ ಕಷ್ಟಂ ಭೂ ।
ತಳರಾಜ್ಯವಿಮೋಹ ಮಚಿರರುಚಿ ಸಂಚಳಮಿಂ ॥
ತಳವು ಗಿಡಿಸಿದುದು ಮನುಕುಲ ।
ತಿಳಕನುಮಂ ಕಳಮಹೀಶ ರುೞಿದವರಳವೇ ॥ ೨೧ ॥

ಪಾತಕಿಯೊಳ್ ಲಕ್ಷ್ಮಿಯೊಳತಿ ।
ಕಾತರ ಕಾಪುರುಷ ಗಣನೆಯೊಳ್ ನೆರೆಯಲ್ಕಿಂ ॥
ಈತನೆ ಬಗೆಗಾಂಪುರತನ ।
ಜಾತರ ಪಗೆದುದನೆ ಬಗೆವೆನಳಿಪಂ ಬಗೆಯುಂ ॥ ೨೨ ॥

ಎಂದಿಂತು ಬಗೆದು ಭರತನ ।
ನೆಂದಂ ಚಕ್ರೇಶ ಸಿಗ್ಗನುೞಿಮುಳಿಸಿಂ ನೀ ॥
ನೆಂದಿಂಗಂ ಬಿಸುಡೀಶ ।
ನ್ಮಂದಿರೊಳಂತಿಂತು ಕಟ್ಟುವಪೂರ್ವದು ಪೆಂಪೇ ॥ ೨೩ ॥

ನಿನ್ನೀ ಬೆಸಸಿದ ಚಕ್ರಮು ।
ಪೆನ್ನೀ ದೇಹಾದ್ರಿಯುಮಂ ಗೆಲಲ್ ನೆಱೆಯದು ನೀಂ ॥

ಬಿನ್ನನಿದೇಕಿರ್ಪೆಯದೆಂ ।
ತಿನ್ನಗೆಲಲ್ ವಜ್ರಗಿರಿಯನಾರ್ಕುಮೆ ವಜ್ರಂ ॥ ೨೪ ॥

ನೆಲಸುಗೆ ನಿನ್ನ ವಕ್ಷದೊಳಿ ನಿಶ್ಚಳವಿಶಾಭಟಖಡ್ಗ ಮಂಡಲೋ ।
ತ್ಪಲವನ ವಿಭ್ರಮಭ್ರ ಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ ॥
(ವಲಯ–ಮನಯ್ಯ–ನಿತ್ತುದು–ಮನಾಂ) ನಿನಗಿತ್ತೆ ನಿದೇವುಪಣ್ಣ ನೀ ।
ನೊಲಿದ ಲತಾಂಗಿಗಂ ಧರೆಗೆ ಮಾಟಿಸಿದಂದು ನೆಗಲ್ತೆಮಾಸದೇ ॥ ೨೫ ॥

ಅವಧರಿಸಿದೆ ನಿನ್ನೊಳ್ ಪಿರಿ ।
ದವಿನಯಮಂ ನೆಗಲ್ದ ದೋಷಮಂ ತಪದೊಳ್ ನೀ ॥
ಗುವೆ ನಸದಾಗ್ರಹಮಂ ಬಿಸು ।
ಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ ॥ ೨೬ ॥

ವಚನ: ಎಂದು ಬಾಹುಬಲಿಕುಮಾರಂ ತಪಶ್ಚರಣ ನಿಶ್ಚಳ ನಿಶ್ಚಯಮನನಾದಾಗಳ್

ಮನದೊಳ್ ಮುಂ ಪುದಿದಿರ್ದ ಕೋಪಮನಿತುಂತೂಳ್ದಾಗಳೆತ್ತೆತ್ತಗೆ ।
ಯ್ದೆನಿದಂ (ತಮ್ಮನೊಳೆಂಬುದೊಂದು–ಪಶಮಂ) ಕೈಗಣ್ಮೆನೀನೊರ್ಬನೈ ॥
ಮನುವಂಶಕ್ಕೆ ಲಲಾಮನಪ್ಪನುಜನೈ ಬೇಡಮ್ಮ ನೀನುಂ ತಪೋ ।
ವನಮಂ ಸಾರ್ವುದುಮಾನದಾರ್ಗೆಮೆಱೆವೆಂ ಮತ್ರಾಜ್ಯಸಾಮ್ರಾಜ್ಯಮಂ ॥

ವಚನ: ಎಂದು

ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ ।
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ದಾತ್ಮಬಾ ॥
ಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ ।
ಶಜ ರಾಜ್ಯಾಭಿಷವೋತ್ಸವಂ ನೆಗಲ್ದುದೆಂಬಾ ಶಂಕೆಯಂ ಮಾಡಿದಂ ॥

ವಚನ: ಅಂತು ಭರತೇಶ್ವರನಂ ಬಾಹುಬಲಿಕುಮಾರನೆಂತಾನು ಮೊಡಂ ಬಡಿಸಿ ಮಹಾಬಲಿಯೆಂಬ ನಿಜತನೂಜನನಾತ್ಮೀಯ ಪದವಿಯೊಳ್ ನಿಱಿಸಿ

ಕ್ಷಿತಿತಳದೊಳ್ ನೆಗಟ್ದಿರ್ದ |
ಪ್ರತಿಮಲ್ಲನನಿಕ್ಕಿ ಮುಯ್ವನಣಮಾನದೆ ದ ||
ರ್ಪಿತ ದುರಿತಮಲ್ಲನು ಮನುಡಿ |
ವತಕ್ಕಿನಿಂ ಸಭೆಗೆ ನಡೆದ ನಿಂದ್ರಾರ್ಚಿತನಾ || ೨೯ ||

ವಚನ: ಅಂತು ಭಗವದಾಸ್ಥಾನಾರ ವಿಂದಿನಿಯಂ ರಾಜಹಂಸನಂತಳಂಕರಿಸುತ್ತುಂ ಬಂದು ಭಗವತ್ಪಾದ ಪೀಠೋಪಕಂಠದೊಳ್ ಸರ್ವಾಂಗೋಪನತನಾಗಿ ನಿಂದು.

ಮೊದಲೊಳ್ ದೇವರ ದಯೆಗೆ |
ಯ್ದಿದತ್ತಿ ಯುವರಾಜಪದವಿಯೆನಗೀಗಳು ಮ ||
ಭ್ಯುದಯಕರ ಪ್ರವ್ರಜ್ಯದ |
ಪವವಿಯು ಯುವರಾಜಪದವಿಯುಂ ದಯೆಗೆಯ್ಸಂ || ೩೦ ||

ಗುರುಪದಪದ್ಮಾಂತಿಕದೊಳ್ |
ಪರಮೇಶ್ವರದೀಕ್ಷೆಯುಂ ಮನಂಬಿಡೆ ಕೊಂಡೀ ||
ಧರೆಯುಂ ಪೊಗಱಿಸಿದನಿದೇಂ |
ಪುರುಪರಮೇಶ್ವರ ಸುತರ್ ಪರಿಚ್ಛೇದಿಗಳೋ || ೩೧ ||

ವಚನ: ಅಂತು ಜೈನದೀಕ್ಷೆಯುಂ ಕೈಕೊಂಡು ಗುರುವಿನನುಮತದಿಂ ದ್ವಾದಶಾಂಗ ಚತುರ್ದಶ ಪೂರ್ವಂಗಳಂ ಕಲ್ತು ತದನುಮತದೊಳ್ ಬೞಿಯಮೇಕವಿಹಾರಿಯಾಗಿ ಸಂವತ್ಸರಾವಧಿವರಂ ಪ್ರತಿಮಾಯೋಗದೊಳ್ ನಿಲೆ

ಅಡಿವಿಡಿದಿಟ್ಟ ಪುತ್ತುಗಳನೆತ್ತಿಗಳಿಂ ನಿಮಿರ್ದಿರ್ದ ಬಳ್ಳಿಗ ।
ಳ್ವಿಡಿದು ವಿಷೋರಗ ಪ್ರತತಿನೋಲಿರ್ಪ್ಪೊಡಗುರ್ವಿಸೆ ಸುಯ್ಯುಸುಯ್ಗಳಿಂ ॥
ಕಿಡಿಪೊಱಪೊಣ್ಮೆ ಬಾಹುಬಲಿಯೋಗಿಯ ಘೋರತಪೋ ಮಹಾಗ್ನಿಯುಂ ।
ಸುಡೆ ಸುಲಿದುಣ್ಮುತಿರ್ಪ ಕಿಡಿಗಳ್ಗೆಣೆಯಾದುದು ತತ್ಪ್ರದೇಶದೊಳ್ ॥

ವಿಜಯಶರಾಸನಗುಣಘಾ ।
ತಜಾತಕಾಳಿಕೆಯನೆತ್ತ ಮಗ್ಗಳಿಸಿದುದಾ ॥
ಭುಜಬಲಿಯ ಭುಜದ್ವಯದೊಳ್ ।
ಭುಜಂಗ ನಿಶ್ವಾಸ ಧೂಮವೇಣೀ ನಿಕರಂ ॥ ೩೩ ॥

ಬಳೆದ ಜಡೆ ನಿಮಿರ್ದ ಬಳ್ಳಿಗ ।
ಳೊಳಿಪೆಣೆದು ವಿಷೋರಗಾನಳಾರ್ಚಿಗಳಿಂದಂ ॥
ಮಿಳಿರ್ದುವು ಮುನಿಪಧ್ಯಾನಾ ।
ನಳನಿರ್ಯದ್ಧೂಮವೇಣಿಕಾನಿಕರದವೊಲ್ ॥ ೩೪ ॥

ಪರಮ ಮುನಿತನುವನಡರ್ವುದು ।
ಸುರದ್ರುಮಂಗೆತ್ತು ಯುವತಿರೂಪದಿನೆಂದಾ ॥
ದರದಿಂ ಬಿಡಿಸಿದರನಘನ ।
ಸಿರದಡರ್ವಲತಾಪ್ರತಾನನುಂ ಖೇಚರಿಯರ್ ॥ ೩೫ ॥

ವಚನ: ಅಂತು-ಗ್ರೋಗ್ರತಪದೊಳಮಾ ಬಾಹುಬಲಿಮುನೀಂದ್ರಂಗೆ ಕೇವಲ ಜ್ಞಾನಾವಾಪ್ತಿಯಾಗದುದರ್ಕೆ ಭರತೇಶ್ವರಂ ವಿಸ್ಮಯ ಮುತ್ತು ಪೋಗಿ ವೃಷಭನಾಥನಂ ಬೆಸಗೊಳೆ ತಪದೊಳ್ ನಿಂದುಂ ನಿನ್ನ ನೆಲದೊಳ್ ನಿಂದೆವೆಂಬ ಮಾನಕಷಾಯಮವರ್ಗಿನ್ನುಂ ಪತ್ತು-ವಿಟ್ಟಾದ ಲ್ತಿದಱಿಂ ಕೇವಲ ಜ್ಞಾನೋತ್ಪತ್ತಿಯಾಗದಿರ್ದುದು. ನೀಂ ಪೋಗಿ

ಕಾಲ್ಗೆಱಗಲೊಡಂ ಕೇವಲಜ್ಞಾನಮಕ್ಕುಮೆಂದು ಬೆಸಸಿದೊಡೆ ಲಬ್ಧೋಪದೇಶನಾಗಿ ವಿವಿಧಾರ್ಚನಾ ಸಮಗ್ರಪರಿಜನ ಪರಿವೃತಂ ರಾಜರಾಜಂ ಮುನಿರಾಜ ಚರಣಾಂಭೋಜದೊಳ್ ಬಂದೆಱಗಿ ವಿವಿಧಾರ್ಚನೆಗಳಿಂದ ಮರ್ಚಿಸಿ

ನಿನ್ನ ಮಡುಗೂಲ್ಬಿನಲಂ ಮಾ ।
ನೋನ್ನತ ನೀನೀಯೆ ಬಂದುದೆನಗಿದನೆನತಿಂ ॥
ದೇ ನ್ನಿನಗೆ ಬಗೆಯಲಪ್ಪುದೆ ।
ನಿನ್ನನೆ ನೀಂ ಬಗೆಯ ಬಗೆಯದಿರ್ ಪೆಱಪೆಱತಂ ॥ ೩೬ ॥

ಎನಲೊಡಮಂತಃಕರಣ ದೊ ।
ಳಿನಿಸಾನುಂ ನಿಂದುದೊಂದು ಮಾನಕಷಾಯಂ ॥
ಮುನಿಪತಿಗೆ ಪೋಗೆ ಪುಟ್ಟಿದು ।
ದನಂತವಸ್ತುಪ್ರಕಾಶಿ ಕೇವಳಬೋಧಂ ॥ ೩೭ ॥

ಆಗಳ್ ದೊರೆಕೊಂಡಿರೆ ದೇ ।
ವಾಗಮಮೇಕಾತಪತ್ರ ಮೆಸೆದಿರೆಕರಮಿಂ ॥
ಬಾಗಿರೆ ಚಾಮರ ಯುಗ್ಮಮ ।
ದಾಗಳೆ ನಿಲೆ ದಿವ್ಯವಿಷ್ಟರಂ ಮಣಿಖಚಿತಂ ॥ ೩೮ ॥

ಜಯನಿನದಂ ಸುರದುಂದುಭಿ ।
ಜಯ ನಿನದಂ ಪುಷ್ಪವರ್ಷಮೊರ್ಮೆಯೆಸಕಲೋ ॥
ರ್ವಿಯನೆಯ್ದೆ ಪರ್ವುತಿರೆ ಚಿ ।
ತ್ತೈಯ ಸಿರಿಯುಂತೆಱಗಿ ಪೋದುದಮರಸಮಾಜಂ ॥ ೩೯ ॥

ವಚನ: ಅಂತು ಬಾಹುಬಲಿ ಕೇವಳಿಯುಂ ನಾನಾದೇಶವಿಹಾರದೊಳ್ ವಿಶ್ವ ಜನನುಂ ನಿಜವಚೋಽಮೃತದಿಂ ಭವ್ಯಜನ ಸಾರ್ಥಮಂ ತಣಿಪಲೆಂದು ಬಂದು ಕೈಲಾಸ ಶೈಲದೊಳಾದಿ ದೇವರ ಸನ್ನಿಧಿಯೊಳಿರ್ದಂ ಇಂತು ಭರತೇಶ್ವರನುಮಾಮುನೀಶ್ವರನಂ ಪೂಜಿಸಿ

ಪೆಸರ್ಗಂ ತೇಜಕ್ಕವೊಂದೋಜೆಗ ಮಹಿತಮಹೀಪಾಳಕರ್ಬೆಚ್ಚಿಬಾಯ್ಕೀ ।
ಳಿಸಿ ಹೈಮಕ್ಷ್ಮಾಚಳೇಂದ್ರಂಬರೆಗ ಮಖಿಳಷಟ್ಖಂಡ ಭೂಭಾಗಮಂಷ ॥
ಷ್ಟಿಸಹಸ್ರಾಬ್ದಂಗಳಿಂ ದಿಗ್ವಿಜಯದೊಳೊಗೆದಾನಂದ ಭೇರೀರವಂಘೂ ।
ರ್ಣಿಸೆ ಸಾಕೇತಕ್ಕೆ ವಂದಂ ಸುಕವಿಜನಮನೋಮಾನಸೋತ್ತಂಸಹಂಸಂ ॥

---

೮ ಮನುಷ್ಯಜಾತಿ ತಾನೊಂದೆವಲಂ

ಶ್ರೀದಯಿತಂ ಮನುಕುಲ ಗಗ ।
ನಾದಿತ್ಯಂ ಹಿಮವನೆಯ್ದೆ ಷಟ್ಖಂಡಮುಮಂ ॥
ಸಾಧಿಸಿ ಜಿತದಿ ಙ್ಮಂಡಲ ।
ನಾದ ಮಹಾತ್ಮಂ ಸರಸ್ವತೀ ಮಣಿಹಾರಂ ॥ ೧ ॥

ವಚನ: ತದನಂತರಮೆ ಮಾಗಧಾಮರತನು ಪ್ರಭಾಸಾಮರ ವಿಜಯಾರ್ಧಕುಮಾರ ಕೃತಮಾಲಾ ನಾಟ್ಯಮಾಲಾ ಹಿಮವತ್ಕುಮಾರ ದಿವಿಜರಿಂದಂ ಗಂಗಾ ಸಿಂಧುದೇವೀ ಪ್ರಮುಖದೇವೀ ನಿವಹದಿಂ ಲವಣ ಜಲಧಿ ಗಂಗಾ ಸಿಂಧು ನದ್ಯಾದಿ ತೀರ್ಥ ಜಲಪರಿ ಪೂರಿತ ವಿವಿಧೌಷಧಿ ರತ್ನಗರ್ಭಮಂಗಳ ಭೃಂಗಾರು ಜಳಂಗಳೊಳಭಿಷಿಕ್ತನಾದಾಗಳ್

ಗಣಬದ್ಧಾಮರ ಖೇಚರ ।
ಗಣಭೂಚರ ನಿಕರಮಾಗಧಾದ್ಯಮರಶಿರೋ ॥
ಮಣಿರುಚಿ ಪುದಿಯೆಯುಮಿನಿಸುಂ ।
ಮಣಿಯದೆ ಬೆಳಗಿದುವು ಭರತನೃಪನಖರುಚಿಗಳ್ ॥ ೨ ॥

ವಚನ: ಅಂತು ಚಕ್ರಾಭಿಷೇಕೋತ್ಸವಾನಂತರಂ

ಮನುಕುಳತಿಳಕಂ ವೃಷಭಾ ।
ಗ್ರನಂದನಂ ರಾಜರಾಜನಧಿರಾಜಂ ಚ ॥
ಕ್ರನಿಧೀಶನಾದಿಭೂಭುಜ ।
ನೆನೆ ನೆಗಲ್ದ ಭರತ ಚಕ್ರವಿಶ್ವಂಭರೆಯೊಳ್ ॥ ೩ ॥

ವಚನ: ಅಂತು ಷಟ್ಖಂಡಭರತ ಮಂಡಳಮನುಂಡಿಗೆ ಸಾಧ್ಯಂ ಮಾಡಿ

ಹಿಮದಿಂದಂ ಲವಣಾಂಬುರಾಶಿವರೆಗಂ ಷಟ್ಖಂಡಭೂಮಂಡಳಂ ।
ನಿಮಿರ್ದಾಜ್ಞಾಪ್ರಸರಕ್ಕಗುರ್ವು ಗೊಳಿಯುಂ ವಿದ್ಯಾಧರರ್ ಮಾಗಧಾ ।
ದ್ಯಮರರ್ ತನ್ನನೆ ನಿತ್ಯಮೋಲಗಿಸಿಯುಂ ಚಕ್ರೇಶ್ವರಂ ಕೀರ್ತಿವಿ ।
ಭ್ರಮದಿಂ ಪಜ್ಜ್ವಳಿಪನ್ನ ಮುಜ್ಜ್ವಳಿಸಿದಂ ವ್ಯೋಮಾವನಿಭಾಗಮಂ ॥ ೪ ॥

ಜಿನಪೂಜೋತ್ಸವಮಂ ಮಹಾಮಹವುಮಂತಾಂ ಮಾಡಿಸಲ್ವನ್ನೆಗಂ ।
ಧನಮಂ ತಕ್ಕವರ್ಗೀಯವೇಳ್ಪುದದನಂತೀಗೆಯ್ದುಮೊಲ್ಲರ್ ತಪೋ ॥
ಧನ-ರಾರಾಧ್ಯಗೃಹಸ್ಥರಾದರೊಳಮಿನ್ನಾರ್ ತಕ್ಕರಾರ್ಪ್ಪೆವೆನೊ ।
ಯ್ಯನುಪಾಯಾಂತರದಿಂದಮೊಂದೊಸಗೆಯಂತದ್ವ್ಯಾಜದಿಂ ಮಾಡಿದಂ ॥

ಹರಿತಾಂಕುರ ಫಳಪುಷ್ಪೋ ।
ತ್ಕರಂಗಳಂ ಪೊಸತೆಮೊಳೆತ ಧಾನ್ಯಂಗಳನಾ ॥
ಧರಣೀಶಂಕೆದಱಿಸಿದಂ ।
ನಿರಂತರಂ ರಾಜಗೇಹದೊಳಗಂ ಪೊಱಗಂ ॥ ೬ ॥

ಕೆನಱಿಸಿ ಬಱಿಯಂ ಬರವೇ ।
ಳ್ಪುದುಮಲ್ಲಿ ಕೆಲರ್ ವಿವೇಕರಹಿತರ್ ಬಂದರ್ ॥
ಮೊದಲೊಳೆ ಪೊಕ್ಕರ್ ಬ್ರತಮಿ ।
ಲ್ಲದವರ್ ತುಳಿಯುತ್ತುಮಂಕುರಂಗಳನಾಗಳ್ ॥ ೭ ॥

ಸಾವದ್ಯ ಭೀರುಗಳ್ ಕೆಲ ।
ರಾವಿವಿಧ ಫಲ ಪ್ರಸೂನ ಪಲ್ಲವತತಿಯಿಂ ॥
ಶೀವಿದ ರಾಜಾಂಗಣಮನಿ ।
ಳಾವಂದ್ಯರ್ ಮೆಟ್ಟಲೊಲ್ಲದಲ್ಲಿಯೆ ನಿಂದರ್ ॥ ೮ ॥

ನಿಲಲೊಡಮನಿಬರುಮಂ ಭೂ ।
ತಲಪತಿ ಬಱಿಯಟ್ಟಿ ಬರಿಸೆ ಪೆಱತೊಂದೆಡೆಯೊಳ್ ॥
ಮಲರಹಿತರ್ ಬಂದುಧರಾ ।
ಲಲನಾಧೀಶಂಗೆ ವಿನತಮಸ್ತಕರಾದರ್ ॥ ೯ ॥

ವಚನ: ಆಗಳ್ ಭರತೇಶ್ವರ ಚಕ್ರವರ್ತಿ ನೀಮಿನಿಬರುಮಿವಂ ಬಂದಮಾರ್ಗದೊಳ್ ಬಾರದೆ ಪೆಱತೊಂದು ಮಾರ್ಗದೊಳೇಕೆ ಬಂದಿರೆಂದು ಬೆಸಗೊಳೆ

ಫಳಕುಸುಮ ಪ್ರವಾಳ ಹರಿತಾಂಕುರ ರಾಜಿಯೊಳಲ್ಲಿ ಜೀವ ಸಂ ।
ಕುಳಮುಳವಲ್ಲದುಂಟದಱಿನಾಗದು ಪರ್ವದಿನಂಗಳೊಳ್ಬ್ರತಂ ॥
ಗಳನೊಡಗೂಡಿ ನಿಂದೆಮಗೆ ಮೆಟ್ಟಲಿಳೇಶ್ವರ ಕೇಳ್ದಿವಾವಿದಂ ।
ತಿಳಿಯಗಣಾಧಿಪರ್ ಬೆಸೆಸೆ ರುಂದ್ರಜಿನೇಂದ್ರ ಸಭಾಂತರಾಳದೊಳ್॥ ೧೦ ॥

ವಚನ: ....ನಾಭಿನಂದನ ನಂದನನವರ ದೃಢವ್ರತಕ್ಕೆ ಮೆಚ್ಚಿ ದಾನ ಸನ್ಮಾನ ಯೋಗ್ಯರಪ್ಪರೆಂದು ಪದ್ಮನಿಧಿಯೆಂಬ ನಿಧಿಯಂತರಿಸಿ ತಪನೀಯ ಸೂತ್ರದೊಳೇಕಾದ್ಯೇಕೋತ್ತರದ ಶಾಂತಂಬರಮುವರವರನೆಲೆಗಳೊಳ್ ಬ್ರಹ್ಮಸೂತ್ರಾಭಿದಾನ ಯಜ್ಞೋಪವೀತದಿಂ ಪವಿತ್ರಗಾತ್ರರ್ ಮಾಡಿ.

ಆಱುಂವೃತ್ತಿ[3] ಗಳನಿವಂ ।
ಮಾಱಿದರೆಲ್ಲರ್ ದ್ವಿಜನ್ಮರೀವೃತ್ತಿಗಳಿಂ ॥
ಬೇಱೂದರ್ ದ್ವಿಜರುಂತೇಂ ।
ಬೇಱುಂಟೆ ಮನುಷ್ಯಜಾತಿ ತಾನೊಂದೆವಲಂ ॥ ೧೧ ॥

---

3 1) ಸಕಲಶಾಸ್ತ್ರಗಳನ್ನೋದುವುದು 2) ಓದಿಸುವುದು.
3) ನೆನೆವುದು. 4) ಬರೆವುದು. 5) ಪಂಚವ್ರತಗಳನ್ನು ಧರಿಸುವುದು 6) ಅನಶನ ವೃತ್ಯಾದಿ ತಪೋನುಷ್ಠಾನ.
ಅವೇ ಪಂಪಕವಿ ಸೂಚಿಸಿರುವ ಆರು ವೃತ್ತಿಗಳು.

ವ್ರತಸಂಸ್ಕಾರದಿನಾದರ್ ।
ವಿತತ ಗುಣರ್ ಬ್ರಾಹ್ಮಣರ್ ಕ್ರಿಯಾ ಸಂತತಿ ಸಂ ॥
ಯುತ ರುಚಿತಸತ್ಕ್ರಿಯಾವಿರ ।
ಹಿತನಾತಂ ನಾಮಃಧಾರಕಂ ದ್ವಿಜನಲ್ಲಂ ॥ ೧೨

ಎಂದಿಂತು ನಾಭಿನಂದನ ।
ನಂದನನಾನಂದದಿಂದ-ಮುಂದವರಂ ತ ॥
ನ್ನೊಂದಂದ ದಿಂದೆ ನಡೆಯಿಸಿ ।
ದಂ ದಾನಂ ಗುಡುವದೊಂದಲಂಪಿನ ಪೆಂಪಿಂ ॥ ೧೩

೯ ನಿರ್ವಾಣ ಕಲ್ಯಾಣ

ಶ್ರೀಮದ್ಧರ್ಮ ನೃಪತಿಯುಂ ನೀಂ ।
ಆ ಮುಕ್ತಾಂಗನಾ ಸಕ್ತಾ ಕೃಪಾ ಎಂಬ ಪೊಲೆಯೆಂ ॥
ಜಿನೋತ್ಸವೆಗೆಂದು ಧರ್ಮ ।
ಶ್ರೀಮಾನರ್ ಪ್ರಜೆಗಳುಂ ಸಮಸ್ತಾವನಿಯೊಳ್ ॥ ೧ ॥

ವಚನ: ಮತ್ತಿತ್ತ ವೃಷಭನಾಥನುಂ ಪದಿನಾಲ್ಕುದಿವಸದಾಯು ಂಟಿನೆ ಕೈಲಾಸಪರ್ವತದ ಸಿದ್ಧಕೂಟದೊಳ್ ಪೌಷ್ಯಮಾಸದ ರ್ಣಿಮಾ ದಿವಸದಂದು ಯೋಗನಿರ್ವ್ಯಾಪಾರನಾದಿಂದಂ ಯೋಗನಿರೋಧ ಪ್ರಾರಂಭಮುಮಾಗಿರ್ದಂ ಅನ್ನೆಗಮಿತ್ತಲ್ ಭರತಾದಿಗಳನಿಬರುಂ ಸ್ವಪ್ನ ಕಂಡ ಕನಸುಗಳಂ ಪ್ರಭಾತ ಸಮಯದೊಳ್ ಪುರೋಹಿತಂಗ ಮೊಡೆ ಸ್ವಪ್ನ ಕಂಡ

ಕನಸುಗಳವು ಪೇಳಪೇಳತೆ ।
ನನಂತಗುಣಾಬ್ಧಿಯುಮಾದಿದೇವಂ ಪಲಬರ್ ॥
ಮುನಿಪತಿಗಳ್ ವೆರಸಿದರ್ದಸು ।
ನನಶ್ವರಾಸ್ಪದ ಮನೆಂಬುದಂ ಸಾಧಿಸುಗುಂ ॥ ೨ ॥

ವಚನ: ಎಂಬುದುಮಾ ಪ್ರಸ್ತಾವದೊಳ್ ಆದಿಭಟ್ಟಾರಕ ನ್ಯತಿ ತಿಪೂನಾನಂದನೆಂಬಂ ಧರ್ಮಕಾರ್ಯ ನಿಮಿತ್ತಂ ಬಂದಱಿಪಿದೊಡೆ ಕ್ಷರಿಚಕ್ರವರ್ತಿಯುಂ ಪರಿವಾರ ಸಮೇತಂ ಬಂದು ಭಟ್ಟಾರ ಮಹಾಮಹಿಮರು ಬಲವಂದು ಕ್ಷತ್ರಭರ್ತ್ಸ್ನಪನದಿಂ ಮಹಾ ರೆಂಬ ಮಹಾಪೂಜೆಯಂ ಮಹಾವಿಭೂತಿಯಿಂ ಪದಿನಾಲ್ಕು ದಿವಸಂ ನಿರಂತರಂ ಮಾಡಿ

ಗುಣಮೆಂಟುಬಂದುತನ್ನೊಳ್‌ನೆಣೆದಿರೆಸುಖಸೋದ್ಭೂತಮಂಲೋಕಚೂಡಾ
ಮಣಿಯುಂ ಶಶ್ವತ್ತ್ರಿಲೋಕೀ ಪ್ರಣುತನುಮತಿವಿಖ್ಯಾತನುಂ ಭವ್ಯಚಿಂತಾ ||
ಮಣಿಯುಂ ತಾನಾಗಿ ತನ್ನೊಳ್ ನೆಱೆಯೆ ಪಡೆದು ತನ್ನಂದಮಂತಾನೆತನ್ನ
ತ್ತಣಿನಾದಿಬ್ರಹ್ಮನೇಕಕ್ಷಣದೊಳೆ ಪರಬ್ರಹ್ಮ ಸದ್ಮಕ್ಕೆ ಸಂದಂ || ೩ ||

ದೊರೆಕೊಂಡ ಮಾಘಮಾಸಂ |
ಬರೆ ಕೃಷ್ಣಚತುರ್ದಶೀದಿನಂ ಸಮನಿಸೆ ತ ||
ತ್ಪುರುದೇವಂ ಮುಕ್ತಿವಧೂ |
ವರತೆಯನಭಿಜಿನ್ಮುಹೂರ್ತದೊಳ್ ಕೈಕೊಂಡಂ || ೪ |

ವಚನ: ಇತ್ತ ಚತುರ್ವಿಧ ದೇವನಿಕಾಯಮುಂ ಪುರುದೇವ ಪರಿನಿರ್ವಾಣ ಮಹಾಕಲ್ಯಾಣಪೂಜಾನಿರ್ವರ್ತನಾಭಿಲಾಷಿಯಾಗಿನಿರ್ವಾಣ ಭೂಮಿಯನನೇಕ ಸುರಭಿ ಸುರತರು ಕುಸುಮ ಸುಗಂಧಾಕ್ಷತಂಗಳಿಂದ ಮರ್ಚಿಸಿ ಭಗವಚ್ಛರೀರ ಹೋಮಕುಂಡ ದಕ್ಷಿಣಭಾಗದೊಳ್ ಗಣಧರ ಶರೀರಮನಿಱಿಸಿ ತದಪರದಿಗ್ಭಾಗದೊಳನಗಾರ ಕೇವಳಿ ಹುತಾಶನ ಕುಂಡಮಂ ಸ್ಥಾಪನಂಗೆಯ್ದು ಆಗಾರ್ಹಪತ್ಯವಪ್ಪೆಣಾಗ್ನ್ಯ ಹವನೀಯಾಭಿದಾನ ಕುಂಡಂಗಳಂ ಕೊಂಡು ಲಲಾಟಕಂಠ ಭುಜಶಿಖರಗಳ ಹೃದಯ ಪ್ರದೇಶದೊಳಂ

ಭೂತಿಗಳೊಳ್ ಕಲ್ಯಾಣ ವಿ |
ಭೂತಿಗಳೆಮಗಕ್ಕೆ ಬೇಗಮಿನ್ನೆಂದು ಮನೋ ||
ಜಾತಮಹೋತ್ಸಾಹರ್ ತ |
ದ್ಭೂತಿಯನಿಟ್ಟರ್ ತ್ರಿಪುಂಡಮಂದಿವಿಜೇಂದ್ರರ್ || ೫ ||

ವಚನ: ಆಗಳಾತ್ಮೀಯ ಗುರುವಿಯೋಗ ಶೋಕಾನಳ ದಹ್ಯಮಾನ ಮಾನಸನಾಗಿರ್ದ ಭರತಪತಿಯ ಶೋಕಾವೇಗಮಂ ವೃಷಭಸೇನ ಗಣಾಗ್ರಣಿಗಳಿಂತೆಂದಱಿಸಿದರ್

ನಿನಗೆ ವೃಷಭೇಶ್ವರಂ ಲೋ ।
ಚನಗೋಚರ ನಿನ್ನೆವರೆಗವಿರಾಗಳ್ ನಿಂದಂ ॥
ಮನುಕುಲ ಲಲಾಮ ನೆಟ್ಟನೆ ।
ಮನದೊಳ್ ಕಡುಸಾರೆಯಲ್ತೆ ಮುನ್ನಿಂದೀಗಳ್ ॥ ೬ ॥

ಭರತೇಶ್ವರ ನಾಮುಪ್ಪೊಡೆ ।
ಚರಮಾಂಗರು ಮಖಿಳ ಮಲವಿಲೇಪನದಿಂದಂ ॥
ಪುರುಪರಮೇಶ್ವರನೆಯ್ದಿದ ।
ಪರಮಪದಂ ನಮಗಮದುವೆ ನೆಲೆ ಪೆಱತುಂಟೇ ॥ ೭ ॥

ವಚನ: ಆದಲ್ಲದೆಯುಂ ಜೀವಂಗಳ್ ಶುಭಾಶುಭ ಕರ್ಮ ಶೈಲೂಷ ಪ್ರೇರಿತಂಗಳಾಗಿ ಚತುರ್ಗತಿ ಸಂಸಾರಂಗಳೊಳನೇಕ ರಸಪರಿಣತಂಗಳ್ ನಾನಾ ಶರೀರೋಪಾದಾನ ಪರಿತ್ಯಜನ ಪುರಸ್ಸರಂ ಪರಿಭ್ರಮಿಸುಗುಂ ಅದು ನಮ್ಮನಿಬರ ಭವಾಳಿಯಿಂದೆ ನಮಗನುಭೂತ ಪೂರ್ವಮದೆಂತೆಂದೊಡೆ ಭವದೀಯಜನಕಂ ಪುರುಪರಮೇಶ್ವರಂ

ಭೋಗಕಾಂಕ್ಷೆಯೊಳ್ ಜಯವರ್ಮಂ ಬೞಿಕೀಮಹಾಬಳಂ ಲಲಿತಾಂಗಂ ವಜ್ರಜಂಘಂ ।
ಭೋಗಭೂಮಿಜಂ ಶ್ರೀಧರದೇವಂ ಸುವಿಧಿನರಾಧಿಪನಚ್ಯುತೇಂದ್ರಂ ॥
ಸಾಗರಾಂತಂ ನೆಲನನಿತುಮಂ ಚಕ್ರದಿಂ ಬೆಸಕೆಯ್ಸಿದ ವಜ್ರನಾಭಿ ।
ಯಾಗಿ ಸರ್ವಾರ್ಥಸಿದ್ಧಿಯೊಳ್ಪುಟ್ಟಿ ಬಂದಿಲ್ಲಿ ತಾನಾದಿದೇವನಾದಂ ॥

ವಚನ: ಅತಿಗೃದ್ಧ ಮಹೀಶನುಂ ನಾರಕನುಂ ವ್ಯಾಘ್ರನುಂ ಈಶಾನಕಲ್ಪಜನುಂಮತಿವರ ಮಂತ್ರಿಯುಂಅಧೋಗ್ರೈವೇಯಕದಿವಿಜನುಂ ಸುಬಾಹುಮಹೀಪತಿಯುಂ ಸರ್ವಾರ್ಥ ಸಿದ್ಧೀಶ್ವರನುಂ ಅಹಮಿಂದ್ರನುಮಾಗಿ ಬಂದು ನೀನೀಗಳ್ ಭರತೇಶ್ವರ ಚಕ್ರವರ್ತಿಯಾದೈ ನಾರಕನುಂ

ಪ್ರೀತಿವರ್ಧನ ಸೇನಾನಾಯಕನುಂ ಭೋಗ ಭೂಮಿಜನುಂ ಕನಕಪ್ರಭಾಮರನುಂ ಲಲಿತಾಂಗದೇವಸಾಮಾನಿಕನುಂ ಪ್ರಭಂಕರನುಂ ವಜ್ರಜಂಘಸೇನಾಧೀಶ್ವರನ ಕಂಪನನುಂ ಅಧೋಗ್ರೈವೇಯಕನು-ಮಹಮಿಂದ್ರನುಂ ಮಹಾಬಾಹು ಮಹೀಪತಿಯುಂ ಸರ್ವಾರ್ಥಸಿದ್ಧಿಜನನುಮಾಗಿ ಬಂದು ವೃಷಭೇಶ್ವರರತನೂಜನ್ನೀಗಳ್ ಬಾಹುಬಲಿಕುಮಾರನಾದಂ

ಭವವಾರಾಶಿಯೊಳಿಂತು ಜೀವನಿವಹಂ ಬರ್ದುತ್ತುಮಿರ್ಕುಂ ಮಹೋ ।
ತ್ಸವಮತ್ತಿ ಗುರುವಿಂತು ದಾಂಟಿದೊಡದಂ ಬೇಡೀವಿಷಾದಂ ನಿರ ॥
ಸ್ತವಿವೇಕಂ ಬೊಲಿದೇಕೆ ಮೋಹಿಸಿದಪೈ ನೀಂ ಮಾಣ ಶಕ್ರಂಗೆವ ।
ಸ್ತುವಿವರ್ ನಿನ್ನವೊಲಾರ್ಪೆಱಭುವನದೊಳ್ ಷಟ್ಖಂಡಧಾತ್ರೀಶ್ವರಾ ॥

ಎನೆದಾವದಗ್ಧಗಿರಿ ಮಾ ।
ತನಜಲದ ಜಳಂಗಳಿಂದ ಮಾಱಿಮವೋಲ್ ಭೋಂ ॥
ಕೆನೆ ಭರತನನಾಱುಸಿದಂ ।
ಮುನಿವಿನುತ ಗಣಾಧಿನಾಥ ವಚನಾಮೃತದಿಂ ॥ ೧೦ ॥

ವಚನ: ಅಂತಪಗತ ಗುರುಶೋಕ ವೇಗನಾಗಿ ಗಣಧರಚರಣ ಸರಸಿಜಂಗಳ್ಗೆಱಗಿ ತನ್ನ ಭೋಗತೃಷ್ಣೆಯಂ ತಾನೆ ತನ್ನ ಮನದೊಳ್ ನಿಂದಿಸುತ್ತುಂ ಮುಕ್ತ್ಯಂಗನಾನುರಕ್ತ ಚಿತ್ತನಾಗುತ್ತುಂ ಬಂದಯೋಧ್ಯಾಪುರಮಂ ಪೊಕ್ಕು ಕೆಲವು ದಿವಸಮಿರ್ದೊಂದು ದಿವಸಂ

ಗರಿಮುಪದದಿಂದ ಮಟ್ಟಿದ ।
ಪುರುಪರಮೇಶ್ವರನ ದೂತನಂ ಕಾಣ್ಬವೊಲಾ ॥
ಭರತಂ ಕಂಡಂ ಕನ್ನೆಯ ।
ನೆರೆಯಂ ತಳತಳಿಸಿ ಪೊಳೆವಮಣಿದರ್ಪಣದೊಳ್ ॥ ೧೧ ॥

ವಚನ: ಅಂತದಂ ಕಂಡ ಪಗತಮೋಹರಸನು ಮುಪಗತನಿರ್ವೇಗರಸನುಮಾಗಿ

ಹೇಯಂ ಸಾಮ್ರಾಜ್ಯಮುಪಾ ।
ದೇಯಂ ಪ್ರವ್ರಜ್ಯವೆಂದು ಮಾಣದೆರಾಜ್ಯ ॥
ಶ್ರೀಯಂ ಕೊಟ್ಟಂ ಮುಕ್ತಿ ।
ಶ್ರೀಯಂ ಬಗೆದರ್ಕಕೀರ್ತಿಗಾಭರತೇಶಂ ॥ ೧೨ ॥

ವಚನ: ಅಂತು ಪರಿತ್ಯಕ್ತ ಸಾಮ್ರಾಜ್ಯ ಪರಿಚ್ಛೇದನಾಗಿ ಸಮಸ್ತ ಧಾರ್ಮಿಕ ಜನಂಗಳಂ ಬರಿಸಿ ಸರ್ವತೋಭದ್ರವೆಂಬ ಮಹಾಮಹಿಮೆಯಂ ಮಹೋತ್ಸವದಿಂದೆಂಟು ದಿವಸಂಬರಂ ಮಾಡಿ ತತ್ಪೂಜಾ ಸಮೇತಂ ಕೈಳಾಸಶೈಲಕ್ಕೆ ಪೋಗಿ ತದಗ್ರಸ್ಥಿತ ಚೈತ್ಯಾಲಯಂಗಳನನೇಕ ವಿಧಾರ್ಚನೆಗಳಿಂದ ಮರ್ಚಿಸಿ ಭಗವದಾದಿ ಭಟ್ಟಾರಕರ ನಿರ್ವಾಣಭೂಮಿ ಸಮೀಪಸ್ಥಿತವಿಶಾಲಸ್ಫಟಿಕ ಶಿಲಾತಳಾರೂಢನುತ್ತರಾಭಿ ಮುಖನಾಗಿ ಸಿದ್ಧಭಕ್ತಿಪೂರ್ವಕಂ ತ್ರಿಜಗದ್ಗುರುವೆಂದು ತತ್ಪದ ಸರಸಿಜಧ್ಯಾನ ಪರಾಯಣನಾಗಿ

ಶ್ರೀನಾರೀಪತಿದೀಕ್ಷೆಯಂ ಕೊಳಲೊಡಂ ಭೋಂಕಲ್ ಮನಃಪರ್ಯಯ ।
ಜ್ಞಾನಂ ಪುಟ್ಟಿದುದಂತು ಪುಟ್ಟಿದ ಬಳಿಕ್ಕಂ ತನ್ಮುಹೂರ್ತಕ್ಕೆ ಭ ॥
ವ್ಯಾಸಂದಪ್ರದಮಿಂದುವೃಂದಕೃತ ಕಲ್ಯಾಣಾಸ್ಪದಂ ಕೇವಲ ಜ್ಞಾನಂ ।
ಪುಟ್ಟಿದುದಿಂತು ಭವ್ಯತಿಜಗಕ್ಕಾಶ್ಚರ್ಯಮಾಯ್ತಾಶನಾ ॥ ೧೩ ॥

ನರಲೋಕಮೊಂದೆ ಮುನ್ನಿನ ।
ಚರಣಾಬ್ಜಕ್ಕೆಱಗೆ ನೆಗಳ್ದ ಕೇವಳಬೋಧಂ ॥
ದೊರೆಕೊಳೆ ಸುರನರಲೋಕಂ ।
ಚರಣಾಬ್ಜಕ್ಕೆಱಗೆ ಭರತಯತಿಪತಿ ನೆಗಳ್ದಂ ॥ ೧೪ ॥

ವಚನ: ಅಂತು ನಾನಾವಿಧ ಧರ್ಮಕ್ಷೇತ್ರಂಗಳೊಳೊಂದು ಲಕ್ಕೆ ಪೂರ್ವಂಬರಂ ಧರ್ಮಾಮೃತಾಂಬುಸೇಕದಿಂ ವಿನೇಯಜನ ಸಸ್ಯಸಂಪತ್ಪರಂಪರೆಯಂ ಮಾಡಿ ಕೈಳಾಸಶೈಲ ಶಿಖರಾಲಂಕಾರನಿರುದ್ಧಯೋಗನುಂ. ಅಪಗತಯೋಗಗುಣಸ್ಥಾನನುಂ. ಚತುರ್ಥಧ್ಯಾನಾನಲದಗ್ಧ ಶೇಷಾಶೇಷ ಕರ್ಮೇಂಧನನುಮಾಗಿ—

ಪರಮಶ್ರೀಸಂತತಾವಾಸದೊಳಖಿಳಸುಖಸ್ವಚ್ಛ ಸಂಪನ್ನ ತೋಯಾ ।
ಕರದೊಳ್ ಶಶ್ವದ್ಗುಣಾಂಭೋರುಹವಿಳಸನವಿಭ್ರಾಜಿಯೊಳ್ ಸಿದ್ಧಹಂಸೋ
ತ್ಕರಲೀಲಾರಮ್ಯದೊಳ್ ಸಂದಮೃತವಿಳಯ ನೀರೇಜಿನೀಷಂಡದೊಳ್ ಸೌಂ
ದರಕೇಳೀ ಹಂಸನಾದಂ ಸುಕವಿಜನಮನೋಮಾನಸೋತ್ತಂಸ ಹಂಸಂ ॥

ವಚನ: ಭರತಯತಿಪತಿಯ ತದನಂತರದೊಳ್ ತದ್ವೃಷಭಸೇನ ಗಣನಾಥ ಪುರಸ್ಸರಂ ಪುರುತನಯರ್ ಆಕ್ರಮದೊಳ್ ಪರಮಸುಖಾಸ್ಪದ ಮನನಿಬರುಂ ಕೈಕೊಂಡರ್ —

ಶಕವರ್ಷಮೆಂಟುನೂಱ ।
ಕ್ಕೆಕಡೆಯೊಳಱುವತ್ತುಮೂಱು ಸಂದುದು ಜಗ ॥
ತ್ಪ್ರಕಟಪ್ಲವ ಸಂವತ್ಸರ ।
ದ ಕಾರ್ತಿಕಂ ಮುದಮನೀಯೆ ನಂದೀಶ್ವರದೊಳ್ ॥ ೧೬ ॥

ಸಿತಪಕ್ಷದ ಪಂಚಮಿ ದಿನ ।
ಪತಿವಾರಂ ಶುಭದ ಮೂಲನಕ್ಷತ್ರದೊಳ ॥
ನ್ವಿತಮಾಗೆ ನೆಗಳ್ದುದೀ ಮ ।
ತ್ಕೃತಿ ಜಗದೊಳ್ ಪುದಿದು ಸಾಗರಾಂತ ಕ್ಷಿತಿಯಂ ॥ ೧೭ ॥

ರಸಭಾವೋಪೇತ ಧರ್ಮಾಮೃತರಸಮಯದೊಳ್ ಘೋರಸಂಸಾರ ನಾನಾ ।
ವ್ಯಸನ ವ್ಯುಚ್ಛಿತ್ತಿಯೊಳ್ ಧಾರ್ಮಿಕಜನಜನಿತಾನಂದ ಸಂದೇಶವಿದ್ಯಾ ॥
ರಸದೊಳ್ ಸಂಸಾರಸಾರೋದಯ ವಿರಚಿತದೊಳ್ ವಾಗ್ವಧೂಮುದ್ರೆ
ಯೊಳ್ ಮು ।
ದ್ರಿಸಿ ನಿಂದತ್ತಾದಿ ತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ ॥

ಇದು ದೇವೇಂದ್ರ ಮುನೀಂದ್ರವಂದ್ಯ ಪರಮಜಿನೇಂದ್ರ ಮುಖಚಂದ್ರ
ವಾಕ್ಚಂದ್ರಿಕಾಪ್ರಸರ ಪ್ರಸಾದೋದೀರ್ಣ ಸೂಕ್ತಿಕಲ್ಲೋಲಮಾಲಾ
ಕೀರ್ಣ ಕವಿತಾಗುಣಾರ್ಣವ ಪ್ರಣೀತ ಪುಷ್ಪಾದಿ ಪುರಾಣ
ದೊಳ್ ಪರಿನಿರ್ವಾಣಕಲ್ಯಾಣವರ್ಣನಂ

ಸಂಪೂರ್ಣಂ

ಟಿಪ್ಪಣಿ

ಪುರುದೇವ: ವೃಷಭನಾಥನ ಮತ್ತೊಂದು ಹೆಸರು. ಆದಿದೇವ, ಆದಿನಾಥ, ಆದಿಬ್ರಹ್ಮ ಎಂದರೂ ಈತನೇ

ಜಿನೇಂದ್ರವಾಣಿ: ಸಮವಸರಣದಲ್ಲಿ ಕೇವಲ ಜ್ಞಾನವನ್ನು ಹೊಂದಿದ ಆತ್ಮಲೋಕಕ್ಕೆಸಗುವ ಧರ್ಮಬೋಧೆ. ಇದಕ್ಕೆ ದಿವ್ಯಧ್ವನಿ ಎಂದೂ ಹೇಳುವರು. ಇದು ವಿವಿಧ ಭಾಷೆಯ ಜನರಿಗೂ ಅವರವರ ಭಾಷೆಯಲ್ಲಿ ಕೇಳಿಸುವುದಂತೆ.

ಮನು: ಕಾಲಕಾಲಕ್ಕೆ ಮಾರ್ಗದರ್ಶಕರಾಗಿ ನಿಂತು ಜನಾಂಗವನ್ನು ಸುಪಥದಲ್ಲಿ ನಡೆಸುವವರು. ಜೈನಸಂಪ್ರದಾಯದಲ್ಲಿ ಅನೇಕ ಮನುಗಳಿರುವರು. ವೃಷಭನ ತಂದೆಯಾದ ನಾಭಿರಾಜನು ಹದಿನಾಲ್ಕನೆಯ ಮನು. ಮಗು ಹುಟ್ಟಿದಾಗ ಹೊಕ್ಕಳು ಕತ್ತರಿಸುವ ಪದ್ಧತಿಯನ್ನು ಪ್ರಾರಂಭಿಸಿದವನು ಈತನಾದುದರಿಂದ ಇವನಿಗೆ ಈ ಹೆಸರು. ಮನುಗಳಿಗೆ ಕುಲಧರರು ಎಂದೂ ಹೆಸರು.

ಪಂಚಕಲ್ಯಾಣ: ತೀರ್ಥೇಶನಾಗುವ ಆತ್ಮ ತಾಯಿ ಗರ್ಭಕ್ಕೆ ಬರುವಾಗ, ಹುಟ್ಟಿದಾಗ, ವಿರಾಗಿಯಾಗುವಾಗ, ಜ್ಞಾನೋದಯವಾದಾಗ, ಮೋಕ್ಷ ಹೊಂದಿದಾಗ—ಈ ಐದು ಸಂದರ್ಭಗಳಲ್ಲೂ ದೇವತೆಗಳು ಬಂದು ಆನಂದನೃತ್ಯವನ್ನು ಮಾಡುವರು. ಇದಕ್ಕೆ ಪಂಚಕಲ್ಯಾಣ ಎಂದು ಹೆಸರು.

ಸಮವಸರಣ: ತೀರ್ಥೇಶನಾಗಬೇಕಾದ ಆತ್ಮ ತಪಸ್ಸನ್ನು ಮಾಡಿ ಜ್ಞಾನವನ್ನು ಪಡೆದಮೇಲೆ, ದೇವೇಂದ್ರನಾಣತಿಯಂತೆ ಕುಬೇರ ಭೂಮಿ ಅಂತರಿಕ್ಷಗಳ ಮಧ್ಯೆ ಒಂದು ರತ್ನ ಪ್ರಪಂಚವನ್ನು ನಿರ್ಮಿಸುವನು. ದೇವತೆಗಳ ಕೋರಿಕೆಯಂತೆ ಕೇವಲ ಜ್ಞಾನಿ (ತೀರ್ಥಂಕರ) ಈ ರತ್ನಪ್ರಪಂಚದಲ್ಲಿ ಕೆಲಕಾಲ ತಂಗುವನು. ಇದಕ್ಕೆ ಸಮವಸರಣ ಎಂದು ಹೇಳುವರು.

ಕಠಿಣಪದಗಳ ಅರ್ಥ

ಅ

ಅಗ = ಬೆಟ್ಟ

ಅಗ = ಕಂದಕ; ಅಗಳು

ಅಗ್ರಮಹಿಷಿ = ಪಟ್ಟದರಾಣಿ

ಅಗುರ್ವು = ಭಯ

ಅಂಕುರ = ಮೊಳಕೆ

ಅಂಕ = ಪರಾಕ್ರಮ

ಅಡಕಿಲ್ = ಒಂದರಮೇಲೊಂದು

ಅಣಮುಮ್ = ಸ್ವಲ್ಪವೂ

ಅದಿರ್ಮುತ್ತೆ = ಒಂದುಜಾತಿಹೂ

ಅಧೋಗ್ರೈವೇಕ = ಒಂದು ಬಗೆಯ ಸ್ವರ್ಗ

ಅಧ್ರುವ = ಅಶಾಶ್ವತ

ಅಂತಕ = ಯಮ

ಅಂತವಾಸ = ಅಂತಃಪುರ

ಅನ್ವಯ = ವಂಶ

ಅನಾಕುಲ = ನಿರ್ಭಯ

ಅಪಗತ = ಕಳೆದುಕೊಂಡ

ಅಪನೀತಮುದ್ರೆ = ಮುದ್ರೆಯನ್ನೊಡೆದ

ಅಪರದಿಗ್ವಧು = ಪಶ್ಚಿಮದಿಕ್ಕು

ಅಭಿಚಾರ = ಮಾಡಬಾರದಕೆಲಸ

ಅಭಿಜಿನ್ಮುಹೂರ್ತ = ಮಧ್ಯಾಹ್ನ

ಅಂಬರಚರ = ಖೇಚರ

ಅಂಬೋಧ = ಮೋಡ

ಅಮರ್ಕೆ = ನೆಲಸಿ

ಅಮರ್ದು = ಅಮೃತ

ಅರಾತಿ = ವೈರಿ

ಅರಿಕೆ = ಕೀರ್ತಿ

ಅಲಂಘ್ಯ = ದಾಟಲಾರದ

ಅಲರ್ಗಣೆ = ಹೂಬಾಣ

ಅವನಿತಳ = ಭೂಮಿ

ಅಸುಗೆ = ಅಶೋಕವೃಕ್ಷ

ಅಸುಂಗೊಳು = ಪ್ರಾಣತೆಗೆ, ಉಬ್ಬು

ಅಸವಸ = ಗಾಬರಿ

ಅಳಱ್ = ಹೆದರು

ಅಳುರ್ = ವ್ಯಾಪಿಸು, ಅಸಾಧ್ಯ

ಅಳಿ = ದುಂಬಿ

ಅೞಿ = ನಾಶ

ಅಳಿಪಿ = ಆಸೆಪಟ್ಟು

ಅಳುಂಬ = ಅಸಾಧ್ಯ

ಅೞ್ಕರ್ = ಪ್ರೀತಿ

ಆ

ಆಕಳಿತ = ಕೂಡಿಕೊಂಡ

ಆತಪತ್ರ = ಕೊಡೆ

ಆದ್ರ್ರ = ನೆಂದ

ಆತೋದ್ಯ = ವಾದ್ಯ

ಆತ್ಮಜ = ಮಗ

ಆಟಿಸು = ಆಸೆಪಡು
ಆಣತಿ = ಅಪ್ಪಣೆ
ಆಭೋಗ = ಹೆಡೆ
ಆಮ್ನಾಯ = ಸದ್ವಂಶ
ಆಸನ್ನ = ಹತ್ತಿರ
ಆಹೂತ = ಕರೆದ

ಇ

ಇಂದೀವರ = ತಾವರೆ

ಈ

ಈಂಟು = ಕುಡಿ

ಉ

ಉಡಿ = ಕತ್ತರಿಸು
ಉತ್ತರೋತ್ತರ = ನಿರಂತರವಾಗಿ
ಉತ್ಥಾನ = ಮೇಲಕ್ಕೇಳು
ಉತ್ಸೇಧ = ಎತ್ತರ
ಉದಂಚ = ಹೆಚ್ಚಾದ
ಉದ್ವೃತ್ತ = ಮೇಲಕ್ಕೇಳು
ಉನ್ನಿದ್ರ = ನಿದ್ರೆಯಿಂದೇಳು
ಉಪಭೋಗಿಸು = ಅನುಭವಿಸು
ಉಪಾದೇಯ = ಒಪ್ಪುವ
ಉಪಾಯನ = ಸನ್ಮಾನ; ಕಾಣಿಕೆ
ಉರ = ಎದೆ
ಉರ್ವೀ = ಭೂಮಿ
ಉಳುಕಡೆ = ಒಳಗಿನಉಡುಪು

ಎ

ಎರೆ = ಬೇಡು
ಎಚ್ಚು = ಬಾಣಬಿಟ್ಟು
ಎರಕ = ಪ್ರೀತಿ

ಓ

ಓಘ = ಗುಂಪು
ಓರ್ವಾಜ್ವಲ = ಪ್ರಳಯದ ಬೆಂಕಿ

ಕ

ಕಟಕ = ಸೈನ್ಯ
ಕಂಡೂಯ = ತೀ
ಕದಳಿ = ಬಾಳೆಗಿಡ
ಕದಂಬಕ = ಗುಂಪು
ಕತಿಪಯ = ಕೆಲವು
ಕಮನೀಯ = ಮನೋಹರ
ಕರಂ = ಚೆನ್ನಾಗಿ
ಕರಿಣಿ = ಹೆಣ್ಣಾನೆ
ಕರೇಣು = ಧೂಳು
ಕಳತ್ರ = ಹೆಂಡತಿ
ಕಳಿಕೆ = ಕೊನೆ
ಕಳಕುಳ = ದಿಕ್ಕೆಡು
ಕವಾಟ = ಬಾಗಿಲು
ಕರವಾಳ = ಕತ್ತಿ
ಕಳಿಕ = ಫಲ
ಕವಣ = ದನಿ
ಕಾರ್ಮುಕ = ಬಿಲ್ಲು
ಕಾವಣ = ಚಪ್ಪರ
ಕ್ಷ್ಮಾಪ = ರಾಜ
ಕೀರ = ಗಿಳಿ
ಕೀರಿ = ಚುಚ್ಚು
ಕುಜ = ಮರ

ಕುಟಿಲ—ಗುಂಗುರು
ಕುಡಿತೆ—ಬೊಗಸೆ
ಕುಂತಳ—ಕೂದಲು
ಕುಲಿಶ—ವಜ್ರಾಯುಧ
ಕುರುಂಬ—ಕೋಟೆ
ಕುಲಾಲ—ಕುಂಬಾರ
ಕೂರಿತು—ಹರಿತವಾದ
ಕೊಸಗು—ಬಿಟ್ಟದಾವರೆ
ಕೋಡು—ಕೊಂಬು
ಕೋರಂತ—ಅರಳಿದ

ಗ

ಗದಿತ—ಹುಟ್ಟಿದ
ಗಳಿತ—ಸೋರಿದ
ಗುಣಾರ್ಣವ—ಗುಣಸಾಗರ
ಗೆಂಟು—ದೂರ

ಚ

ಚಮೂಪತಿ—ಸೇನಾಪತಿ
ಚಾರು—ಮನೋಹರ
ಚೂತ—ಹೂಬಿಟ್ಟ

ಜ

ಜನ್ಮಾಳಿ—ಜನ್ಮಗಳ ಸಮೂಹ
ಜಲ್ಪಿತ—ಮಾತನಾಡಿದ
ಜವನಿಕೆ—ತೆರೆ; ಮುಸುಕು
ಜವಹರಿ—ಒಡವೆ
ಜಾಯಿಲ—ನಾಯಿ
ಜಿನಾಗಮ—ಜಿನಧರ್ಮ

ತ

ತಂಡುಲ—ಅಕ್ಕಿ
ತನೂಭವ—ಮಗ
ತಂಡಲ್—ಮಳೆ
ತಪನಾಂಶು—ಸೂರ್ಯಕಿರಣ
ತಮ—ಕತ್ತಲು
ತಾರ್ಕಿಕ—ತರ್ಕಶಾಸ್ತ್ರ ಪಂಡಿತ
ತಾರಕ—ಕಣ್ಣುಗುಡ್ಡೆ
ತಿಮಿರ—ಕತ್ತಲು
ತ್ರಿದಶ—ಇಂದ್ರ
ತುರಂಗ—ಕುದುರೆ
ತೃಷ್ಣೆ—ಬಾಯಾರಿಕೆ
ತೋಯರಾಶಿ—ಸಮುದ್ರ

ದ

ದಯಿತ—ಗಂಡ
ದರಹಸಿತ—ನಗುವ
ದಳಿತ—ಅರಳಿದ
ದಿವ—ಸ್ವರ್ಗ
ದೀಪ್ತಿ—ಬೆಳಕು
ದೀಧಿತಿ—ಬೆಳಕು
ದಿವಿಜನದಿ—ಗಂಗಾನದಿ
ದುಗ್ಧ—ಹಾಲು
ದೂರ್ವಾ—ಗರಿಕೆ
ದುಕೂಲ—ಬಟ್ಟೆ
ದ್ಯುಮಣಿ—ಸೂರ್ಯ
ದ್ರುಮ—ಮರ
ದೊರೆ—ಸಮಾನ
ದೋಹಳ—ಬಯಕೆ

ಧ

ಧಾತ್ರಿ — ಭೂಮಿ

ನ

ನಖ — ಉಗುರು

ನಾಕ — ಸ್ವರ್ಗ

ನಿಗಳ — ಗುಂಪು

ನಿನದ — ಶಬ್ದ

ನಿರ್ಭರ — ಅಸಾಧ್ಯ

ನಿಮ್ನ — ಹಳ್ಳ

ನಿರ್ವೇಗ — ವೈರಾಗ್ಯ

ನಿವಿಷ್ಟ — ಕುಳಿತಿದ್ದ

ನಿಳಿಂಪ — ದೇವತೆ

ನೀರದ — ಮೋಡ

ನೆಗಲ್ದ — ಕೀರ್ತಿ ಪಡೆದ

ನೆಮರ್ಂತ — ಬಂದ

ನೆಱಪಿ — ಸೇರಿಸಿ

ನೇಸಱ್ — ಸೂರ್ಯ

ಪ

ಪಜ್ಜಳಿಸು — ಪ್ರಜ್ವಲಿಸು; ಪ್ರಕಾಶಮಾನ

ಪಟವಾಸ — ಒಳಲಂಗ; ಸುಗಂಧ ದ್ರವ್ಯ; ಧೂಳು

ಪಡಲಿಗೆ — ತಟ್ಟೆ

ಪಡಿ — ಬಾಗಿಲು

ಪಡೆವಳ್ — ಸೇನಾಪತಿ

ಪತ್ತುವಿಡು — ಹೋಗಲಾಡಿಸು

ಪದಪತೆ — ಪದಶಾಂಗು

ಪರಮ — ಆದಿದೇವ

ಪರಿಘ — ಆಯುಧ

ಪರಿಕಾಲ್ — ಕಾಲುವೆ

ಪರಿಗತ — ನಡೆದು ಬಂದ

ಪಸುಗೆ — ವಿಭಾಗ; ಹಂಚು

ಪಲ್ಯಂಕಾಸನ — ಕುಳಿತು ತಪಸ್ಸು / ಮಾಡು

ಪಳಾಳ — ಠಕ್ಕು; ಮೋಸ

ಪಂಚಶರ — ಮನ್ಮಥ

ಪಕ್ಷ್ಮ — ರೆಕ್ಕೆ

ಪಾಂಗು — ರೀತಿ

ಪಾಣಿಪುಟ — ಅಂಗೈ

ಪಾರ್ಥಿವ — ರಾಜ

ಪಾದ್ಯ — ನೀರು

ಪಾಂಸು — ಧೂಳು

ಪಿಸುಗಿತ — ಹೊಂಬಣ್ಣ ಬಂದ

ಪುಂಜ — ರಾಶಿ

ಪುರೋಪಾಂತ — ಊರಿನ ಹೊರಗೆ

ಪುದಿದ — ತುಂಬಿದ

ಪುಟ — ಬಾಗಿಲ ರೆಕ್ಕೆ

ಪುರುಹೂತ — ಇಂದ್ರ

ಪುರುಳಿ — ಹೆಣ್ಣು ಗಿಳಿ

ಪೂಣ್ದು — ಪ್ರತಿಜ್ಞೆ ಮಾಡಿ

ಪೂಳ್ — ಹೂಳು

ಪೇಟಕ — ಗುಂಪು

ಪೊಸಬೆಕ್ಕೆ — ಸೊಂದಿಕೆ

ಪೊಸಪುರ್ — ಪರಾಕ್ರಮ

ಪೊಸಂತಿಲ್ — ಹೊಸ್ತಿಲು

ಪೊೞಲ್ – ಊರು

ಪೊಂಗು – ಗರ್ವ

ಪ್ರಗುಣೀಕೃತ – ಗೌರವಕ್ಕಾಗಿ

ಪ್ರತತಿ – ಗುಂಪು

ಪ್ರತಿಹತ – ಹೊಡೆದ; ಬಾರಿಸಿದ

ಪ್ರಣತಿ – ನಮಸ್ಕಾರ

ಪ್ರಮುದ – ಸಂತೋಷ

ಪ್ರಮೋದ = ಸಂತೋಷ

ಪ್ರಲಂಬ = ದೊಡ್ಡದಾದ

ಪ್ರವ್ರಜ್ಯ = ಸನ್ಯಾಸ

ಪ್ರಸ್ತುತ್ಯ = ಹೊಗಳುವ

ಪ್ರಶ್ರಯ – ಗೌರವ: ಪ್ರೀತಿ

ಪ್ರೀಣಿತ = ಸಂತೋಷ ಹೊಂದಿದ

ಫ

ಫಣಿಪ್ರಭು – ಆದಿಶೇಷ

ಫೇನ = ನೊರೆ

ಬ

ಬಕುಳ = ಒಂದು ಬಗೆಯ ಹೂ

ಬಗೆ = ಮನಸ್ಸು

ಬಧಿರಿತ – ಕಿವುಡು ಮಾಡಿದ

ಬಂಧುರ = ಮನೋಹರ

ಬಹಿತ್ರ = ದೋಣಿ, ಹಡಗು

ಬಾಜನೆ – ಓದು

ಬಾಯ್ಕೇಳಿಸು – ಸೋಲಿಸು

ಬಿಂಬ = ತೊಂಡೆಹಣ್ಣು

ಬೆಳ್ಪ್ಸರಿಗ = ದಡ್ಡ

ಬೊಬ್ಬುಳಿಕೆ = ನೀರುಗುಳ್ಳೆ

ಬೋಧಿಲಾಭ – ಜ್ಞಾನೋದಯ

ಭ

ಭಂಗಿ = ನಿಲವು; ರೀತಿ

ಭವದೀಯ = ನಿನ್ನ; ನಿಮ್ಮ

ಭಾವೀ = ಮುಂದೆ ಬರುವ

ಭಾಸ್ಪದ = ಹೊಳೆಯುವ

ಭುವನ = ಲೋಕ

ಭೃಂಗ = ದುಂಬಿ

ಭೃಂಗಾರ = ಚಿನ್ನ

ಭೂಭೃತ್ಕುಲ = ಪರ್ವತ

ಭ್ರೂವಿಲಾಸ್ಯ = ಹುಬ್ಬಿನ ಕುಣಿತ

ಮ

ಮಡುಗೊಳ್ – ತಂಗಲು

ಮದೀಯ = ನನ್ನ

ಮಯೂಖ = ಮೊಳೆ; ಹೊಳಪು

ಮರಾಳ = ಹಂಸ

ಮರೀಚಿ = ಹೊಳಪು; ಬೆಳಕು

ಮಲೆ = ಮೇಲೆ ಬೀಳು; ಗರ್ವಪಡು

ಮಸಕ = ಕೋಪ; ವೈರ; ಸ್ಪರ್ಧೆ

ಮಹೀರುಹ = ಮರ

ಮಾನಕಷಾಯ = ಸ್ವಾಭಿಮಾನ

ಮುದಿತ = ಸಂತೋಷಗೊಂಡ

ಮುರುಕು = ಚೂರು; ಸ್ವಲ್ಪ

ಮುಸುರ್‌ಮುಸುರ್ = ಮತ್ತೆಮತ್ತೆ

ಮೂರ್ಧ = ತಲೆ

ಮೋಖಲೆ = ಶಿಖರ; ಜಾಬು

ಯ

ಯುಗ್ಮ – ಎರಡು; ಜೋಡಿ

ರ

ರತ್ನಾಕರ = ಸಮುದ್ರ

ರದ – ದಂತ

ರಮ್ಯ = ರಮ್ಯ

ರವ = ಶಬ್ದ

ರೋದೋಽಂತರ್ಭಾಗ = ಆಕಾಶ

ಲ

ಲಂಬಣಿಗೆ = ಹಾರ

ಲಲಾಟ = ಹಣೆ

ಲಲಾಟಪಟ್ಟರ್ = ನಮಸ್ಕರಿಸಿದವರು

ಲಾವಣ್ಯ = ಸೌಂದರ್ಯ

ವ

ವಕ್ತ್ರ = ಮುಖ

ವದನ = ಮುಖ

ವರೂಥ = ರಥ

ವಲಂ = ಅಲ್ಲವೆ

ವಲ್ಗತ್ತುರಗ = ನೆಗೆಯುವ ಕುದುರೆ

ವಲ್ಲೀ = ಬಳ್ಳಿ

ವಾಸುಕಿ = ಆದಿಶೇಷ

ವಿಜಿಗೀಷು = ಜಯಾಭಿಲಾಷಿ

ವಿಧು = ಚಂದ್ರ

ವಿದ್ವಿಷ = ವೈರಿ

ವಿದ್ಯುಲ್ಲತೆ = ಮಿಂಚು

ವಿನ್ಯಾಸ = ರಚನೆ; ಜೋಡಣೆ

ವಿಸ್ಫುರಿತ = ಬೆಳಗಿದ

ವಿಷ್ಟರ = ಪೀಠ

ವೃತ = ಸುತ್ತಿದ

ವೃತ್ತ = ದುಂಡಾದ

ವೇಣೀನಿಕರ = ತಲೆಕೂದಲು

ವೇದಿಕಾ = ಜಗಲಿ

ವೇಷ್ಟನ = ಸುತ್ತುವರಿ

ವ್ಯೂಢ = ವಿಸ್ತಾರವಾದ

ವೈಯಾಕರಣ = ವ್ಯಾಕರಣಪಂಡಿತ

ವ್ಯೋಮ = ಆಕಾಶ

ಶ

ಶರಾಸನ = ಬಿಲ್ಲಿನಹೆದೆ

ಶರಣೀಯು = ಕಾಪಾಡು

ಶಾತ್ರವ = ಶತ್ರು

ಶಾರ್ದೂಲ = ಹುಲಿ

ಶಿರೋರುಹ = ಕೂದಲು

ಶಿರೋವೇಷ್ಟನ = ತಲೆಬಟ್ಟೆ, ರುಮಾಲು

ಶಿಶುಮಾರ = ಮೊಸಳೆ

ಶುಕ್ತಿ = ಮುತ್ತಿನಚಿಪ್ಪು

ಶುಷ್ಕ = ಒಣಗಿದ

ಸ

ಸದನ = ಮನೆ

ಸನಾಭಿ = ಒಡಹುಟ್ಟಿದ

ಸಮೀರ = ಗಾಳಿ

ಸಮೆಂದ = ಸಮರ್ಪಿಸಿದ

ಸಮುದೀರಿತ = ಹೇಳಿದ

ಸಂಕ್ರುದ್ಧ = ಕೋಪಗೊಂಡ

ಸಂಜಾತ = ಹುಟ್ಟಿದ

ಸದ್ಮ = ಮನೆ
ಸರಿ = ಮಳೆ
ಸಲಿಲ = ನೀರು
ಸಹಕಾರ = ಮಾವಿನ ಮರ
ಸ್ಖಲಿತ = ಬಿದ್ದ; ನಿಂತ
ಸ್ತವ = ಸ್ತುತಿ; ಹೊಗಳು
ಸ್ವನ = ಶಬ್ದ
ಸ್ಯಂದನ = ರಥ
ಸಾರವೆ = ಬರುವುದಿಲ್ಲವೇ ?
ಸಾವದ್ಯಭೀರು = ಕೊಲೆಗೆ ಅಂಜುವವ
ಸ್ವಾಂತ = ಮನಸ್ಸು
ಸಿಗ್ಗು = ನಾಚಿಕೆ
ಸಿತ = ಬಿಳಿಯಬಣ್ಣ
ಸಿಬಿಕ = ಪಲ್ಲಕ್ಕಿ
ಸಿವಿಗೆ = ಪಲ್ಲಕ್ಕಿ
ಸೀಂಳ = ಸೀಳಿ; ಕತ್ತಿ
ಸೀಮೆ = ಗಡಿ
ಸೂಲ್ = ಸರದಿ
ಸ್ವೇದ = ಬೆವರು
ಸೋಗೆ = ನವಿಲು
ಸೌದಾಮಿನಿ = ಮಿಂಚು

ಹ

ಹರ್ಮ್ಯ = ಮನೆ
ಹರಿನ್ಮಣಿ = ಪಚ್ಚೆ

ಒಪ್ಪೋಲೆ

ಪುಟ	ಪದ್ಯ-ಸಾಲು	ತಪ್ಪು	ಒಪ್ಪು
3	10 — 2	ಬಕರ್ಣವೊ	ಬಕರ್ಣವೆ
	„ — 3	ಲಾಭವೆಂ	ಲಾಭವೊಂ
	13 — 3	ಪೂಣ್ದ	ಪೂಱ್ದ
	„	ತೆಱದಿಂದ	ತೆಱಿದೊಂದ
4	4 ವಚನ–2	ದಂಪತಿಯೊನೆ	ದಂಪತಿಯನೆ
5	5 — 3	ಬೆವೆ	ಬೆಲೆ
	5 — 4	ಸ್ವದ	ಸ್ಪದ
6	7 — 3	ಸತಿ	ಸಲೆ
	„	ಜಗತಿ	ಜಗತೀ
	7 — 4	ನಿವೆ	ನಿಲೆ
	8 — 3	ನಳಿದಂ	ನಱಿದಂ
	8 ವಚನ–1	ನುವಳಿದೊ	ನುವಱಿದೊ
	„ –2	ಸುನಾಭಿ	ನಾಭಿ
	„ –2	ಯೂಳಂ	ಯೊಳಂ
	„ –7	ಮಹೀತತೀ	ಮಹೀಪತಿ
	„ –8	ಗರ್ಭವಾಸ	ಗರ್ಭಾವಾಸ
7	11 — 1	ದುಃರಾಶಾ	ದುದಾಶಾ
	11 — 3	ಪಾವೊಳ್	ಪಾಲೊಳ್
8	17 ವಚನ–1	ಅಯು	ಅಂತು
10	23 — 4	ದಗ್ಗಳಲ್ತೇ	ದೆಗ್ಗಲ್ತೇ
11	26 — 4	ಟ್ರಿವರ್ಗ	ತ್ರಿವರ್ಗೆ
12	1 — 1	ಓಳಿಯಾಳ	ಓಳಿಯೊಳಂ
13	9 — 3	ಭಕ್ತಿಯ್ಯೆ	ಭಕ್ತಿಯೆ

ಪುಟ	ಪದ್ಯ–ಸಾಲು	ತಪ್ಪು	ಒಪ್ಪು
	4 — 3	ಸೇವೆಯಂದಿಂ	ಸೇವೆಯಿಂದಿಂ
	5 — 4	ರವಕ್ಕೊಡರ್ಚ	ಕ್ಕೊಡರ್ಚ
	6 — 2	ಪೇೞ್ವುವೊ	ಗೇೞ್ವುವೊ
	7 — 1	ಮಂತನ	ಮಾತನ
14	10 — 2	ಬಿಲ್ಲಂ	ಬಿಲ್ಲೀ
		ಬದುಕಿ	ಬರ್ದುಕಿ
	11 — 2	ನಂಗವು	ನಂಗ
	12 — 4	ನೊಡನೆ	ನೊಡನೊಡನೆ
15	13 — 1	ನೆಗೆಱ್ತೆ	ನೆಗಱ್ತೆ
	2	ಜೋ	ಜ್ಯೋ
	3	ತಿಂಗ	ತಿಗ
	17 — 2	ಬಂತಿದೆ	ಬಂತಿರದೇ
	4	ಸಾಂದರಂ	ಸೌಂದರಂ
16	22 — 3	ನವುಱು	ನಣವುಱು
17	23 — 3	ನಱಿದದಂ	ನಱಿದದಂ
	24 — 4	ತಿರಂ	ತಿಱಂ
	25 — 4	ನೆಱೆಯ	ನೆಱೆಯ
18	30 — 1	ಬೆನ್ನಟ್ಟಿ	ಬೆನ್ನಟ್ಟಿ
	31 — 2	ದ್ವಿಷತಂ	ದ್ವಿಷರಂ
19	32 — 4	ಗ್ಯೆಯ್ದಾ	ಗೆಯ್ದಂ
	33 — 4	ರವವೊಂದೆ	ರವವೊಂದೆ
20	37 — 3	ಸರಂವಿಗೆ	ಸರಂವಿಂಗೆ
	37 ವಚನ–5	ಲೋಚ್	ಲೋಚು
	7	ಮುಹಾಚ್ಛರು	ಮುಹಾಕಚ್ಛರು
	14	ತಾಳಪುರ	ತಳಾಪುರ
21	37 ವಚನ–5	ತಾಯುಧ್ಯ	ತಾಯುದಾಧ್ಯ

ಪುಟ	ಪದ್ಯ-ಸಾಲು	ತಪ್ಪು	ಒಪ್ಪು
	6	ಪೂರ್ಪಣ	ವೂರ್ಪಣ
	7	ಚೋಳಾಂ	ಚೇಳಾಂ
	40 — 4	ನಿರಂತಂ	ನಿರತಂ
22	41 — 2	ಕರೇಣಾ	ಕರೇಣು
	41 ವಚನ—2	ಗೆಂಟಲಿ3	ಗೆಂಟಲಿ3ೊ
	3	ಧೂಳಿರಾಳ	ಧೂಳಿಶಾಳ
	6	ಸೌಳ	ಪೌಳ
	6	ಧೂಪವಟ	ಧೂಪಘಟ
	9	ಸ್ತವಾಂ	ಸ್ತನುಂ
	12	ವುಖ	ಮುಖ
23	44 — 2	ಸಾಚಿರ್	ಸಾಚುರ್
	4	ಕ್ಯೊಯರ್	ಕ್ಯಯರ್
24	48 ವಚನ—4	ಸುಂದರಿ	ಸೌಂದರಿ
26	4 — 4	ಲೀಲೆಯುನೆ	ಲೀಲೆಯಿಂ
28	10 — 1	ಶೋದೋಂ	ರೋದೋಂ
	〃	ಪ್ರವಾದಂ	ಪ್ರಣಾದಂ
	〃 4	ನೆಗಲ್ದರೆ	ನೆಗಲ್ದರೆ
	11 — 3	ನೀ	ವೀ
30	21 — 3	ಪೆಡೆ	ವೆಡೆ
	〃 4	ನಡೆಯು	ನಡೆಯೆ
	22 — 4	ಪೊಲಿ3ಯೋ	ಪೊಲಿ3ಯೋ
31	25 ವಚನ—1	ಸಾರಧಾರಿ	ಸಾರಚಾರಿ
32	30 — 0	ವೇಲ್ದಲಿ	ವೇಲ್ದಲಿ
	〃 4	ಬಸವುಂ	ಬನವಂ
33	37 — 2	ಕಣ್ಗಳುಂ	ಕಣ್ಗಳುಂಬಂ
34	38 — 2	ನೆಲವ	ನೆಲವಿ

ಪುಟ	ಪದ್ಯ–ಸಾಲು	ತಪ್ಪು	ಒಪ್ಪು
	39 — 2	ನೀ	ನೀಂ
	39 ವಚನ–1	ಎಂದರಂ	ಎಂದದಂ
35	43 ವಚನ–2	ಪ್ರಧಾನ	ಪ್ರಸಾಧನ
	" 4	ಕಪ್ಪುರಿನ	ಕಪ್ಪುರಿಸ
	"	ನೆಯ್ದುವಂದು	ನೆಯ್ದುವಂದು
36	46 — 2	ನೆನಲೀ	ನೆದಲೀ
	" 4	ನೀರೋದಯುಂ	ಸಾರೋದಯಂ
	46 ವಚನ–2	ಮಂದಿರಂ	ಮಂದಿರಮಂ
	48 — 2	ಪೊಲ್ತಿರ್ದುರ್	ಪೋಲ್ತಿರ್ದುರ್
37	30 ವಚನ–1	ರಾಶಿಯೊನಿಸಿ	ರಾಶಿಯೊನೀಸಿ
	51 ವಚನ–2	ನ್ನಿದ್ರವಾ	ನ್ನಿದ್ರನಾ
	52 — 4	ಭೇರಿ	ಭೇರಿ
38	54 — 1	ದಹನೇಂದ್ರೇಕ	ದಹನೋದ್ರೇಕ
39	59 — 3	ಸಂದೇಹ	ಸಂದೋಹ
	59 ವಚನ–7	ಕುಜಗಳ	ಕುಜಂಗಳ
	"	ನೆಟ್ಟಿಲ್ಗ	ನೆಟಿಲ್ಗ
	" 9	ಪುಱುಂಬ	ಕುಱುಂಬ
	"	ಮುವರ್ಗಂತಿ	ಮುಸರ್ಗಂತಿ
	60 — 4	ದೀಗಳೀಂ	ದೀಗೞೀಂ
40	62 ವಚನ–2	ಗಳೆ	ಗಳ್ಗೆ
	" 5	ವಿಳಂಬ	ವಿಳಂಬಿ
41	65 — 4	ರಥ	ರಥಂ
	65 ವಚನ–3	ಬಂದಂ	ಬರಂ
	66 — 2	ದಡಿಯು	ದಡಿಯುಂ
42	68 ವಚನ–2	ದೇಟಿಸಿ	ದೆಱಿಸು
	" 3	ಜೋವೊಡೆ	ಜೀವೊಡೆ

ಪುಟ	ಪದ್ಯ–ಸಾಲು	ತಪ್ಪು	ಒಪ್ಪು
	69 — 3	ಳಭ್ರಕ್ಯೊ	ಳಭ್ರಕ್ಕೊ
	71 — 2	ಳೆರಡವು	ಲೊರಡವು
43	74 — 3	ಗಹನವಾಂ	ಗಹನವಾ
44	78 — 4	ಪೆಂಪುದಿಡೆ	ಪೆಂಪ್ರಗಿಡೆ
	78 — 3	ಪಲನಾಡು	ಪೞವಾಡು
45	82 — 1	ಬಾಗದ	ಚಾಗದ
46	87 — 1	ಮುನ್ನ	ಮುನ್ನಂ
	89 — 1	ತಳಮಳ	ತಳಮಳು .
	„ 4	ವಂತಿದೆ	ವಂತಿರೆ
47	92 — 1	ರಾತ್ರವ	ಶಾತ್ರವ
	„ 2	ದಳಿತ	ಸಳಿತ
	„ 4	ಕೊಂಡವನ	ಕೊಂಡನ
	93 — 3	ಸೊಗವಿಸಿ	ಸೊಗಯಿಸಿ
48	95 ವಚನ—4	ನಿಟಿಸಿ	ನಿಱಿಸಿ
	„	ಪೊಂದೇ	ವೊಂದೇ
	97 — 3	ಗಿತ್ತ	ಗಿತ್ತಂ
	„ 4	ನಾಮುಮರ	ಸಾಮರ
	98 — 1	ಗಗನಾಂ	ಗಗನಾ
	„	ನೆಯ್ದು	ನೆಯ್ದೆ
	„ 3	ಕ್ಪ್ವಷ್ಟ	ಕ್ಪ್ವಷ್ವ
49	99 — 1	ವೇದಿಯು	ವೇದಿಕೆಯು
	101 — 2	ತಿಳಕಂ	ಕಟಕಂ
50	103 — 2	ನಾಳಿಲೆ	ನಾಳಲೆ
	104 — 3	ಮಿಃಂತದೆ	ಮಿಾತಿದೆ
51	107 — 2	ಪಜೆಯಃಂ	ವಜೆಯುಂ
	„ 4	ಚಿಂತೆಯಂ	ಚಿಂತೆಯಿಂ

ಪುಟ	ಪದ್ಯ-ಸಾಲು	ತಪ್ಪು	ಒಪ್ಪು
	108 — 2	ಮಂಡಲೀ	ಪಾಡಲಿ
	108 ವಚನ-2	ದುದಮಂ	ದುದುಮಂ
	3	ನಣ್ಪುಮಂ	ನಖ್ಪುಮಂ
	,,	ಪಾರ್ಥಿವ	ಪಾರ್ಥಿವರ್
	,,	ಪರಿಣತ	ಪರಿಸ್ಫೃತ
	109 — 3	ಸಿಂಧುವಿ	ಸಿಂಧುವ
52	110 — 2	ಗನಿತುವರ	ಗನಿತುವರಂ
	113 — 2	ವೇಲ್	ಪೇಲ್
	113 — 3	ದಂಷ್ಟ್ರೀ	ದಂಷ್ಟ್ರ
	115 — 1	ಕೃತಮಾಳಾ	ಕೃತಮಾಳ
	,, 4	ವಾಳ್ವುದಾ	ನಾಳ್ವುದಾ
53	116 — 1	ಚೆಂದೊಂದ	ಒಂದೊಂದ
	3	ರೊರಿದ	ರೊಂದ
	117 — 1	ಕೆಬಿನಿ	ಕೆಅನಿ
53	119 — 2	ವೇದಿಳೆಯಂ	ವೇದಿಕೆಯಿಂ
	4	ಬಳನೆಯ್ದು	ಬಳನೆಯ್ದಿ
54	120 — 2	ಮಾಕಾಶಂ	ಮಾಕಾಶಮಾಶಾಂ
55	123 ವಚನ-7	ರಾಜನ	ರಾಜರನ
	124 — 4	ಭೂಭೃತ್ತ	ಭೂಭೃತ್ಪ
	124 ವಚನ-4	ಮ್ಲೋಚ್ಛ	ಮ್ಲೇಚ್ಛ
	,, 5	ಭೂತಳಕಂ	ಭೂತಳರಂ
56	125 ವಚನ-3	ನೆವೆಗಳ್ಗೆ	ನೆಲೆಗಳ್ಗೆ
	4	ನಲಿಪವೆಂದು	ನಲಿಪಲೆಂದು
	127 — 2	ಸುಗಿನಪೆ	ಸುಗಿವಪೆ
	3	ನೆಸೆಕ	ದೆಸೆಡೆ
51	130 — 2	ತೂಳ್ದೊಡ	ತಳ್ದೊಡೆ

ಪುಟ	ಪದ್ಯ—ಸಾಲು	ತಪ್ಪು	ಒಪ್ಪು
	132 — 1	ಅಡಿಯಂ	ಅಡಿಯಿಂ
	2	ಪೊಯ್ಯೊಳ್	ಪೊಯ್ಲೊಳ್
	,,	ರೂಱಿದವು	ರೂಱಿದಪುದ
	3	ಗಾಳಿಯು	ಗಾಳಿಯಿಂ
	4	ನಡಿಗಿಱಿ	ನಡಿಗಿಲ್ಪಿ
58	133 ವಚನ–3	ನಾಯಂಸ	ನಾಯಸಾ
59	136 — 1	ಪರ್ಚಿಸ	ಪರ್ದಿಸ
	136 ವಚನ–1	ದೋರ್ಣಜ	ದೋರ್ದಿರ್ಣಜ
	137 — 4	ಚೈತ್ರ	ಚೈತ್ರ
	139 — 3	ಲ್ಪಳಿಯು	ಲ್ವಳಿಯು
60	139 ವಚನ–3	ತೆಂಕವಾ	ತೆಂಕವೊ
	5	ಒರೆಯಿಸು	ಬರೆಯಿಸು
	140 — 1	ಕೋಟೆ	ಕೋಟೆ
	,,	ಸವೆಸಂದ	ಸಲೆಸಂದ
	2	ಚಾರದಬೀಗದ	ಬೀರದಚಾಗದ
	4	ವರ್ತಿಯಂ	ವರ್ತಿಯೊ
61	143 ವಚನ–4	ಅಭಿಷೇಕ	ಭಿಷೇಕ
	6	ಪ್ರವಾತ	ಪ್ರಪಾತ
	8	ತೆಱೆದಾ	ತೆಱೆದ
62	145 ವಚನ–3	ನಿಲಿಸಿ	ನಿಱಿಸಿ
	146 — 1	ರಕ್ಕಂದು	ರಕ್ಕೆಂದು
	3	ಸಿಂತಿ	ದಿಂತಿ
	148 — 1	ಮುತ್ತಿರೂಪ	ಮುಲ್ತೆರೂಪ
64	1 ವಚನ–2	ಪ್ರನಾದಿತ	ಪ್ರಸಾದಿತ
	3	ಯಾಗಿದ್ದ	ಯಾಗಿರ್ದ
65	7 — 3	ತೊಡಂದು	ತೊಡರದು

ಪುಟ	ಪದ್ಯ–ಸಾಲು	ತಪ್ಪು	ಒಪ್ಪು
66	8 — 1	ನಾನಂ	ನಾವಂ
	2	ಗಿರವೆಡೆ	ಗಿರಲೆಡೆ
66	12 — 2	ರೊಳಗ್ಗ	ರೊಳಗ್ಗಳ
67	14 — 3	ಪರುವೋಶ್ವರ	ಪರವೋಶ್ವರ
	15 — 3	ಪೆಱ	ಪೆಱ3
	16 — 1	ಮುನಿಸೆ	ಮುನಿಸಿ
68	18 — 3	ಱಿನಿತುಂ	ಱಿನಿತುಂ
	19 — 2	ತಿವ್ರ್ಪದೆಂ	ತೀವ್ರ್ಪದೊಂ
	4	ಯೆಂದ	ಎಂದ
	21 — 1	ದೆರಱಗು	ದೆಱಗು
	4	ಕೊಟ್ಟು	ಗೊಟ್ಟು
69	22 — 3	ನಗಿದು	ನವುಗಿದು
	26 — 4	ಪುರತನ	ಪುರುತನ
70	28 — 4	ವಲ್ತೆ	ದಲ್ತೆ
72	2 — 2	ಭೂವಿಲ	ಭ್ರೂವಿಲ
	2 ವಚನ-1	ಪುರಪರ	ಪುರುಪರ
	2	ಸರಸಿರ	ಸರಸಿಜರ
	5 — 4	ತಿರ್ಪೆ	ತ್ರಿರ್ಪೆ

ಅಚ್ಚಾಗಿರುವ ಸನ್ಮತಿಗ್ರಂಥಮಾಲೆ ಪುಷ್ಪಗಳು

ಅಜಿತಪುರಾಣ	4—0—0
ಧರ್ಮನಾಥಪುರಾಣ	1—8—0
ದಶಭಕ್ತಿ	2—4—0
ಮುನಿಸುವ್ರತ ಕಾವ್ಯ	2—0—0
ಯಶೋಧರ ಚರಿತ್ರೆ	1—0—0
ಆತ್ಮಪ್ರಬೋಧೆ	1—8—0
ಪಂಪನ ಕಲಿಕರ್ಣ	1—0—0
ಸಮ್ಯಕ್ತ್ವಸಾರ	0-15—0
ಪಂಚಸ್ತೋತ್ರ	0-12—0
ಸತ್ಕ್ರಿಯಾದರ್ಪಣ	1—0—0
ವಸ್ತುವಿಜ್ಞಾನಸಾರ	1—0—0
ಶ್ರೇಣಿಕಚರಿತ್ರೆ	0—9—0
ಷೋಡಶಕಾರಣ ಭಾವನ	1—8—0
ಜೈನಧರ್ಮ-ಬಾಲಬೋಧೆ	1—4—0
,,	0—8—0
ಯೋಗಾಮೃತ ಶತಕ	6—0—0
ಯೋಗಸಾರ	0—5—0
ತತ್ತ್ವಾರ್ಥಸೂತ್ರ	0—4—0
ಜಿನಾಕ್ಷರಮಾಲೆ	0—3—0

ಶಾಂತಶೃಂಗಾರ-ವಿಲಾಸ	0—5—0
ಜೈನನಿತ್ಯಪೂಜಾದಿ-ಸಂಗ್ರಹ	0—5—0
ಅಷ್ಟಾಂಗದ ಕಥೆಗಳು	1—0—0
ಸಾಮಾಯಿಕ ಪಾಠ	0—2—9
ಉಪದೇಶರತ್ನಮಾಲಾ	0—2—0
ನನ್ನ ಭಾವನೆ	0—2—0
ಕನ್ನಡಸ್ತೋತ್ರ-ಸಂಗ್ರಹ	0—4—0
ಅನಂತಮತಿ ಚರಿತ್ರೆ	0—4—0
ಜಿನಭಕ್ತಿಸಾರ	0—4—0
ಭವ್ಯಾಮೃತ	0—8—0
ಜಂಬೂಸ್ವಾಮಿಚರಿತ್ರೆ	0—8—0
ಆಹಾರ ದಾನವಿಧಿ	0—2—0
ಮಂಗಳಾರತಿ	0—5—0
ಜ್ಞಾನಸಾರ	0—6—0
ಕಾಲಜ್ಞಾನಪ್ರಕಾಶಿಕಾ	0—8—0
ಧ್ಯಾನಸ್ವರೂಪ	0—6—0
ಆತ್ಮಾನುಶಾಸನ	3—0—0
ಪರಮಾಗಮಸಾರ	0-10—0

ಅಧ್ಯಕ್ಷರು
೧೦೫ ಅತಿಬಲಮಹಾರಾಜರು.

ಪ್ರ॥ ಕಾರ್ಯದರ್ಶಿ
ಎಂ. ಸಿ. ಪದ್ಮನಾಭಶರ್ಮ.

ಧಾರವಾಡ, ಉಪಾಧ್ಯಕ್ಷರು
ಬಿ. ಎಸ್. ಕುಲಕರ್ಣಿ, ಎಂ. ಎ.

ವಿಶಾರದ, ಪ್ರಚಾರಕಾರ್ಯದರ್ಶಿ
ಎಸ್. ಎ. ನೇಮಿಚಂದ್ರಯ್ಯ.